‘ನಾಡಿಗೆ ನಮಸ್ಕಾರ’
ಸಾಹಿತ್ಯ ಸಂಸ್ಕೃತಿ ಚಿಂತನ ಗ್ರಂಥಮಾಲೆ

ಹಳ್ಳಿಗರ ಸಂತೆಯಲ್ಲಿ ‘ಸಂತ’ ವೈದ್ಯ

ಡಾ. ಎಂ. ಬಿ. ಮರಕಿಣಿ



ವಿಶ್ವ ಮರಕಿಣಿ

ಕನ್ನಡ ಸಂಘ ಕಾಂತಾವರ (ರಿ.)

ಕುಸುಮ : ೧೬೯

'ನಾಡಿಗೆ ನಮಸ್ಕಾರ'

ಸಾಹಿತ್ಯ ಸಂಸ್ಕೃತಿ ಚಿಂತನ ಗ್ರಂಥಮಾಲೆ

ಕುಸುಮ : ೧೬೯

ಹಳ್ಳಿಗರ ಸಂತೆಯಲ್ಲಿ 'ಸಂತ' ವೈದ್ಯ

ಡಾ. ಎಂ.ಬಿ.ಮರಕಿಣಿ

ವಿಶ್ವ ಮರಕಿಣಿ

ಕನ್ನಡ ಸಂಘ ಕಾಂತಾವರ (ರಿ.)

ಕಾಂತಾವರ–೫೭೪ ೧೨೯

ಕಾರ್ಕಳ, ಉಡುಪಿ ಜಿಲ್ಲೆ

Halligara Santeyalli Santha Vaidya Dr. M.B. Marakini
A monograph on the Life and Achievements of **Dr. M.B. Marakini**
written by **Vishwa Marakini,** Kanyana (9448059631)
Edited by : **Dr. B.Janardana Bhat,** Belmannu (Mob : 9481145775)

Published by : **Kannada Sangha Kanthavara (R)**
P.O. Kanthavara - 574 129, Karkala, Udupi Dist.
Mobile : 9900701666, 9008978366
Email : kannadasanghakanthavara@gmail.com

Chief Editor
Dr. Na. Mogasale
President, Kannada Sangha Kanthavara (R)

First Impression : 2016 Size : demy 1/8 Paper : 70 GSM Maplitho

Pages : 52

Price : Rs. 45

Cover Design : **Kallur Nagesh**

Page Designed
& Printed at : **Aakrithi Prints**
Light House Hill Road, Mangaluru - 575001
Tel.: 0824 2443002

ಅಧಿಕೃತ
ಮಾರಾಟಗಾರರು : ಶ್ರೀರಾಮ ಪ್ರಕಾಶನ
ನಂ. ೮೯೩/ಡಿ, ೩ನೇ ಕ್ರಾಸ್
ಪೂರ್ವ ಬಡಾವಣೆ, ಚೆಲುವಯ್ಯ ಪಾರ್ಕ್
ನೆಹರು ನಗರ, ಮಂಡ್ಯ-೫೭೧೪೦೧
೯೪೪೮೯೩೦೧೭೩

ಅಧ್ಯಕ್ಷರ ಮಾತು

"ನಾಡಿಗೆ ನಮಸ್ಕಾರ" ಎನ್ನುವುದು ಕಾಂತಾವರ ಕನ್ನಡ ಸಂಘವು ಮೂವತ್ತಕ್ಕೆ ಕಾಲಿಟ್ಟದ್ದನ್ನು ನೆನಪಿಸುವ ಮತ್ತು ಗುರುತಿಸುವ ಗ್ರಂಥಮಾಲೆ. ಆ ಮಾಲೆಯ ಮೂಲಕ ಕನಿಷ್ಠ ಮೂವತ್ತು ಹೊತ್ತಗೆಗಳನ್ನಾದರೂ ಮುಂದಿನ ಮೂರು ವರುಷಗಳಲ್ಲಿ ತರಬೇಕೆನ್ನುವುದು ಆಗ ಇದ್ದ ಸಂಕಲ್ಪ.

ಈ ಮಾಲೆ ಯಾವ ವಿಚಾರಕ್ಕೆ ಒತ್ತುಕೊಡಬೇಕು ಎನ್ನುವಾಗ ಹೊಳೆದದ್ದು ಸಾಹಿತ್ಯಕ ಕೃತಿಗಳ ಬದಲು ಸಾಂಸ್ಕೃತಿಕ ಸ್ವರೂಪದ ಕೃತಿಗಳನ್ನು ಹೊರ ತಂದರೆ ಹೇಗೆ ಎನ್ನುವ ಕನಸು. ಅದು ಸುಸ್ವರೂಪ ಪಡೆದದ್ದು ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ವಿವಿಧ ಕ್ಷೇತ್ರಗಳ ಸಾಧಕರ ಸಾಧನೆಗಳನ್ನು ದಾಖಲಿಸಬೇಕು ಎಂದು. ಸಾಮಾಜಿಕ ನ್ಯಾಯಕ್ಕೆ ಒತ್ತುಕೊಟ್ಟು ನಾವು ನಮ್ಮ ಮಿತಿಗಳ ಒಳಗೆ ಮೂವತ್ತು ಸಾಧಕರನ್ನು ಪರಿಚಯಿಸಿದಾಗ. ಮುಂದೆ ಎದುರಾದದ್ದು ಆರ್ಥಿಕ ಸಂಕಷ್ಟ. ಆಗ ಈ ಮಾಲೆಯನ್ನು ಮುಂದುವರಿಸಬೇಕಾದರೆ ಪ್ರಾಯೋಜಕತ್ವದ ನೆರವು ಬೇಕೆಂಬ ಸತ್ಯದ ಅರಿವು. ಸಾರ್ವಜನಿಕರು ನಮ್ಮ ಜೊತೆ ಅರ್ಥವತ್ತಾಗಿ ಸ್ಪಂದಿಸಿದ್ದರಿಂದ ಮಾಲೆಯಲ್ಲಿ ನೂರು ಹೊತ್ತಗೆಗಳು ಅರಳಿದ್ದು ಸಂಘದ ಸೌಭಾಗ್ಯ. ನಾಡಿನ ಭಾಗ್ಯ.

ಸಂಘವು ನೂರು ಸಾಧಕರನ್ನು ಪರಿಚಯಿಸಿದರೂ ಪರಿಚಯಿಸದೇ ಇರುವವರ ಸಂಖ್ಯೆ ಇದರ ದುಪ್ಪಟ್ಟು ಇರಬಹುದಾದ್ದರಿಂದ ಈಗ ಮತ್ತೆ ಮಾಲೆಯನ್ನು ಮುಂದುವರಿಸುವ ಪ್ರಯತ್ನಕ್ಕೆ ಕೈ ಹಾಕಿದೆ. ಸಾರ್ವಜನಿಕರ ನೆರವು ಚಿಂತಕರ ಒಲವು ಇರುವಷ್ಟು ದಿನ ಮಾಲೆಯೂ ಚಿರಂತನ ಎನ್ನುವುದು ನಮ್ಮ ಭಾವ ಮತ್ತು ಸಂಘದ ಜೀವ.

ಮಾಲೆಯ ಮೊದಲ ನೂರು ಕೃತಿಗಳನ್ನು ಸಂಪಾದಿಸಲು ನೆರವಾದವರು ಹಿರಿಯ ಸಾಹಿತಿ ವಿ.ಗ. ನಾಯಕರು. ನೂರರ ನಂತರ ಹೊತ್ತಗೆಗಳಿಗೆ ಸಂಪಾದಕರಾಗಿ ಒದಗಿ ಬಂದವರು ನಾಡಿನ ಖ್ಯಾತ ಸಾಹಿತಿ ಡಾ.ಬಿ.ಜನಾರ್ದನ ಭಟ್ಟರು.

ಡಾ. ಎಂ.ಬಿ.ಮರಕಿಣಿ ಅವರ ಕೃತಿಯ ಪ್ರಕಟಣೆಗೆ ವಿಶೇಷ ಆಸಕ್ತಿ ತೋರಿಸಿ ನೆರವು ನೀಡಿದವರು ಬೆಂಗಳೂರಿನ ಐ.ಬಿ.ಮರಕಿಣಿ (ಈಶ್ವರ ಭಟ್) ಅವರಿಗೆ ಸಂಘವು ಋಣಿಯಾಗಿದೆ.

ಈ ಎಲ್ಲದರ ಯಶಸ್ಸಿಗೆ ನೆರವು ನೀಡಿದ ಲೇಖಕರ ಕೊಡುಗೆ ಬಹಳ ದೊಡ್ಡದು. ಆಯ್ಕೆ ಸಮಿತಿಯಲ್ಲಿದ್ದು ಸಹಕರಿಸಿದವರೂ ನಮಗೆ ಸದಾ ಮಾನ್ಯರು. ಹೊತ್ತಗೆಯ ಅಂದ ಚಂದಕ್ಕೆ ಕಾರಣರಾದವರು ಶ್ರೀ ಕಲ್ಲೂರು ನಾಗೇಶ ಮತ್ತು ಬಳಗದವರು. ಪ್ರಾಯೋಜಕರಾಗಿ ಒದಗಿಬಂದವರು ಮಾಲೆಯ ಮಹಾ ಪೋಷಕರೂ ಹೌದು, ನಾಡು ನಮಸ್ಕರಿಸಬೇಕಾದವರೂ ಹೌದು.

ಹೀಗೆ ನಾವು ಈ ಮಾಲೆಯ ಮೂಲಕ ನಾಡಿಗೆ ನಮಸ್ಕರಿಸಲು ಕಾರಣರಾದವರೆಲ್ಲ ಇನ್ನೊಂದು ಅರ್ಥದಲ್ಲಿ ನಾವು ನಮಸ್ಕರಿಸಬಹುದಾದ ಅರ್ಥವಂತರು. ಈ ಕಾರಣದಿಂದ 'ನಾಡಿಗೆ ನಮಸ್ಕಾರ' ಎನ್ನುವ ಮಾಲೆಗೆ ಸಾರ್ಥಕ್ಯ ಭಾವ ಇದ್ದರೆ, ಅದರ ಸಾಧನೆಗೆ ಧನ್ಯತೆ ನಮಗೂ ಒದಗಿಬಂದಿರುವುದು ನಮ್ಮ ಪಾಲಿನ ಸಂತೋಷ.

೧ ನವೆಂಬರ್ ೨೦೧೬ — ಡಾ. ನಾ. ಮೊಗಸಾಲೆ

ಸಂಪಾದಕೀಯ

ಕಾಂತಾವರ ಕನ್ನಡ ಸಂಘದ ಮಹತ್ವದ ಯೋಜನೆ 'ನಾಡಿಗೆ ನಮಸ್ಕಾರ' ಶತಮಾನೋತ್ತರ ಕೃತಿ ಮಾಲೆಯ ಸಂಪಾದಕತ್ವವನ್ನು ಕನ್ನಡ ಸಂಘದ ಅಧ್ಯಕ್ಷರಾದ ಡಾ. ನಾ. ಮೊಗಸಾಲೆ ಯವರು ನನಗೆ ವಹಿಸಿದ್ದಾರೆ.

ಒಂದು ಪ್ರದೇಶದ ಬದುಕು ಸುಸಂಸ್ಕೃತವೆನಿಸಿಕೊಳ್ಳಬೇಕಾದರೆ ಅಲ್ಲಿನ ಪ್ರತಿಭಾವಂತ ಪ್ರಜೆಗಳು ವಿವಿಧ ಕ್ಷೇತ್ರಗಳಲ್ಲಿ ಸಮಾಜದ ಒಳಿತಿಗಾಗಿ ದುಡಿಯಬೇಕಾಗುತ್ತದೆ. 'ಹೊಟ್ಟೆಯೇ ಕೇಂದ್ರವಾಗಿದೆ ನರನ ಜೀವಿತಕ್ಕೆ' ಎಂಬಂತಹ ಪರಿಸ್ಥಿತಿ ಇದ್ದಾಗ ಇಂತಹ ಸಂಸ್ಕೃತಿ ಬೆಳೆಯಲಾರದು. ಗ್ರೀಕ್ ಚಿಂತಕ ಲಾಂಜೈನಸ್‌ನ ವಿಚಾರಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು: ರಾಜ ಪ್ರಭುತ್ವದಡಿ ಸ್ವಾತಂತ್ರ್ಯ ಇಲ್ಲದ ಕಾರಣ ಪ್ರತಿಭೆ ಮುರುಟಿ ಹೋಗುತ್ತದೆ. ಪ್ರಜಾಪ್ರಭುತ್ವದಲ್ಲಿ ಸೃಷ್ಟಿಕಾರ್ಯ ಪ್ರಗತಿಪಥದಲ್ಲಿ ಸಾಗುತ್ತದೆ ಎನ್ನುವ ಮಾತುಗಳನ್ನು ಒಪ್ಪದೆ ಅವನು ಜನರ ನೈತಿಕ ಅಧಃಪತನದಲ್ಲಿ ಪ್ರತಿಭೆಯ ಅವನತಿ ಮತ್ತು ದುರ್ಗತಿಗೆ ಕಾರಣವನ್ನು ಗುರುತಿಸುತ್ತಾನೆ. ಧನಲೋಭ, ಭ್ರಷ್ಟಾಚಾರ, ಸುಖಲೋಲುಪತೆ, ಸ್ವಾರ್ಥಗಳ ಪರಿಣಾಮವಾಗಿ ಹುಟ್ಟಿಕೊಳ್ಳುವ ನಿರ್ಲಜ್ಜ ಮನೋವೃತ್ತಿ, ಆದರ್ಶ ವಿಮುಖತೆ ಇವುಗಳಿಂದಾಗಿ ಆತ್ಮಶಕ್ತಿ ಕುಗ್ಗಿಸಿಕೊಂಡ ಒಂದು ಜನಾಂಗದಲ್ಲಿ ಸಂಸ್ಕೃತಿ ದೊಡ್ಡದಾಗಿ ಬೆಳೆಯಲಾರದು ಎನ್ನುವುದು ಅವನ ಅಭಿಪ್ರಾಯ. ನಮ್ಮ ನಾಡಿನಲ್ಲಿ ಹಾಗಾಗದ ಹಾಗೆ ಸದಾ ಎಚ್ಚರವಾಗಿರಬೇಕಾದುದು ಅಗತ್ಯ. ಜನರಲ್ಲಿ ಆದರ್ಶಗಳನ್ನು ಬಿತ್ತಬೇಕಾದುದೂ ಅಗತ್ಯ. ಇಂತಹ ಮಹತ್ಕಾರ್ಯಕ್ಕೆ ಕಾಂತಾವರ ಕನ್ನಡ ಸಂಘ ತನ್ನ ಕಿಂಚಿತ್ ಕಾಣಿಕೆ ಸಲ್ಲಿಸುತ್ತಲೇ ಬಂದಿದೆ. 'ನಾಡಿಗೆ ನಮಸ್ಕಾರ' ಪುಸ್ತಕ ಮಾಲೆ ಅಂತಹ ಒಂದು ಕಾಣಿಕೆ.

ನಮ್ಮ ದಕ್ಷಿಣಕನ್ನಡ (ಉಡುಪಿ ಮತ್ತು ಕಾಸರಗೋಡು ಸೇರಿದ ಅವಿಭಜಿತ ಜಿಲ್ಲೆ) ಧಾರ್ಮಿಕ, ನೈತಿಕ, ಸಾಹಿತ್ಯಿಕ, ಸಾಂಸ್ಕೃತಿಕ ಅಧಃಪತನವಾಗದಂತೆ ಸದಾ ಎಚ್ಚರಿಕೆಯಿಂದಿರುವ ಒಂದು ನಾಡು. ಇಲ್ಲಿನ ಬಹುಮುಖೀ ಸಂಸ್ಕೃತಿಯ ನಿರ್ಮಾಣಕ್ಕಾಗಿ ದುಡಿದು ಕೀರ್ತಿಶೇಷ ರಾಗಿರುವ ಮತ್ತು ಈಗಲೂ ನಮ್ಮ ನಡುವೆ ಇರುವ ವಿದ್ವಾಂಸರು, ಚಿಂತಕರು, ಸಾಹಿತಿಗಳು, ಯಕ್ಷಗಾನ ಸಾಹಿತಿಗಳು ಹಾಗೂ ಕಲಾವಿದರು, ವರ್ಣಚಿತ್ರ ಕಲಾವಿದರು, ಶಿಲ್ಪಿಗಳು, ದಾರುಶಿಲ್ಪಿಗಳು, ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುವ ಸಮಾಜಸೇವಕರು, ಶಿಕ್ಷಕರು, ಅಭಿವೃದ್ಧಿಯ ಹರಿಕಾರರು, ಕೃಷಿ ಋಷಿಗಳು, ವೈದ್ಯರು ಮುಂತಾದವರ ಸಾಧನೆಗಳನ್ನು ದಾಖಲಿಸುವುದು ಸಮಾಜದ ಕರ್ತವ್ಯ. ಮುಂದೆ ಅಧ್ಯಯನ ಕಾರ್ಯಗಳನ್ನು ಕೈಗೊಳ್ಳುವವರಿಗೆ ಒಂದು ಮಾಹಿತಿ ಕೋಶವಾಗಿಯೂ ಈ ಮಾಲೆಯ ಪುಸ್ತಕಗಳು ಒದಗಿಬರಲಿವೆ.

ಹಳ್ಳಿಗರ ಸಂತೆಯಲ್ಲಿ 'ಸಂತ' ವೈದ್ಯ ಡಾ.ಎಂ.ಬಿ.ಮರಕಿಣಿ ಅವರ ಕುರಿತಾದ ಈ ಕೃತಿಯನ್ನು ಬರೆದುಕೊಟ್ಟು ಮಾಲೆಯ ಮಹತ್ವವನ್ನು ಹೆಚ್ಚಿಸಿದ ಡಾ.ವಿಶ್ವ ಮರಕಿಣಿ ಅವರಿಗೆ ಸಂಘವು ಋಣಿಯಾಗಿದೆ.

೧ ನವೆಂಬರ್ ೨೦೧೬ — ಡಾ. ಬಿ. ಜನಾರ್ದನ ಭಟ್

ಹಳ್ಳಿಗರ ಸಂತೆಯಲ್ಲಿ 'ಸಂತ' ವೈದ್ಯ
ಡಾ. ಎಂ.ಬಿ. ಮರಕಿಣಿ

ದೊರೆಗಳೆದುರು ದಾಕುದಾರ

೨.೯.೧೯೭೭ ಹಿಂದಿನ ಆಂಧ್ರಪ್ರದೇಶದ ಇಂದಿನ ತೆಲಂಗಾಣದ ತೀರ ಹಿಂದುಳಿದ ಒಂದು ಹಳ್ಳಿ ಪಡಕ್ಕಲ್. ಗ್ರಾಮಪಂಚಾಯತಿಯ ಕಟ್ಟಡವೊಂದರಲ್ಲಿ ಸಾಮಾಜಿಕ ಆರೋಗ್ಯ ಕೇಂದ್ರವೊಂದರ ಉದ್ಘಾಟನೆ. ಸ್ಥಳೀಯ 'ದೊರೆ' ನರಹರಿರೆಡ್ಡಿಯವರು ಕಿಟ್‌ಬ್ಯಾಗ್‌ವೊಂದರಿಂದ ಸ್ಟೆತೋಸ್ಕೋಪನ್ನು ತೆಗೆದು ಡಾ. ಎಂ.ಬಿ. ಮರಕಿಣಿಯವರಿಗೆ ಕೊಡುವ ಮೂಲಕ "ಇನ್ನು ಎಲ್ಲರಿಗೂ ಪಡಕ್ಕಲ್ಲಿನಲ್ಲಿಯೇ ಚಿಕಿತ್ಸೆ ದೊರಕುತ್ತದೆ" ಎಂದು ಕ್ಲಿನಿಕ್ಕಿನ ಶುಭಾರಂಭಗೈದರು.

ಪಡಕ್ಕಲ್ ಒಣ ಭೂಮಿಯಿಂದ ಕೂಡಿದ ಗುಡ್ಡಗಾಡುಪ್ರದೇಶ. ಕೆಲವೇ ಮಂದಿ ಶ್ರೀಮಂತರ ವಶದಲ್ಲಿ ಹೆಚ್ಚಿನ ಭೂಮಿ. ತಾರಸಿ ಮನೆಗಳಲ್ಲಿ ವಾಸಿಸುತ್ತಿದ್ದ ಅವರನ್ನು ಬಡವರೆಲ್ಲ ಸಂಬೋಧಿಸುವುದು ರೆಡ್ಡಿಗಾರು ದೊರಾ, ಪಟೇಲುವಾಳ್ಳು, ದಣೀ........ ಎಂತಲೇ. ನೆತ್ತರನ್ನೇ ಬೆವರಾಗಿ ಸುರಿಸಿ ಸಿರಿವಂತರ ಜಮೀನುಗಳಲ್ಲಿ ದುಡಿಯುವರು ಬಡ ಜೋಪಡಿವಾಸಿಗಳು. ಅವರು 'ದೊರೆ'ಗಳ ಮುಂದೆ ಕೈ ಕಟ್ಟಿ, ಬೆನ್ನು ಬಾಗಿಸಿ ನಿಲ್ಲಬೇಕಾಗಿತ್ತು. ಹೆಂಗಸರೂ ಕೂಡಾ ಅವರ ಬಂಗಲೆಯನ್ನು ಹಾದುಹೋಗುವಾಗ ತಲೆಯ ಮೇಲೆ ಕೈ ಎತ್ತಿ ಹಿಡಿದೇ ಸಾಗಬೇಕಾಗಿತ್ತು. ಎಲ್ಲ ರೀತಿಯ ಶೋಷಣೆಯ ಸುಳಿಯಲ್ಲಿ ಬಡವರನ್ನು ನಿರಂತರವಾಗಿ ಸಿಲುಕಿಸಿ ನೆಲ–ಹೊಲ, ಧನ–ಧಾನ್ಯ, ವಿದ್ಯೆ – ಅಧಿಕಾರ, ಸ್ಥಾನ – ಮಾನಗಳೆಲ್ಲವನ್ನು ತಮ್ಮಲ್ಲೇ ಕೇಂದ್ರೀಕರಿಸಿ ಕೊಂಡಿದ್ದವರು ಅಲ್ಲಿನ ಅನಭಿಷಿಕ್ತ 'ದೊರೆ' ಗಳು.

ಇಂಥ 'ದೊರೆ'ಗಳೊಬ್ಬರಿಂದ ಉದ್ಘಾಟಿಸಲ್ಪಟ್ಟ, ಆದರೆ 'ಅವೇರ್' ಎಂಬ ಹೆಸರಿನ ಹೈದರಾಬಾದ್ ಮೂಲದ ಸ್ವಯಂ ಸೇವಾಸಂಸ್ಥೆಯೊಂದರಿಂದ ನಿರ್ವಹಿಸಲ್ಪಡುವ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾಗಿ ಡಾ.ಎಂ.ಬಿ. ಮರಕಿಣಿ ಕೆಲಸ ಪ್ರಾರಂಭಿಸಿದರು. ಅವರ ವಾಸ್ತವ್ಯದ ವ್ಯವಸ್ಥೆಯೂ ದೊರೆಗಳ ಬಂಗ್ಲೆಯಲ್ಲಿಯೇ ಆಗಿತ್ತು. ಹೇಗಿದ್ದರೂ ದೊರೆಗಳು ಹೈದರಾಬಾದ್‌ನಲ್ಲಿ ಖಾಯಂ ವಾಸವಾಗಿದ್ದು ವಾರಕ್ಕೊಮ್ಮೆ–ತಿಂಗಳಿಗೊಮ್ಮೆ ಪಡಕ್ಕಲ್ಲಿಗೆ ಬಂದು ಹೋಗುವವರಾಗಿದ್ದರು. ಡಾ. ಮರಕಿಣಿ ತೀರ ಕಡಿಮೆ ಪ್ರಮಾಣದಲ್ಲಿ ಔಷಧಿಯ ವೆಚ್ಚವನ್ನು ಮಾತ್ರ ಪಡೆದುಕೊಂಡು ಕ್ಲಿನಿಕ್ಕಿನ ಕರ್ತವ್ಯ ನಿರ್ವಹಿಸತೊಡಗಿದರು.

ಎಂಟ್ಹತ್ತು ದಿವಸಗಳ ಬಳಿಕ 'ದೊರೆ' ಮತ್ತೊಮ್ಮೆ ಹೈದರಾಬಾದಿನಿಂದ ಪಡಕ್ಕಲ್ಲಿಗೆ ಬಂದಿಳಿದರು–'ದೊರೆಸಾನಿ' ಸಹಿತರಾಗಿ! ಬಂಗಲೆಯಲ್ಲಿ ಅಘೋಷಿತ ದರ್ಬಾರು ಪ್ರಾರಂಭವಾಯಿತು. "ಆಸ್ಪತ್ರೆಯಲ್ಲಿ ಡಾಕ್ಟ್ರು ಹಣ ತೆಗೆದುಕೊಳ್ಳುತ್ತಾರೆ" ಎಂಬ ಅಪಸ್ವರ

ಕೇಳಿ ಬಂದಾಗ ತುರ್ತುಕರೆ–"ತಕ್ಷಣ ಬರಲಿಕ್ಕೆ ಹೇಳಿ ಆ ಡಾಕ್ಟ್ರನ್ನು" ಅಂತ ಡಾ.ಮರಕಿಣಿ ಯವರಿಗೆ ಸಮನ್ಸ್! ಡಾಕ್ಟ್ರು ಗಡಿಬಿಡಿ ಮಾಡಲಿಲ್ಲ. ಬಂದಿದ್ದ ಎಲ್ಲ ರೋಗಿಗಳನ್ನು ಪರೀಕ್ಷಿಸಿ ಕಳುಹಿಸಿದ ಬಳಿಕವಷ್ಟೇ ಅವರು ಆ ಕಡೆಗೆ ತೆರಳಿದ್ದು.

'ದೊರೆ'ಯ ದರ್ಬಾರನ್ನು ಪ್ರವೇಶಿಸಿದ ಡಾಕ್ಟ್ರು ಸೀದಾ ಮಂಚದಲ್ಲಿ ದೊರೆಯ ಪಕ್ಕವೇ ಹೋಗಿ ಕುಳಿತರು. "ಎಲಾ ಇವನ! ದೊರೆಗಳ ಬಳಿಯಲ್ಲಿಯೇ ಅವರಿಗೆ ಸರಿಯೆಂಬಂತೆ ಕೂರುವುದೆಂದರೇನು?" ಎಂಬ ಆಶ್ಚರ್ಯ ಅಲ್ಲಿದ್ದವರ ಮುಖದಲ್ಲಿ!

"ಹೇಗಿದೆ ಪಡಕ್ಕಲ್ ಕ್ಲಿನಿಕ್?" ದೊರೆಯ ಮೊದಲನೆಯ ಪ್ರಶ್ನೆ.

"ತಕ್ಕಮಟ್ಟಿಗೆ ಚೆನ್ನಾಗಿ ನಡೆದಿದೆ. ಹತ್ತಿರದ ಹಳ್ಳಿಗಳಿಂದಲೂ ಜನ ಬರ್ತಿದ್ದಾರೆ" ಡಾಕ್ಟರರ ಉತ್ತರ.

"ಪಾಪ ಬಡವರು, ಇನ್ನೆಲ್ಲಿ ಹೋಗ್ತಾರೆ?... ಹಣ ತೆಕ್ಕೊಳ್ತಿದ್ದೀರಂತೆ ನೀವು!" ಧ್ವನಿಯಲ್ಲಿ ಸ್ವಲ್ಪ ಗಡುಸುತನ ಇಣುಕಿತ್ತು.

"ಬಹಳ ಕಮ್ಮಿ ಚಾರ್ಜ್, ಔಷಧಿಖರ್ಚು ದಿನಕ್ಕೆ ಅರ್ಧರೂಪಾಯಿ; ಇಂಜೆಕ್ಷನ್ ಕೊಟ್ಟಿದ್ದರೆ ಎರಡು ರೂಪಾಯಿ ಅಷ್ಟೇ."

"ಅವರೆಲ್ಲ ಬಡವರು. ಪಾಪ, ಊಟಕ್ಕೆ ಗತಿಯಿಲ್ಲದವರು. ಅವರಿಂದ ಹಣ ವಸೂಲಿ ಅಂದ್ರೆ?" ಧ್ವನಿಯಲ್ಲಿ ಈಗ ಪೂರ್ತಿ ಆಕ್ಷೇಪಣೆ.

"ದುಡ್ಡು ತೆಗೆದುಕೊಂಡು ಔಷಧಿಕೊಡಲಿಕ್ಕೆ ಅಂತ ನಿಮ್ಮನ್ನು ಇಲ್ಲಿಗೆ ಕರೆಸಿದ್ದ? ಫಾರಿನ್ ಫಂಡ್ಸ್ ಬರ್ತಿದೆ... ಫ್ರೀ ಟ್ರೀಟ್‌ಮೆಂಟ್ ಮಾಡುವುದು ಬಿಟ್ಟು...."

"ಖರ್ಚಿನಲ್ಲಿ ನಾಲ್ಕಾಣೆ ಭಾಗ ಜನರಿಂದ ತಗೋತಿರಲಿ ಅಂತ ಶರ್ತ ಹಾಕಿದ್ದಾರೆ, ಆಸ್ಟ್ರೇಲಿಯದ ಆ ಸೊಸೈಟಿಯವರು, ಅದಕ್ಕೆ..."

"ಡಾಕ್ಟರ್, ಇದು ಆಸ್ಟ್ರೇಲಿಯಾ ಅಲ್ಲ, ಪಡಕ್ಕಲ್ ಡಾಕ್ಟರ್ ಪಡಕ್ಕಲ್! ಇಲ್ಲಿ ನೋಡಿ, ನಾವು ತೀರ್ಮಾನ ಮಾಡಿದ್ದು ನಡೆಯುತ್ತೆ... ಅವೇರ್ – ಪಿವೇರು ಏನಿಲ್ಲ. ನೀವು ಫ್ರೀ ಟೀಟ್‌ಮೆಂಟ್ ಕೊಡ್ಬೇಕು, ಅಷ್ಟೆ" ದೊರೆಗಳು ಅಂತಿಮವೆಂಬಂತೆ ನುಡಿದು ಒಳಗಡೆ ಹೋದರು. ಡಾಕ್ಟ್ರು ಕ್ಲಿನಿಕ್ಕಿನತ್ತ ಹೆಜ್ಜೆ ಎತ್ತಿಟ್ಟರು.

ಸಂಜೆ ದೊರೆ ದೊರೆಸಾನಿ ಸಹಿತ ಹೈದರಾಬಾದ್‌ಗೆ ಬಸ್ ಹತ್ತಿದರು. ಡಾಕ್ಟ್ರು ಕ್ಲಿನಿಕ್ ಮುಗಿಸಿ ವಾಸ್ತವ್ಯದ ಕೋಣೆಗೆ ಬಂದು ನೋಡಿದರೆ ಅವರ ಹಾಸಿಗೆ, ಬಟ್ಟೆಗಳ ಸುರುಳಿಯನ್ನು ಟ್ರಂಕಿನ ಜತೆಗೆ ಹೊರಗಿನ ಕಟ್ಟೆಯ ಮೇಲೆ ಎಸೆಯಲಾಗಿತ್ತು!

ಸಾವಧಾನದಿಂದ ಡಾಕ್ಟ್ರು ತಮ್ಮ ಕಂಪೌಂಡರ್ ಸಹಾಯದಿಂದ ಅವೆಲ್ಲವನ್ನು ಎತ್ತಿ ತಂದು ಕ್ಲಿನಿಕ್ ಕೊಠಡಿಯಲ್ಲಿಯೇ ಆ ರಾತ್ರಿ ಕಳೆದು, ಮರುದಿನ ಯಾವುದೇ ಸರಕಾರಿ ಕಟ್ಟಡವನ್ನು ರಿಪೇರಿ ಮಾಡಿಸಿ ಅಲ್ಲಿಗೆ ವಾಸ್ತವ್ಯ ಬದಲಾಯಿಸಿದರು. ಕೈ ಅಡಿಗೆ ಪ್ರಾರಂಭಿಸಿ ಅನ್ನ–ಸಾರು ಮಾಡಿಕೊಂಡು ಜೀವಿಸಲಾರಂಭಿಸಿದರು. "ದೊರೆ ಮಾತಿಗೆ ಎದುರುತ್ತರ ಹೇಳಿದ ಈ ಡಾಕ್ಟರ್‌ನ ಗ್ರಹಚಾರ ಕೆಟ್ಟದೆ. ಇಲ್ಲಿ ಎಷ್ಟು ದಿನ ಇರುತ್ತಾನೋ ಏನೋ" ಅಂತೆಲ್ಲ ಊರಲ್ಲಿ ಕೆಲವು ಮಂದಿ ಆಡಿಕೊಳ್ಳುತ್ತಿರುವುದಾಗಿ ಡಾಕ್ಟ್ರಿಗೆ ಸುದ್ದಿ ಬಂತು.

ಆದರೆ ಡಾಕ್ಟ್ರ ಸುಮ್ಮನೆ ಕೂರುವವರಾಗಿರಲಿಲ್ಲ! ಒಂದಷ್ಟು ಮಂದಿ ಯುವಜನರ ತಂಡವನ್ನು ಸಿದ್ಧಪಡಿಸಿ ಗ್ರಾಮ ಪ್ರವಾಸ ನಡೆಸಿದರು. ಹೊರಗಡೆ ಇರುವ ಲಂಬಾಣಿ ತಾಂಡಾಗಳನ್ನೂ ಸಂಪರ್ಕಿಸಿ, ಮೊದಲನೆಯ ಹಂತವಾಗಿ ಶಾಲೆಯೇ ಇಲ್ಲದಿದ್ದ ಊರಿನಲ್ಲಿ ಪುಟ್ಟ ಶಾಲೆಯನ್ನು ತೆರೆದರು! ಸಿಲಾರ್‌ಪುರ ತಾಂಡಾ, ಮಾದರಂ ತಾಂಡಾ – ಹೀಗೆ ಕೆಲವು ದೊಡ್ಡ ತಾಂಡಾಗಳಲ್ಲಿನ ಶಾಲಾ ವಯಸ್ಸಿನ ೨೫–೩೦ ಮಕ್ಕಳನ್ನು ಸೇರಿಸಿ 'ಸಾಲಿ' ಪ್ರಾರಂಭ ಮಾಡಿಸಿಬಿಟ್ಟರು! ಪಾಠ ಹೇಳಲು ತಕ್ಷಣಕ್ಕೆ ಡಾಕ್ಟ್ರ ತಂಡದ ಉತ್ಸಾಹೀ ಯುವಪಡೆಯೇ ಮುಂದಾಯಿತು! ಮಕ್ಕಳ ಜತೆ ಅಕ್ಷರ ಕಲಿಕೆಗೆ ಲಂಬಾಣಿ ಮಹಿಳೆಯರೂ ಆಸಕ್ತಿ ತೋರಿಸಿದರು. ಪರಿಣಾಮ ಮುಂದಿನ ಅಸೆಂಬ್ಲಿ ಚುನಾವಣೆಯ ಸಂದರ್ಭ ಎದ್ದು ಕಂಡಿತು! ಮತದಾನ ಮಾಡುವಾಗ ಹೆಬ್ಬೆಟ್ಟು ಒತ್ತುತ್ತಿದ್ದ ಒಂದಷ್ಟು ಮಂದಿ ಲಂಬಾಣಿ ಮಹಿಳೆಯರು ಈ ಬಾರಿ ಪೆನ್ನು ಕೇಳಿ ಪಡೆದು ಸಹಿ ಮಾಡಿದಾಗ ಅಧಿಕಾರಿಗಳಿಗೆಲ್ಲ ಆಶ್ಚರ್ಯ! 'ಲಂಬಾಣಮ್ಮ'ಗಳ ಸಹಿ ಮಾಡುವಿಕೆ ಸುತ್ತು ಮುತ್ತಲೆಲ್ಲ ದೊಡ್ಡ ಸುದ್ದಿಯಾಗಿ ಪ್ರಚಾರವಾಯಿತು!

ಅಲ್ಲಿನ ಹರಿಜನ–ಗಿರಿಜನರು ಲಂಬಾಣಿ ಜನರು ಬೇರೆ ಬೇರೆಯಾಗಿ ವಾಸಿಸುತ್ತಿದ್ದರೇ ಹೊರತು ಒಂದುಗೂಡುವ, ಒಂದುಗೂಡಿಸುವ ಪ್ರಯತ್ನ ಅದುವರೆಗೆ ನಡೆದಿರಲೇ ಇಲ್ಲ. ಡಾ.ಮರಕಿಣಿ ಆ ಕೆಲಸಕ್ಕೆ ಕೈ ಹಾಕಿದರು. ಯುವ ಸಮಾವೇಶವೊಂದನ್ನು ಏರ್ಪಡಿಸಲು ಸಿದ್ಧತೆ ನಡೆಸತೊಡಗಿದರು. ಸುದ್ದಿ ತಿಳಿದ 'ದೊರೆ'ಗಳು ನೇರವಾಗಿ ಆಸ್ಪತ್ರೆಗೆ ಬಂದು, "ಡಾಕ್ಟರ್, ನೀವು ರೋಗಿಗಳಿಗೆ ಔಷಧಿ ಕೊಡಿ. ಅದು ಬಿಟ್ಟು ಸಭೆ–ಸಂಘಟನೆ ಅಂತ ಕೈ ಹಾಕುವುದು ಬೇಡ. ಅದು ನಿಮ್ಮ ಕೆಲಸವಲ್ಲ" ಎಂದು ತಿಳಿಹೇಳಿದರು! ಇದನ್ನು ಕೇಳಿದ ಡಾಕ್ಟ್ರ ಶಿಷ್ಯರು ಇನ್ನಷ್ಟು ಹುರುಪಿನಿಂದ ಕಾರ್ಯನಿರತರಾದರು. ಪಡಕ್ಕಲ್ ಸುತ್ತುಮುತ್ತಲ ಹಳ್ಳಿಗಳು ಮತ್ತು ತಾಂಡಾಗಳಿಂದ ಜನರು ಬಂದು ಸೇರಿ, ರಾಜಕೀಯದ ಒಂದು ಶಬ್ದವೂ ಬಾರದಂತೆ, ಕೇವಲ ಆರೋಗ್ಯ, ಶಿಕ್ಷಣ, ಉಪವೃತ್ತಿಗಳು – ಇತ್ಯಾದಿ ವಿಚಾರಗಳ ಬಗ್ಗೆ ಸರಕಾರಿ ಇಲಾಖೆಗಳ ಅಧಿಕಾರಿಗಳೇ ಬಂದು ಮಾಹಿತಿ ನೀಡುವ ಭಾಷಣ ಮಾಡುವುದರೊಂದಿಗೆ ಅಭೂತಪೂರ್ವ ಯಶಸ್ಸಿನ ಆ ಕಾರ್ಯಕ್ರಮ ಸಂಪನ್ನವಾಯಿತು.

ಇದೀಗ 'ಪೆದ್ದ ಪಟೇಲರ' (ದೊಡ್ಡ ಪಟೇಲರ–ತೆಲುಗಿನಲ್ಲಿ) ಕಣ್ಣು ಕೆಂಪಾಯಿತು. "ತಿಂಗಳ ಕೊನೇ ತಾರೀಕು ಸಂಬಳ ತೆಗೆದುಕೊಂಡು ಹೈದರಾಬಾದಿನಿಂದ ಸೀದಾ ನಿಮ್ಮೂರಿಗೆ ಹೋಗಿ ಬಿಡಿ–ನಿಮ್ಮ ವಸ್ತುಗಳನ್ನು ರೈಲ್ವೇ ಪಾರ್ಸೆಲ್ ಮಾಡಿ ಕಳಿಸ್ತೇವೆ" ಎಂದು ಎಂ.ಎಲ್.ಎ. ಆಪ್ತನೊಬ್ಬನ ಮುಖಾಂತರ ಹೇಳಿ ಕಳುಹಿಸಿದರು. "ರೋಗಿಗಳು ಎಲ್ಲಿ ತನಕ ಚಿಕಿತ್ಸೆಗೆ ಬರುತ್ತಾರೋ ಅಲ್ಲಿ ತನಕ ಔಷಧೋಪಚಾರ ಮಾಡುತ್ತಿರುತ್ತೇನೆ. ಅಷ್ಟೇ ಅಲ್ಲದೆ ನಮ್ಮ ಖರ್ಚುವೆಚ್ಚಗಳ ಹಣ ಕೊಡುವುದು ನಿಮ್ಮ ದಣಿಗಳಲ್ಲ ಎಂಬುದಾಗಿ ನಿಮ್ಮ ದೊರೆಗೆ ನೆನಪಿರಲಿ" ಎಂದು ಎದುರುತ್ತರ ಹೇಳಿ ಕಳುಹಿಸಿದರು ಡಾ.ಮರಕಿಣಿ.

ಎಂ.ಎಲ್.ಎ. ಸಾಹೇಬರು ಮುಂದಿನ ವಿಧಾನಸಭಾ ಅಧಿವೇಶನದಲ್ಲಿ "ವಿದೇಶೀ ದೇಣಿಗೆಯ ಹಣವನ್ನು ಅವೇರ್ ಸಂಸ್ಥೆಯವರು ದುರುಪಯೋಗ ಮಾಡಿಕೊಂಡಿದ್ದಾರೆ....

ಪಡಕ್ಕಲ್ ಡಾಕ್ಟ್ರು ಒಂದು ಗುಳಿಗೆಗೂ ರೂಪಾಯಿ ಎರಡರಷ್ಟನ್ನು ಬಡಜನರಿಂದ ವಸೂಲಿ ಮಾಡ್ತಾರೆ... ಇದನ್ನು ಬಹಿಷ್ಕರಿಸಿ ಆ ಸಂಸ್ಥೆಯವರನ್ನು ಗಡೀಪಾರು ಮಾಡಬೇಕು.. ಅವರ ಅವ್ಯವಹಾರಗಳನ್ನೆಲ್ಲ ತನಿಖೆ ಮಾಡಬೇಕು..." ಎಂದು ಬೊಬ್ಬೆ ಹೊಡೆದು ಸರಕಾರ ತನಿಖಾ ಸಮಿತಿಯೊಂದನ್ನು ರಚಿಸುವಂತೆ ಮಾಡಿದರು. ಆದರೆ ಅವೇರ್ ಸಂಸ್ಥೆಯವರು ಕೂಡಲೇ "ಈ ವಿಚಾರಣಾ ಸಮಿತಿಯ ನೇಮಕವನ್ನು ನಾವು ಸ್ವಾಗತಿಸುತ್ತೇವೆ. ಘಟನಾವಳಿಗಳ ಸತ್ಯಾಸತ್ಯತೆ ಹೊರ ಬೀಳಲಿ" ಎಂದು ಹೈದರಾಬಾದಿನ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಜಾಹೀರಾತು ರೂಪದ ಹೇಳಿಕೆ ನೀಡಿದರು. ತನಿಖಾ ಸಮಿತಿಯ ಮುಂದೆ ಸಂಸ್ಥೆಯವರು ಎಲ್ಲ ಸತ್ಯಾಂಶಗಳನ್ನು ಲೆಕ್ಕಪತ್ರಗಳನ್ನೂ ಬಿಡಿಸಿಟ್ಟರು. ವಿದೇಶೀ ಶಿಕ್ಷಣದ ಸರ್ಟಿಫಿಕೇಟನ್ನು ನೋಡಿದ ಸಮಿತಿಯವರು ಡಾ. ಮರಕಿಣಿಯವರನ್ನು, "ಇಷ್ಟೆಲ್ಲ ಓದಿಕೊಂಡವರು ಈ ಹಳ್ಳಿ ಕ್ಲಿನಿಕ್‌ನಲ್ಲಿ ಯಾಕಿದ್ದೀರಿ?" ಎಂದು ಪ್ರಶ್ನಿಸಿ ವಾಸ್ತವವನ್ನು ತಿಳಿದುಕೊಂಡರು. ಡಾಕ್ಟ್ರರ ಪ್ರಾಮಾಣಿಕವಾದ ಸಮಾಜಸೇವಾ ಪ್ರವೃತ್ತಿಯ ದರ್ಶನ ಅವರಿಗಾಯಿತು. ಆ ಸಮಿತಿಯು ವರದಿ ಸಲ್ಲಿಸಿದ ಬಳಿಕ ಎಂ. ಎಲ್.ಎ. ಸಾಹೇಬರ ಕಿರುಕುಳವೂ ನಿಂತು ಹೋಯಿತು.

ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ 'ದೊರೆ' ಗುಂಪಿನವರು ಉಮೇದುವಾರರಾಗಿ ಭಾರೀ ಸೋಲನ್ನು ಅನುಭವಿಸಿದರು. 'ಪೆದ್ದ ಪಟೇಲ'ರು ವಿಧಾನಸಭೆಯ ಉಸಾಬರಿಯೇ ಬೇಡವೆಂದು ರಾಜ್ಯಸಭೆಯ ಸದಸ್ಯತ್ವವನ್ನು ಗಿಟ್ಟಿಸಿಕೊಂಡು ವಾಸಸ್ಥಾನವನ್ನೇ ದೆಹಲಿಗೆ ವರ್ಗಾಯಿಸಿಕೊಂಡರು!

*****

ಒಮ್ಮೆ ಲಂಬಾಣಿ ಜನಾಂಗದ ಓರ್ವ ನಾಯಕನೂ, ಒಳ್ಳೆಯ ಸೇವಾಕಾರ್ಯಕರ್ತನೂ ಆಗಿದ್ದ ಬಕ್ಯಾ ನಾಯಕನಿಗೆ ಕಡ್ತಾಲ್‌ನಲ್ಲಿ ಹಾಡಹಗಲಲ್ಲೇ 'ಪಟೇಲ್‌ವಾಳು' ಏನೋ ಕುಂಟುನೆವ ತೆಗೆದು ತಮ್ಮ ಚೇಲಾಗಳಾದ ಕಾಡಿಗಳಿಂದ ಹೊಡೆದು ಗಾಯಗಳಾಗುವಂತೆ ಮಾಡಿದರು. ಸುದ್ದಿ ತಿಳಿದ ತಾಂಡಾಗಳ ನಾಯಕರು ರಕ್ತದೋಕುಳಿಯಲ್ಲಿ ಬಿದ್ದಿದ್ದ ಬಕ್ಯಾನಿಗೆ ಚಿಕಿತ್ಸೆಯ ವ್ಯವಸ್ಥೆಯನ್ನು ಮಾಡಿ ಅವನನ್ನು ತಾಂಡಾಕ್ಕೆ ಸೇರಿಸಿದರು.

ಮರುದಿನ ಅವರೆಲ್ಲ ಒಂದುಗೂಡಿ ಸಭೆಸೇರಿ 'ದೊರೆ'ಗೆ ಈ ಬಾರಿ ತಕ್ಕ ಪಾಠ ಕಲಿಸಲೇಬೇಕೆಂಬ ನಿರ್ಧಾರಕ್ಕೆ ಬಂದರು. ಇನ್ನೆರಡು ದಿನಗಳಲ್ಲಿ ಮಾರಾಮಾರಿ ನಡೆಸಿ ದೊರೆ ಗುಂಪಿನವರಿಗೆ ತಕ್ಕ 'ಶಾಸ್ತಿ' ಮಾಡಬೇಕೆಂಬ ನಿಶ್ಚಯಕ್ಕೆ ಬಂದ ಬಳಿಕ, ಹಿರಿಯ ಸಕ್ರೂ ನಾಯಕನ ಸಲಹೆಯಂತೆ "ಯಾವುದಕ್ಕೂ ಒಂದು ಮಾತು ಡಾಕ್ಟ್ರಲ್ಲಿ ಹೇಳಿ ಬಿಡೋಣ" ಅಂತ ನಡುರಾತ್ರಿಯಲ್ಲಿ ಪಡಕ್ಕಲ್ಲಿಗೆ ಬಂದರು. ಡಾಕ್ಟ್ರು ಅವರ ಆವೇಶದ ಮಾತುಗಳನ್ನೆಲ್ಲ ಸಮಾಧಾನಚಿತ್ತದಿಂದ ಕೇಳಿಸಿಕೊಂಡ ಬಳಿಕ ಪ್ರಶ್ನೆ ಮಾಡಿದರು. "ಮುಂದಿನ ಗತಿ ಏನು ಅಂತ ಯೋಚಿಸಿದ್ದೀರಾ?"

"ಮುಂದೆ ಏನು ಬೇಕಾದರೂ ಆಗಲಿ; ದೊರೆ ಕುಟುಂಬದ ಪ್ರತಿಯೊಬ್ಬರ ಕೈಕಾಲು ಕತ್ತರಿಸಿ ಹಾಕಿಯೇ ಸಿದ್ಧ" ಎಲ್ಲರ ಆವೇಶದ ಉತ್ತರ.

"ಮುಂದೇನಾಗುತ್ತೆ?" ಡಾಕ್ಟ್ರ ತಣ್ಣಗಿನ ಪ್ರಶ್ನೆಗೆ ಉತ್ತರ ಬರಲಿಲ್ಲ. ಅವರೇ ಹೇಳಿದರು:

"ದೊರೆಗಳು ಪೋಲೀಸರನ್ನು ಹಿಡಿದುಕೊಂಡು ಬರುತ್ತಾರೆ. ತಾಂಡಾತಾಂಡಾಗಳಲ್ಲಿ ನುಗ್ಗಿ ಹೊಡೆದು ಬಡಿದು ಅರೆಜೀವ ಮಾಡುತ್ತಾರೆ. ಮಕ್ಕಳನ್ನು ಬೂಟುಗಾಲಿನಿಂದ ತುಳಿದು ಹಾಕುತ್ತಾರೆ. ಹೆಣ್ಣು ಮಕ್ಕಳನ್ನು ಹಾಳು ಮಾಡುತ್ತಾರೆ. ಇಡೀ ತಾಂಡಾವನ್ನೇ ನರಕ ಮಾಡಿಬಿಡುತ್ತಾರೆ. ನೀವು ರಕ್ಷಣೆಗಾಗಿ ಯಾರ ಮೊರೆ ಹೋಗುತ್ತೀರಿ? ಕೋರ್ಟಿಗೆ ಹೋಗ್ತೀರಾ? ದೊರೆಗಳು ಹಣ, ಅಧಿಕಾರ ಎಲ್ಲ ಬಳಸಿಕೊಂಡು ನ್ಯಾಯವನ್ನು ಖರೀದು ಮಾಡುತ್ತಾರೆ. ನೀವೆಲ್ಲ ಜೈಲಿಗೆ ಹೋಗುತ್ತೀರಿ. ನಿಮ್ಮ ಮಕ್ಕಳು ಮರಿ ಅನಾಥರಾಗುತ್ತಾರೆ. ಹೆಣ್ಣು ಮಕ್ಕಳು ಭಿಕ್ಷೆ ಬೇಡ ಬೇಕಾಗುತ್ತದೆ... ಬೇಕೇನು ಇದೆಲ್ಲಾ? ಹೇಳಿ..."

"ಹಾಗಾದರೆ ನಾವೀಗ ಏನು ಮಾಡಬೇಕು ಅಂತೀರಿ?"

"ಯಾವುದೇ ರೀತಿಯ ಹಿಂಸೆಯಿಲ್ಲದೆ ಪ್ರತಿಭಟನೆ ಮಾಡಬೇಕು. ಪ್ರತಿಯೊಬ್ಬರು ಒಗ್ಗಟ್ಟಿನಲ್ಲಿ ಸೇರಿ ಪ್ರತಿಭಟಿಸಿ ಬೃಹತ್ ಸಭೆಯನ್ನು ನಡೆಸಿ..." ಅಂತ ಪರಿಹಾರೋಪಾಯದ ಸೂಚನೆ ಡಾಕ್ಟ್ರಿಂದ.

ನಾಲ್ಕು ದಿನಗಳ ಬಳಿಕ ಕಲ್ವಕುರ್ತಿ ಎಂಬಲ್ಲಿ ಒಂದು ಮೈ ದಾನದಲ್ಲಿ "ಹರಿಜನ ಗಿರಿಜನ ಮೈಕ್ ಮಹಾಸಭೆ" ನಡೆಯಿತು. ಲಂಬಾಣಿ ಜನರು ಆ ಕಾಲದಲ್ಲಿ ಅದ್ಭುತವೆಂದು ಭಾವಿಸುವ ಎರಡು ವಿಷಯಗಳೆಂದರೆ ಸೈಕಲ್ ಸವಾರಿ ಮಾಡುವುದು ಮತ್ತು ಮೈಕ್ ಹಿಡಿದು ಸಾರ್ವಜನಿಕ ಭಾಷಣ ಮಾಡುವುದು! ಪ್ರತಿಯೊಂದು ಪಾಂಡಾದಿಂದಲೂ ತಮಟೆ ಬಡಿಯುತ್ತ ಹಾಡು ಹೇಳುತ್ತ ಲಂಬಾಣಿ ಜನರು ಮಕ್ಕಳ ಸಹಿತ ತಂಡೋಪ ತಂಡವಾಗಿ ಬಂದು ಮೈದಾನದಲ್ಲಿ ಒಟ್ಟು ಸೇರಿದರು. ಕೊಂಬುಕಹಳೆ ಊದುತ್ತ ದಪ್ಪು ಬಡಿಯುತ್ತ ಹರಿಜನ ಸಮುದಾಯವೂ ಬಂದು ಉತ್ಸಾಹದಿಂದ ಸೇರಿತು. ಹಿಂದೆಂದೂ ಕಂಡಿರದ ವಿಶಾಲವಾದ ಸಭೆ ಬಲಾಢ್ಯರ ವಿರುದ್ಧದಲಿತರ ರಣಕಹಳೆಯಂತಿತ್ತು.

ಸಭೆಯಲ್ಲಿ ಮೈಕು ಹಿಡಿದುಕೊಂಡು ಹಲವು ಮಂದಿ ನಾಯಕರು ಮಾತನಾಡಿ ದಣಿಗಳು, ದೊರೆಗಳು ಮಾಡುತ್ತಿದ್ದ ಅನ್ಯಾಯ, ಶೋಷಣೆಗಳ ವಿರುದ್ಧ ಧ್ವನಿ ಎತ್ತರಿಸಿ, "ಇನ್ನು ಮುಂದಕ್ಕೆ ಹರಿಜನ-ಗಿರಿಜನರ ಮೇಲಾಗುವ ಅತ್ಯಾಚಾರ-ಅನಾಚಾರಗಳನ್ನು ಸಹಿಸಿಕೊಂಡು ಕೂರಲಿಕ್ಕೆ ಸಾಧ್ಯವಿಲ್ಲ" ಎನ್ನುವ ಸಂದೇಶವನ್ನು ಸಷ್ಟವಾದ ಮಾತುಗಳಲ್ಲಿ ಜಾಹೀರುಪಡಿಸಿದರು. ಸೂರ್ಯ ಮುಳುಗುವ ಹೊತ್ತಿಗೆ ಬಕ್ಯಾ ನಾಯಕನೇ ಕೊನೆಯದಾಗಿ ಭಾಷಣ ಮಾಡಿ, ತನಗಾದ ಅನ್ಯಾಯ ಕೇವಲ ತನಗೆ ಆದದ್ದಲ್ಲ; ಇಡೀ ದಲಿತರಿಗೆ, ಬಡಜನರಿಗೆ ಆದ ಅನ್ಯಾಯ. ಆದರೆ ತಾವೆಲ್ಲರೂ ಒಗ್ಗಟ್ಟಾಗಿ ಇದ್ದರೆ ಇನ್ನೊಮ್ಮೆ ಇಂತಹ ಅಧಿಕಪ್ರಸಂಗ ಮಾಡುವ ಧೈರ್ಯ ದೊಡ್ಡವರಿಗಿಲ್ಲ ಎಂದು ಹೇಳಿದ.

ಬರೀ ಭಾಷಣಕ್ಕಷ್ಟೇ ಸೀಮಿತವಾಗಲಿಲ್ಲ ಆ ಪ್ರತಿಭಟನೆ ಕತ್ತಲು ಕವಿಯುತ್ತಿದ್ದಂತೆ ತಮಟೆ, ಡೋಲು, ಕಹಳೆ, ಕೊಂಬು, ಡಪ್ಪು ಎಲ್ಲವೂ ಏಕಕಾಲಕ್ಕೆ ಮೊಳಗತೊಡಗಿದವು. ಕೈಯಲ್ಲಿ ದೀವಟಿಗೆ ಹಿಡಿದುಕೊಂಡು ಸಾಲಾಗಿ ಮೈಲುದ್ದದ ಮೆರವಣಿಗೆ ನಡೆಯಿತು.

"ಎನ್ನಿಕೋ ಪಟೇಲಾ, ಎನ್ನಿಕೋ" (ಎಣಿಸಿಕೋ ಪಟೇಲ, ಎಣಿಸಿಕೋ) ಎಂಬ ಬಲವಾದ ಘೋಷಣೆ ಮಾರ್ದನಿಸಿತು. ಯಾವುದೇ ರೀತಿಯ ಹಿಂಸೆಗೆ ಅವಕಾಶ ನೀಡದೆ ಸಹಸ್ರಾರು ಮಂದಿ ಏಕಕಂಠದಿಂದ "ಇನ್ನು ಮುಂದಕ್ಕೆ ನಮ್ಮ ತಂಟೆಗೆ ಬಂದರೆ ಜಾಗ್ರತೆ"

ಎಂಬ ಖಡಕ್ಕಾದ ಸಂದೇಶವನ್ನು 'ದೊರೆ'ಗಳ ಇಡೀ ಸಮುದಾಯಕ್ಕೆ ನೀಡುವುದರೊಂದಿಗೆ ಸಭೆ ಮುಕ್ತಾಯವಾಯಿತು. ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ಅದು ಯಶಸ್ವಿಯೂ ಆಯಿತು ಎಂದು ಬೇರೆ ಹೇಳಬೇಕಿಲ್ಲವಷ್ಟೇ?

ಹೀಗೆ ಮೌನ ಕ್ರಾಂತಿಯ ಹರಿಕಾರನಾಗುತ್ತಾರೆ ತೆಲುಗರ ನಾಡಿಗೆ ತೆರಳಿದ ತುಳುನಾಡಿನ ಡಾ.ಎಂ.ಬಿ. ಮರಕಿಣಿ ಎಂಬ ಡಾಕ್ಟ್ರು!

*****

ಡಾ.ಎಂ.ಬಿ. ಮರಕಿಣಿ (ಡಾ.ಮಹಾಲಿಂಗ ಭಟ್ ಮರಕಿಣಿ) ಹೆಸರು ಕೇಳುವಾಗ ಕಿವಿಯೊಳಗೆ ಯಾವುದೋ ಲಾಲಿತ್ಯದ ಭಾವ ಸ್ಫುರಿಸುತ್ತದೆ. ಹಾಗಂತ ಅವರ ವ್ಯಕ್ತಿತ್ವವನ್ನು ನೋಡಿದರೆ, ಈಗಿನ ಡಾಕ್ಟ್ರುಗಳ ಹಾಗೆ ಗರಿಗರಿಯಾದ ಇಸ್ತ್ರಿ–ಇನ್‌ಶರ್ಟ್–ಟೈ–ಬೂಟುಗಳಿಂದೊಡಗೂಡಿದ ಚಿತ್ರಣ ಲಭಿಸುವುದಿಲ್ಲ. ಬದಲಾಗಿ ಅಪ್ಪಟ ದೇಸೀ ಹತ್ತಿ ಬಟ್ಟೆಯ ಒರಟು ಜುಬ್ಬಾ, ಸಾದಾ ಪ್ಯಾಂಟು, ಸ್ಲಿಪ್ಪರು ಎನ್ನುವ ಚಪ್ಪಲಿ, ಮುಖ ಪೂರ್ತಿ ಹರಡಿಕೊಂಡ ಸಂತೃಪ್ತ–ಸ್ನಿಗ್ಧ ನಗು! ಮಾತನಾಡುತ್ತಾ ಹೋದ ಹಾಗೆ ಬಿಚ್ಚಿಕೊಳ್ಳುವ ಅವರ 'ಅಲೆಮಾರಿ ವೈದ್ಯ'ನೊಬ್ಬನ ಅಂತರಂಗ ಅಗಾಗ ಬೆರಗು ಹುಟ್ಟಿಸುತ್ತಾ, ರೋಮಾಂಚನಕ್ಕೊಳಪಡಿಸುತ್ತಾ ಸಾಗುತ್ತದೆ. ಯಾವುದೋ ಅರಿಯದ ಆಕರ್ಷಣೆ ಸಾತ್ವಿಕವಾಗಿ ನಮ್ಮನ್ನು ಸೆಳೆದಿಟ್ಟು ಕೊಳ್ಳುತ್ತದೆ. ವೈದ್ಯಕೀಯ ವೃತ್ತಿ ಮತ್ತು ವೈದ್ಯನೊಬ್ಬನ ಜೀವನ–ಎರಡರಲ್ಲೂ ಇಂದು ಮತ್ತು ಹಿಂದೆ ಇದ್ದ ಪರಿಸ್ಥಿತಿಗಳಲ್ಲಿನ ವ್ಯತ್ಯಾಸಗಳನ್ನು ಗಮನಿಸಿಕೊಂಡು, ಆ ಹಿನ್ನೆಲೆಯಲ್ಲಿಯೇ ಅವರ ವ್ಯಕ್ತಿತ್ವದ ವಿವಿಧ ಮಗ್ಗುಲುಗಳನ್ನು ಗಮನಿಸಿದರೆ "ವಾವ್...!" ಎನ್ನುವಷ್ಟು ವಿಶಿಷ್ಟ, ಉತ್ಕೃಷ್ಟ ಮಾದರಿಯೊಂದು ಕಣ್ಣಿಗೆ ಹೊಳೆಯುತ್ತದೆ!

ವೈದ್ಯನು ಮಾತ್ರವಲ್ಲ, ಯಾವುದೇ ವೃತ್ತಿಯವರಿರಲಿ, ಹಣ ಮತ್ತು ಐಷಾರಾಮಿ ಜೀವನದ ಸವಲತ್ತುಗಳ ಬೆನ್ನಟ್ಟಿ ಹೋಗುತ್ತಿರುವ ಈ ದಿನಗಳಲ್ಲಿ ಡಾ.ಎಂ.ಬಿ. ಮರಕಿಣಿ ಅವರ 'ಸಂತ'ತನ ನಮ್ಮನ್ನು ಅಚ್ಚರಿಗೊಳಿಸುವ ತಂಗಾಳಿ! ಕಷ್ಟಗಳನ್ನು ಎದುರಿಸುವ, ಸಮಸ್ಯೆಗಳನ್ನು ಸಹಿಸಿಕೊಂಡೇ ಯಶಸ್ಸಿನ ಹಾದಿಯಲ್ಲಿ ಸಾಗುವ ಶಕ್ತಿ ಇಂದಿನ ಜನಾಂಗದವರಲ್ಲಿ ದಿನೇ ದಿನೇ ಕಮ್ಮಿಯಾಗುತ್ತಲಿದೆ ಅಂತ ನನಗಂತೂ ಅನ್ನಿಸುತ್ತದೆ. ಯಾಕೆಂದರೆ, ವಿದ್ಯಾರ್ಥಿಗಳಲ್ಲಿ ಮತ್ತು ಯುವಜನರಲ್ಲಿ ಆತ್ಮಹತ್ಯೆಯಂತಹ ಅತಿರೇಕಗಳು ಜಾಸ್ತಿಯಾಗುತ್ತಲಿವೆ. ಆಧುನಿಕ ವಿಜ್ಞಾನದ ಕೊಡುಗೆಗಳಿಂದಾಗಿ ನಾವು ಯಾವ ಕೆಲಸಕ್ಕೂ ಕಷ್ಟಪಡಲು ತಯಾರೇ ಇಲ್ಲ! ಕಷ್ಟಗಳು ಕಡಿಮೆಯಾಗಿ, ಕಷ್ಟಗಳನ್ನು ಎದುರಿಸುವ ಮನೋದೈಹಿಕ ದಾರ್ಢ್ಯವೂ ತೀರಾ ಕಡಿಮೆಯಾಗುತ್ತಲಿದೆ. ಆದರೆ ವಿಪರ್ಯಾಸದಂತೆ ಇದು ಹೆಚ್ಚಿನ ಒತ್ತಡಕ್ಕೆ ದಾದಿ ಮಾಡಿಕೊಡುತ್ತಲಿದೆ. ದೃಢತೆ ಕಡಿಮೆ, ಒತ್ತಡ ಜಾಸ್ತಿ; ಸ್ಥಿರತೆ ಕಡಿಮೆ, ಚಂಚಲತೆ ಹೆಚ್ಚು; ಸಹಿಷ್ಣುತೆ ಕಡಿಮೆ, ವೈಫಲ್ಯದ ಪರಿಣಾಮ ಘೋರ– ಹೀಗಿರುವ ಇಂದಿನ ದಿನಗಳಲ್ಲಿ ಹಿಂದಿನ ಪೀಳಿಗೆಯ ಓರ್ವ ಆದರ್ಶಮಾನವನಾಗಿ ಡಾ.ಎಂ.ಬಿ. ಮರಕಿಣಿಯವರ ವ್ಯಕ್ತಿತ್ವ ನಮಗೆ ಗೋಚರವಾಗುತ್ತದೆ ಅಂತ ನನ್ನ ಅಭಿಪ್ರಾಯ.

ವೈದ್ಯನಾಗಿ ಅವರು ತುಳಿದ ದಾರಿ ಮಾತ್ರ ಸಾಮಾನ್ಯವಾಗಿ ಎಲ್ಲರೂ ತುಳಿಯುವ

ದಾರಿಯಲ್ಲ. ಡಾ.ನಾ. ಮೊಗಸಾಲೆಯವರು ಗುರುತಿಸಿದಹಾಗೆ, "ನೆಮ್ಮದಿಯಾಗಿ ಅವರು ಒಂದೇ ಕಡೆ ಇದ್ದು ಕೈ ತುಂಬ ಸಂಪಾದಿಸ ಬಹುದಾಗಿದ್ದರೂ ಅದನ್ನು ಧಿಕ್ಕರಿಸಿ ಬದುಕು ಒಡ್ಡಿದ ಸವಾಲುಗಳನ್ನು ಎದುರಿಸಿದ್ದು ಅವರ ಜೀವನೋತ್ಸಾಹಕ್ಕೆ ಸಾಕ್ಷಿ". ಅದಮ್ಯವಾದ ಜೀವನ ಪ್ರೀತಿ ಮತ್ತು ಮನುಷ್ಯಪರವಾದ ಕಾಳಜಿಗಳು ಅವರನ್ನು ಸಾಮಾಜಿಕವಾದಂಥ ಹಾಗೂ ಸಮಾಜದ ಕಾಯಿಲೆಗಳ ಚಿಕಿತ್ಸೆಗೂ ಮುಂದಾಗುವಂತೆ ಮಾಡಿದವು; ಸವಾಲುಗಳನ್ನು –ಸಮಸ್ಯೆಗಳನ್ನು ಹುಡುಕಿಕೊಂಡು ಹೋಗಿ, ಈಸಿ, ಇದ್ದು ಜೈಸಿ ನಿಲ್ಲುವಂತೆ ಮಾಡಿದವು. ಇವೆಲ್ಲ ಹೋರಾಟಗಳಲ್ಲೂ ತಮ್ಮದೇ ಆದೊಂದು ಜೀವನಶೈಲಿ, ವ್ಯಕ್ತಿತ್ವದ ಛಾಪು ಗುಪ್ತಗಾಮಿನಿಯಾಗಿ ಹರಿಯುತ್ತಿರುವಂತೆ ನೋಡಿಕೊಂಡರು. ಅವರ ವ್ಯಕ್ತಿತ್ವಕ್ಕೆ ಒಂದಷ್ಟು ಬೇರೆ ಬೇರೆ ಆಯಾಮಗಳಿವೆ. ಒಮ್ಮೊಮ್ಮೆ ಹಳ್ಳಿಯ ಮುಗ್ಧ–ಅಶಕ್ತ–ಬಡರೋಗಿಗಳ ಬಂಧುವಾಗಿ ತೋರುತ್ತಾರೆ; ಒಮ್ಮೊಮ್ಮೆ ಅವರ ಸಂಕಟಮಯ ಜೀವನವನ್ನು ಸರಿಪಡಿಸಲು ದಾರಿ ತೋರಿಸಿಕೊಡುವ ಸುಧಾರಕನಂತೆ ಕಾಣುತ್ತಾರೆ. ಮತ್ತೊಮ್ಮೆ ಗ್ರಾಮೀಣ ಜನರಿಗೆ ಶಿಕ್ಷಣ, ಆರೋಗ್ಯ, ನೀರು, ವಸತಿ, ಸ್ವಾವಲಂಬನೆ ಇತ್ಯಾದಿಗಳ ಪಾಠ ಹೇಳುವ ಶಿಕ್ಷಕನಂತೆ ತೋರುತ್ತಾರೆ. ಶೋಷಣೆ ಅಸಮಾನತೆಗಳ ವಿರುದ್ಧ ಸಿಡಿದೇಳುವ ಬಂಡಾಯಗಾರನಂತೆ ವರ್ತಿಸುತ್ತಾರೆ. ಬಾಲ್ಯ ವಿವಾಹಕ್ಕೆ ಒಳಗಾಗಿ, ದಾಂಪತ್ಯ ಜೀವನವನ್ನೇ ಕಾಣದೆ ವಿಚ್ಛೇದನವನ್ನು ಪಡಕೊಂಡ ಒಬ್ಬಾಕೆಯನ್ನು, ಆ ಕಾಲದಲ್ಲಿ ತನ್ನ ಮನೋರಮೆಯಾಗಿ ಸ್ವೀಕರಿಸಿ ಸರಸಮಯ ದಾಂಪತ್ಯ ನಡೆಸಿದ ಮುದ್ದಣನಂತೆ ನಗುನಗುತ್ತಾರೆ. ಏಡ್ಸ್ ರೋಗಿಗಳು, ಕುಷ್ಠ ರೋಗಿಗಳು, ಆನೆಕಾಲು ರೋಗಿಗಳು, ತುಫಾನ್ ಸಂತ್ರಸ್ತರು, ಗ್ರಾಮೀಣ ಮಹಿಳೆಯರು, ಜಲಾನಯನ ಪ್ರದೇಶದ ಜನರು, ದಟ್ಟಡವಿಯ ನಿವಾಸಿಗಳು, ಲಂಬಾಣಿತಾಂಡಾಗಳ ಜನರು–ಹೀಗೆ ವೈವಿಧ್ಯ ಮಯವಾದ ಫಲಾನುಭವಿಗಳಿಗೆ ಪ್ರಯೋಜನ ದೊರಕಿಸಿಕೊಟ್ಟ ಸವ್ಯಸಾಚಿ ವೈದ್ಯನಂತೆ ಪ್ರಕಟಗೊಳ್ಳುತ್ತಾರೆ. ಪಡುಗಡಲ ತಡಿಯಿಂದ ತಿರುಗಾಡುತ್ತ ಹೊರಟು ಬಿಹಾರ–ಜಾರ್ಖಂಡ್‌ವರೆಗೆ ದೇಶ ಸುತ್ತುತ್ತ ಜನಸೇವೆಗೈವ ಪರಿವ್ರಾಜಕನಂತೆ ಪಡಿಮೂಡುತ್ತಾರೆ. ಉದ್ದಕ್ಕೂ ಸಾಹಿತ್ಯ. ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಗಂಭೀರ ಪ್ರಶ್ನೆಗಳನ್ನು ಹಾಸ್ಯಭರಿತ ಮನೋಭಾವದಿಂದ ಲೀಲಾಜಾಲವಾಗಿ ಎದುರಿಸುವ ಸಾಮರ್ಥ್ಯ ಅವರ ಬದುಕನ್ನು ಯಶಸ್ವಿಗೊಳಿಸುತ್ತದೆ; ಅರ್ಥಪೂರ್ಣವಾಗಿಸುತ್ತವೆ. ಅವರ ಯಾವುದೇ ಕೆಲಸಕ್ಕೂ ಸಮಾಜಸೇವೆಯ ಲೇಪನವಿದೆ –ನಿಜವಾದ ಅರ್ಥದಲ್ಲಿ. (ಇಂದಿನ ಅರ್ಥದಲ್ಲಿ ಅಲ್ಲ!) ಆದ್ದರಿಂದ ಸಮಾಜವಿಜ್ಞಾನದ ಅಭ್ಯಾಸಿಗಳಿಗೂ ಅವರ ಬದುಕೊಂದು ಪಠ್ಯ!

ಡಾ. ಮರಕಿಣಿಯವರಿಗೀಗ ಎಂಭತ್ತೈದರ ಹರೆಯ. ಮಡದಿ ಡಾ.ಸಬಿತಾ ತೀರಿಕೊಂಡು ಐದು ವರುಷಗಳಾಗಿವೆ. ಮಗಳು ಮದುವೆಯಾಗಿ ಅಮೆರಿಕವಾಸಿಯಾಗಿದ್ದಾಳೆ. ಮಗ ಆಕಾಶವಾಣಿಯಲ್ಲಿ ಉದ್ಯೋಗ ನಿಮಿತ್ತ ವಾಸಸ್ಥಾನವನ್ನು ಆಗಾಗ ಬದಲಿಸುತ್ತಿರಬೇಕಾಗುತ್ತದೆ. ಹೀಗಾಗಿ ಡಾ.ಮರಕಿಣಿಯವರು ಏಕಾಂಗಿಯಾಗಿ ಬೆಂಗಳೂರಿನ ಮನೆಯೊಂದರಲ್ಲಿ ಜೀವನ ನಡೆಸುತ್ತಿದ್ದಾರೆ. ಅಡಿಗೆ, ಮನೆಕೆಲಸಗಳನ್ನು ಮಹಿಳೆ ಯೋರ್ವರು ಬಂದು ಮಾಡಿಕೊಡುತ್ತಾರೆ. ಸುತ್ತ ಮುತ್ತಲ ಮನೆಯವರಿಗೆಲ್ಲ 'ತಾತ' ಎನ್ನಿಸಿಕೊಂಡು

ಸ್ವಸ್ಥ–ಸ್ವಾವಲಂಬಿ–ಧೈರ್ಯಪೂರಿತ ಬದುಕನ್ನು ನಡೆಸುತ್ತಿರುವ ಅವರು, ನೀರ ಮೇಲೆಯೇ ಇದ್ದೂ ನೀರನ್ನು ಅಂಟಿಸಿಕೊಳ್ಳದ ತಾವರೆಯಂತಹ ನಿರ್ಮೋಹಕರ ಭಾವವನ್ನು ತೋರುತ್ತಾರೆ. ಯಾವುದಕ್ಕೂ ಗೋಣಗದೆ, ಮರುಗದೆ, ಮರುಗದೆ, ಹೆದರದೆ, ಚಿಂತಿಸದೆ ತಮ್ಮಷ್ಟಕ್ಕೆ ತಾವು ಬದುಕುವ ಅವರು ಸೋತವರಿಗೆ ಸ್ಫೂರ್ತಿ ಹೇಗೋ ಹಾಗೆಯೇ ಯಾವ್ಯಾವು ದನ್ನೋ–ಯಾರ್‍ಯಾರನ್ನೋ ದೂರುವ ಉತ್ತರಕುಮಾರರಿಗೂ ಉತ್ತರವಾಗುವ ವ್ಯಕ್ತಿ!

ಹಳ್ಳಿಯೊಳಗೆ ಬೆಳೆದ ಎಳೆಯ

ಡಾ.ಮರಕಿಣಿ ಹುಟ್ಟಿ ಬೆಳೆದದ್ದು ಹಳ್ಳಿಯಲ್ಲಿ. ಅದು ಅಡ್ಯನಡ್ಕ ಎಂಬ ಊರಿನ ಮರಕಿಣಿ ಎಂಬ ಪ್ರದೇಶ. ಕರ್ನಾಟಕ – ಕೇರಳ ರಾಜ್ಯಗಳ ಗಡಿಪ್ರದೇಶ. ಸ್ವಾತಂತ್ರ್ಯಪೂರ್ವದಲ್ಲಿ ಹುಟ್ಟಿದವರು ಅವರು (೧೯೩೧). ವಿಟ್ಲದಿಂದ ಕಾಸರಗೋಡಿಗೆ ಹೋಗುವ ರಸ್ತೆಯಲ್ಲಿ (ಈಗ ರಾಜ್ಯ ಹೆದ್ದಾರಿ:ಕಲ್ಲಡ್ಕ –ಕಾಂಞಂಗಾಡ್) ಸಿಗುವ ಊರು ಅಡ್ಯನಡ್ಕ. ಮರಕಿಣಿ ಮನೆತನ ಹವ್ಯಕರಿಗೆ ಗುರಿಕ್ಕಾರರ ವಂಶ ಹಾಗಂತ ತುಂಬ ಸಿರಿವಂತರೇನೂ ಅಲ್ಲ. ಮಧ್ಯಮ ವರ್ಗದ ಕೃಷಿಕರ ಮನೆ.

ಎಂ.ಬಿ.ಯವರ ಅಜ್ಜ ಸಜ್ಜನ ಗುರಿಕ್ಕಾರರಾಗಿಯೂ ದೈವಭಕ್ತರಾಗಿಯೂ ಹೆಸರಾದವರು. ಊರಿನಲ್ಲಿ ನಡೆಯುವ ಎಲ್ಲ ದೇವ–ದೈವ ಆರಾಧನೆಯ ಕಾರ್ಯಕ್ರಮಗಳಲ್ಲಿ ಅವರದು ಮುಂಚೂಣಿಯ ಕರ್ತವ್ಯ ನಿರ್ವಹಣೆ. ಜತೆಯಲ್ಲಿ ವಿದ್ಯಾಭಿಮಾನಿ. ವೈದಿಕರಾದ ಮಣಿಮುಂಡ ಶಾಸ್ತ್ರಿಗಳ ಮಗಳನ್ನು ಸೊಸೆಯಾಗಿ ಮನೆ ತುಂಬಿಸಿಕೊಂಡು ಆ ನಂಟನ್ನು ಶಾಶ್ವತಗೊಳಿಸಲೋ ಎಂಬಂತೆ ಮಣಿಮುಂಡದಲ್ಲಿ ನಡೆಯುತ್ತಿದ್ದ ವೇದಪಾಠ ಶಾಲೆಯನ್ನು ನಮ್ಮ ಮನೆಗೇ ವರ್ಗಾಯಿಸಿಕೊಂಡು ನಡೆಸಿಕೊಂಡು ಹೋದರು. ಅದುವೇ ಇಂದಿನ ಅಡ್ಯನಡ್ಕ ಶಾಲೆಯ ಬೀಜಾಂಕುರ! ಇಂದು ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು ಆಗಿ ಬೆಳೆದಿರುವ ದೊಡ್ಡ ವಿದ್ಯಾಸಂಸ್ಥೆಯ ಮೂಲಸಸಿ ಮೊಳಕೆಯೊಡೆದಿದ್ದು ಮರಕಿಣಿಯಲ್ಲಿ ಎಂಬುದು ಗಮನಾರ್ಹ. ಮುಂದಕ್ಕೆ ವಾರಣಾಶಿ ಸುಬ್ರಾಯಭಟ್ಟರು, ಲಕ್ಷ್ಮಣದಾಸಪೈಗಳು, ಉಳಯ ಸುಬ್ಬಪ್ಪು ಮಣಿಯಾಣಿ, ಸಾಯ ಕೃಷ್ಣ ಭಟ್ಟ ಮೊದಲಾದ ಮಹನೀಯರ ಪ್ರಯತ್ನದಿಂದ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ ಆ ವಿದ್ಯಾಸಂಸ್ಥೆ (ಜನತಾ ವಿದ್ಯಾಸಂಸ್ಥೆ).

ಎಂ.ಬಿ.ಯವರ ತಂದೆ ಗುರಿಕ್ಕಾರ ನಾರಾಯಣ ಭಟ್ಟರು ತಮ್ಮ ತಂದೆಯ ಪ್ರಗತಿಪರ ಮನೋಭಾವವನ್ನೇ ಮುಂದುವರಿಸಿ ಊರಿಗೆ ಉಪಕಾರಿಯಾದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಗ್ರಾಮ ಪಂಚಾಯತಿ, ಸಹಕಾರ ಸಂಘ, ಶಿಕ್ಷಣ, ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಅಡಿಕೆ ಕೊಳೆರೋಗ ನಿವಾರಣೆಗೆ ಬೋರ್ಡೋ ಮಿಶ್ರಣವನ್ನು ಸಿಂಪಡಿಸಲು ಬೇಕಾದ ಪೀಪೆ ಪಂಪ್ ಅನ್ನು ಕೊಯಂಬತ್ತೂರಿಗೆ ಹೋಗಿ ನೋಡಿ, ಪರೀಕ್ಷಿಸಿ, ಊರಿನಲ್ಲಿ ಬಳಕೆಗೆ ತಂದಿದ್ದರು. ಸ್ವತಃ ಗಾಂಧಿವಾದಿಯಾಗಿದ್ದ ಅವರು ಅಡ್ಯನಡ್ಕ ಶಾಲೆಯಲ್ಲಿ ಹರಿಜನ

ಮಕ್ಕಳಿಗೆ ಪ್ರತ್ಯೇಕವಾಗಿ ಪಾಠ ನಡೆಯುತ್ತಿದ್ದುದನ್ನು ವಿರೋಧಿಸಿ ಎಲ್ಲರ ಜತೆಯಲ್ಲಿಯೇ ಅವರಿಗೂ ವಿದ್ಯಾಭ್ಯಾಸವಾಗುವಂತೆ ವ್ಯವಸ್ಥೆ ಮಾಡುವಲ್ಲಿ ಆಗಿನ ಶಾಲಾ ಶಿಕ್ಷಕ-ವ್ಯವಸ್ಥಾಪಕರಾಗಿದ್ದ ತಿಮ್ಮಣ್ಣ ಭಟ್ಟರಿಗೆ ಗಟ್ಟಿಯಾದ ಬೆಂಬಲವನ್ನು ನೀಡಿದ್ದರು.

ಆದರೆ ಸಾಂಸಾರಿಕವಾಗಿ ನಾರಾಯಣ ಭಟ್ಟರು ಹಾಗೆ ಗೆಲ್ಲಲಿಲ್ಲ. ಸಾಲಗಳ ಶೂಲಗಳಿಂದ ಕಿವಿಯಲ್ಪಟ್ಟರು. ತಾಯ್ತಂದೆಯರ ಏಕೈಕ ಪುತ್ರನಾಗಿದ್ದ ಅವರಿಗೆ ಮೂವರು ಸೋದರಿಯರಿದ್ದು, ಅವರು ಮದುವೆಯಾಗಿ ಹೋದ ಕುಟುಂಬಗಳು ಹೆಚ್ಚಿನ ಮಟ್ಟಿಗೆ ತವರನ್ನೇ ಅವಲಂಬಿಸಿಕೊಂಡಿದ್ದವು. ಹಿರಿಮನೆಯಾಗಿ, ಗುರಿಕ್ಕಾರರ ಮನೆಯಾಗಿ ಆಗಾಗ ನಡೆಯುತ್ತಿದ್ದ ಪೂಜೆ ಪುನಸ್ಕಾರಗಳು, ಸಂತಾನವೃದ್ಧಿ, ಮದುವೆ-ಉಪನಯನ ಅಂತ ಖರ್ಚುಗಳು ಸಾಲು ಸಾಲಾಗಿ ಬರತೊಡಗಿದವು. ಎಲ್ಲದಕ್ಕೂ ಕಲಶವಿಟ್ಟಂತೆ ಹಳೆಯ ಮನೆಯನ್ನು ಕೆಡವಿ ಉಪ್ಪರಿಗೆ ಮನೆಯನ್ನು ಹೊಸತಾಗಿ ನಿರ್ಮಿಸಬೇಕಾಗಿ ಬಂದಾಗ, ಕುಟುಂಬ ನಿರ್ವಹಣೆಗೆಂದು ಸುತ್ತಲಿನ ಕೆಲವು ಗದ್ದೆಗಳನ್ನು ಖರೀದಿಸಿ ಅವುಗಳಲ್ಲಿ ಅಡಿಕೆ ಸಸಿಗಳನ್ನು ನೆಟ್ಟು ಮರಗಳಾಗಿ ಫಲ ಬಿಡಲು ಕಾಯಬೇಕಾದಾಗ ಸಾಲದ ಗುಡ್ಡೆ ಬೃಹತ್ತಾಗಿ ಬೆಳೆದು ನಿಂತಿತು!

ಆಗ, ಗುರಿಕ್ಕಾರ ನಾರಾಯಣ ಭಟ್ಟರು 'ಇಳಿದು ಆರುವಾರ' ಎಂಬ ಪದ್ಧತಿಯ ಮೊರೆಹೋದರು. ಐದುವರ್ಷಗಳ ಅವಧಿಗೆ ಮನೆ, ತೋಟಗಳನ್ನೆಲ್ಲ ಸಾಲದಾರರ ನಿರ್ವಹಣೆಗೆ ಬಿಟ್ಟುಕೊಟ್ಟರು. ಅಲ್ಲಿಂದ ಮರಕಿಣಿಮನೆಯವರ 'ಅಲೆಮಾರಿ' ಜೀವನ ಆರಂಭವಾಯಿತು. ಮೊದಲಲ್ಲಿ ಅಲ್ಲೇ ಗುಡ್ಡದ ಮೇಲಿದ್ದ ಮಿತ್ತಡ್ಕದಲ್ಲಿ ಬಿಡಾರ. ಮರುವರ್ಷ ಹೊಸಮಠದ ಬಳಿ ಧನಿಕ ಕೃಷಿಕರೋರ್ವರ ತೋಟ ನಿರ್ವಹಣೆ ಮಾಡುವ ಕೆಲಸದ ಜತೆ ಅಲ್ಲೇ ಸಂಸಾರ ಹೂಡಿಕೆ. ಅಲ್ಲಿನ ಹವಾಮಾನ ಮಕ್ಕಳಿಗೆ ಹಿಡಿಸದಿದ್ದುದರಿಂದ ಮತ್ತೆ ಅಡ್ಯನಡ್ಕಕ್ಕೆ. ಮೊದಲು ನೆಗಳಗುಳಿ ಹತ್ತಿರದ ಚಾಕಟೆ ಮೂಲೆಯಲ್ಲಿ. ನಂತರ ಮರಕಿಣಿಗೆ ತೀರಾ ಸಮೀಪ ಬಾಳುಕಟ್ಟದಲ್ಲಿ. ಕೊನೆಗೆ ೧೯೪೬ರಲ್ಲಿ ಎಲ್ಲರೂ ಮರಳಿ ಮರಕಿಣಿ ಮನೆಗೆ ಸೇರುವ ಭಾಗ್ಯ ದೊರೆಯಿತು.

ಆದರೆ ಅದು ಗೃಹಿಣಿಯಿಲ್ಲದ ಮನೆಯಾಯಿತು. ಹೆರಿಗೆ, ಬಾಣಂತನಗಳಲ್ಲಿ ಸರಿಯಾದ ಉಪಚಾರ ದೊರೆಯದೆ ಎಂ.ಬಿ.ಯವರ ಅಮ್ಮ ತೀರಿಕೊಂಡರು. ಹತ್ತು ಮಂದಿಯನ್ನು ಹೆತ್ತರೂ ಉಳಿದವರು ಎಂಟು ಮಂದಿ ಐವರು ಗಂಡುಮಕ್ಕಳು, ಇಬ್ಬರು ಹುಡುಗಿಯರು, ಮತ್ತೊಂದು ಹಸುಗೂಸು, ಇವರೆಲ್ಲರನ್ನೂ ಕರೆದುಕೊಂಡು ವಯೋವೃದ್ಧ ತಾಯಿಯ ಜತೆ ಮತ್ತೆ ಮರಕಿಣಿ ಮನೆಯ ಹೊಸಿಲು ತುಳಿದರು ಗುರಿಕ್ಕಾರ ನಾರಾಯಣಭಟ್ಟರು.

ಒಬ್ಬ ಮಗಳಿಗೆ ಮದುವೆಯಾಗಿತ್ತು. ಉಳಿದ ಮಕ್ಕಳು ಅಡ್ಯನಡ್ಕ ಶಾಲೆಗೆ ಹೋಗುತ್ತಿದ್ದರು. ದೊಡ್ಡ ಮಗ ಈಶ್ವರಭಟ್ಟರು ಎಂಟನೇ ತರಗತಿಗೆ ಓದು ನಿಲ್ಲಿಸಿ ಸಂಸಾರದ ನೊಗಕ್ಕೆ ಹೆಗಲುಕೊಡಲು ಬೆಳ್ಳಾರೆಯ ಡಾ.ಪಿ.ಎಂ. ಭಟ್ಟರಲ್ಲಿ ಕಂಪೌಂಡರ್ ಆಗಿ ದುಡಿಯತೊಡಗಿದರು. ಅವರ ಮಾಸಿಕ ವೇತನ ೧೫ರೂಪಾಯಿಗಳಲ್ಲಿ ೧೦ರೂಪಾಯಿ ಎಂ.ಬಿ.ಯವರ ಪುತ್ತೂರಿನ ಹೈಸ್ಕೂಲು ಶಿಕ್ಷಣಕ್ಕೆ ಒದಗತೊಡಗಿತು.

ಎಂಟನೆಯ ತರಗತಿಯವರೆಗೆ ಅಡ್ಯನಡ್ಕ ಶಾಲೆಯಲ್ಲಿ ಓದಿ ಇ.ಎಸ್.ಎಲ್.ಸಿ. (Elementary School Leaving Certificate) ಪರೀಕ್ಷೆ ಪಾಸಾಗಿ ಮನೆಯಿಂದ ಹೊರಗಿನ ಹೊಸ ಲೋಕವೊಂದಕ್ಕೆ ತೆರೆದುಕೊಂಡ ಎಂ.ಬಿ.ಪುತ್ತೂರಿನ ಹೋಟೇಲೊಂದರಲ್ಲಿ ತಾತ್ಕಾಲಿಕ ವಾಸದ ವ್ಯವಸ್ಥೆಯೊಂದಿಗೆ ಹಳ್ಳಿಜೀವನದಿಂದ ಪಟ್ಟಣದ ಬದುಕಿಗೆ ಬೆರಗುಗಣ್ಣುಗಳಿಂದ ಸೇರ್ಪಡೆಗೊಂಡರು. ಕೆಲವು ವಾರಗಳ ಬಳಿಕ ಹೋಟೇಲ್‌ನಿಂದ ಹಾಸ್ಟೆಲಿಗೆ ವರ್ಗಾವಣೆಯಾದರು.

ಅಲ್ಲಿ ಗರಿಗೆದರಿಂದ ಹಕ್ಕಿಯಾಗಿ ಮರಕಿಣಿಯವರು ಪಾರೆ ವೆಂಕಪ್ಪಯ್ಯ, ಮಂಚಿಕಜೆ ಮಹಾಬಲಭಟ್ಟ, ಯರ್ಮುಂಜ ರಾಮಚಂದ್ರ, ಮುಳಿಯ ಕೃಷ್ಣ ಭಟ್ಟ, ಕಲ್ಮಡ್ಕ ರಾಮಚಂದ್ರ, ಬೋಳಂತಕೋಡಿ ಈಶ್ವರ ಭಟ್ಟ ಮೊದಲಾದ ಗೆಳೆಯರ ಗುಂಪಿನಲ್ಲಿ ಸೇರಿ ವಿವಿಧ ಚಟುವಟಿಕೆಗಳಲ್ಲಿ ಅರಳಿಕೊಂಡರು. ಸ್ಕೌಟ್‌ದಳ, ರಾಷ್ಟ್ರೀಯ ಸೇವಾದಳ, ವಿದ್ಯಾರ್ಥಿ ಕಾಂಗ್ರೆಸ್, ಅಂತಾರಾಷ್ಟ್ರೀಯ ತರುಣ ಸಮಾಜವಾದಿ ಕೂಟ ಇತ್ಯಾದಿಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡು, ಬರೆಹಗಾರರಾಗಿಯೂ ಬೆಳೆಯತೊಡಗಿದರು. ಪದಕಣ್ಣಾಯರೆಂಬ ಗುರುಗಳ ಮೂಲಕ ಪ್ರಗತಿಶೀಲ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡರು. ನೊಂದವರ ಪರವಾಗಿ ಮಿಡಿಯುವ, ಅನ್ಯಾಯ-ಶೋಷಣೆಗಳ ವಿರುದ್ಧ ಸಿಡಿಯುವ ಮನೋವೃತ್ತಿಯನ್ನು ಮೈಗೂಡಿಸಿಕೊಂಡರು.

ಒಂದು ಘಟನೆ ಗಮನಾರ್ಹ. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಪೂರ್ವಭಾವಿಯಾಗಿ ಸೆಲೆಕ್ಷನ್ ಎಕ್ಸಾಮಿನೇಷನ್ ಎಂಬ ಪರೀಕ್ಷೆ ಆಗ ಚಾಲ್ತಿಯಲ್ಲಿತ್ತು. ತಮಗೆ ಸಮ್ಮತವಾಗದ ವಿದ್ಯಾರ್ಥಿಗಳನ್ನು ಈ ಪರೀಕ್ಷೆಯಲ್ಲಿಯೇ ತಡೆದು ನಿಲ್ಲಿಸುವುದು ಸಾಮಾನ್ಯವಾಗಿ ನಡೆದು ಬಂದ ಪದ್ಧತಿಯಾಗಿತ್ತು ಶಿಕ್ಷಕರಿಗೆ. ಭಾರೀ ಪ್ರಭಾವಿಯಾದ ಶಿಕ್ಷಕರೋರ್ವರು ತಮ್ಮ ಬಳಿ ಖಾಸಗಿ ಟ್ಯೂಷನ್ ಹೇಳಿಸಿಕೊಳ್ಳುವಂತೆ ಸೂಚಿಸಿದ್ದರು. ಅದಕ್ಕಾಗಿ ತಲಾ ೩೦ ರೂಪಾಯಿಯಂತೆ ಆರು ತಿಂಗಳಿಗೆ ಒಟ್ಟು ೧೮೦ ರೂಪಾಯಿಗಳನ್ನು ಮುಂಗಡವಾಗಿಯೇ ಅವರಿಗೆ ಸಲ್ಲಿಸಬೇಕಾಗಿತ್ತು. ಮೂರು ಮಂದಿ ವಿದ್ಯಾರ್ಥಿಗಳಿಗೆ ಕಡುಬಡತನದ ಕಾರಣ ಟ್ಯೂಷನ್‌ಗೆ ಹಣ ಕಟ್ಟಲು ಅಸಾಧ್ಯವಾಗಿತ್ತು. ಅವರಿಂದಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕೂರಲು ಅರ್ಹರಾದವರ ಪಟ್ಟಿಯಲ್ಲಿ ಅವರುಗಳ ಹೆಸರಿರಲಿಲ್ಲ! ವಿಷಯ ತಿಳಿದಾಗ, ಶಾಲೆಯ ಎಲ್ಲ ೮೦೦ ಮಂದಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆಗೆ ಮುಂದಾದರು. ಅದರಲ್ಲಿ ಮೊದಲನೆಯವರು ಮರಕಿಣಿ! ಮೂರು ದಿನಗಳ ಬಳಿಕ ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ಪ್ರತಿಭಟನೆಯನ್ನು ನಿಲ್ಲಿಸಿದರು. ಬಂಡಾಯದ ನೇತೃತ್ವ ವಹಿಸಿದ ಇತರ ಐದು ಮಂದಿ ವಿದ್ಯಾರ್ಥಿ ಮುಖಂಡರಿಂದ ಕ್ಷಮಾಪಣೆಯ ಮುಚ್ಚಳಿಕೆ ಪತ್ರ ಬರೆಸಿಕೊಂಡರು. ಆದರೆ ಆತ್ಮಸಾಕ್ಷಿಗೆ ವಿರುದ್ಧವಾಗಿ ಕ್ಷಮೆಯನ್ನು ಬೇಡಲು ಎಂ.ಬಿ. ಮಾತ್ರ ಒಪ್ಪಲಿಲ್ಲ! ಮುಚ್ಚಳಿಕೆಗೆ ಸಹಿ ಹಾಕಲಿಲ್ಲ! ಪರಿಣಾಮ-ಹಾಸ್ಟೆಲಿನಿಂದ ಗೇಟ್‌ಪಾಸ್!

ತಕ್ಷಣಕ್ಕೆ ಇಬ್ಬರು ಶಿಕ್ಷಕರದೇ ನೆರವಿನಿಂದ 'ಅಜ್ಜ ಬಿಡಾರ'ವೊಂದರಲ್ಲಿ ಆಶ್ರಯ ಪಡೆದ ಮರಕಿಣಿಯವರು ಆ ಬಳಿಕ ಶ್ರೀಈಶ್ವರಕಜೆ ಮತ್ತು ಶ್ರೀ ಪಾರ್ವಕಜೆ ಈಶ್ವರ

ಭಟ್ಟರ ಜತೆಯಲ್ಲಿ ಹಳೆಕಟ್ಟಡದ ಕೋಣೆಯೊಂದರಲ್ಲಿ ವಾಸ್ತವ್ಯ ಹೂಡಿ ಪರೀಕ್ಷೆಗೆ ಓದು ಮುಂದುವರಿಸಿದರು. ಆದರೆ ಪರೀಕ್ಷೆಯ ಫೀ ಕಟ್ಟಲು ತಂದಿದ್ದ ಹಣ ಎಂದೋ ಖರ್ಚಾಗಿತ್ತು. ದಿಕ್ಕೇ ತೋಚದಂತಾಯಿತು. ಆಗ ಶಾಲೆಯಲ್ಲಿ ಗುಮಾಸ್ತರಾಗಿದ್ದ ಕೃಷ್ಣ ನಾಯಕ್ ಎಂಬವರು ದೇವರಂತೆ ಒದಗಿ ಬಂದರು–ಶುಲ್ಕದ ಹಣ ಹದಿನೈದು ರೂಪಾಯಿಗಳನ್ನೂ ತಾವೇ ಪಾವತಿ ಮಾಡಿ ಎಂ.ಬಿ.ಯವರು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವಂತೆ ಮಾಡಿದರು! ಅವರೇನೂ ತುಂಬ ಅನುಕೂಲಸ್ಥ ರಾಗಿರಲಿಲ್ಲ. ಸ್ವತಃ ಅವರ ಸಂಪಾದನೆ ತಿಂಗಳಿಗೆ ಅರುವತ್ತು ರೂಪಾಯಿಗಳಷ್ಟೇ ಆಗಿತ್ತು. ಆದರೂ ಅವರು ಮರಕಿಣಿ ಮೇಲೆ ತೋರಿದ ಮಾನವೀಯ ಪ್ರೀತಿ ಅನುಪಮವಾಗಿತ್ತು.

ಪರೀಕ್ಷೆ ಮುಗಿಸಿ ಊರಿಗೆ ಬಂದವರಿಂದ ಮರಕಿಣಿ ಅಡ್ಕದ ಪಳ್ಳಿ (ಮಸೀದಿ) ಯೊಂದರಲ್ಲಿ ರಾತ್ರಿ ಶಾಲೆ, ಮಿತ್ರಮಂಡಳಿ ಎಂಬ ಗೆಳೆಯರ ಗುಂಪು, ಉಚಿತ ವಾಚನಾಲಯ, 'ಸಂದೇಶ' ಎಂಬ ಹಸ್ತಪತ್ರಿಕೆ–ಹೀಗೆ ವಿವಿಧ ಚಟುವಟಿಕೆಗಳು ತೊಡಗಿದವು. ಖ್ಯಾತ ವ್ಯಂಗ್ಯಚಿತ್ರಗಾರ ಪ.ಗೋ. (ಪದ್ಯಾಣ ಗೋಪಾಲಕೃಷ್ಣ) ಜತೆ ಸೇರಿ ಸಾಮಾಜಿಕ ನಾಟಕವೊಂದರ ಪ್ರದರ್ಶನವೂ ಜರಗಿತು. ಎಲ್ಲವುಗಳ ಹಿನ್ನೆಲೆಯಲ್ಲಿಯೂ "ಮುಂದೇನು?" ಎಂಬ ಭವಿಷ್ಯದ ಪ್ರಶ್ನೆ ಕೊರೆಯುತ್ತಲೇ ಇತ್ತು. ಮನೆಯ ಆರ್ಥಿಕ ಪರಿಸ್ಥಿತಿ ಹೆಚ್ಚಿನ ಕಲಿಯುವಿಕೆಯನ್ನು ಬೆಂಬಲಿಸುವಂಥದ್ದಾಗಿರಲಿಲ್ಲ. 'ವಾರಾನ್ನ', 'ಅರೆಕಾಲಿಕ ಉದ್ಯೋಗ'... ಇತ್ಯಾದಿ ಶಬ್ದಗಳನ್ನು ತಲೆಯಲ್ಲಿ ತುಂಬಿಕೊಂಡು ಸೀದಾ ಮೈಸೂರಿಗೆ ಬಂದರು. 'ರೈಲ್ವೇ ಸ್ಟೇಷನ್ ರೆಸ್ಟೋರೆಂಟ್'ನಲ್ಲಿ ಗಣ್ಯ ಅತಿಥಿಗಳ ಉಪಚಾರದ ಉದ್ಯೋಗ ಮಾಡಿದರು ಕೆಲವು ದಿನ. ಕೆಲಸಗಾರರ ಮುಷ್ಕರದ ಬಳಿಕ ಅದೂ ತಪ್ಪಿ ಹೋಯಿತು. ಆದರೆ ಮೊದಲ ಸಂಬಳದಲ್ಲಿ ಹೈಸ್ಕೂಲಿನ ಕ್ಲಾರ್ಕ್ ಕೃಷ್ಣನಾಯಕರ ೧೫ರೂಪಾಯಿಗಳ ಅಮೂಲ್ಯ ಸಾಲವನ್ನು ತೀರಿಸಿದರು! ಮತ್ತೆ ಕೆಲವು ಸಮಯ ಮೈಸೂರು ನ್ಯಾಯಾಲಯ ಸಮುಚ್ಚಯದ ಕ್ಯಾಂಟೀನ್‌ನಲ್ಲಿ ಲೆಕ್ಕಪತ್ರ ಬರೆಯುವುದೇ ಮೊದಲಾದ ಕೆಲಸ ಆರೇಳು ತಿಂಗಳ ಕಾಲ ಸಾಗಿತು.

ಅಲ್ಲಿಂದ ಊರಿಗೆ ಬಂದು ಏತಡ್ಕದಲ್ಲಿನ ಕುಂಬ್ಡಾಜೆ ಗ್ರಾಮೀಣ ಸಹಕಾರಿ ಸಂಘದ ಲೆಕ್ಕಿಗನ ಕೆಲಸ ಮಾಡತೊಡಗಿದರು. ಅಲ್ಲಿ ಸುಶಿಕ್ಷಿತ ತರುಣರ ಸಾಹಿತ್ಯಕ ವಾತಾವರಣದಲ್ಲಿ ವಿವಿಧ ಚಟುವಟಿಕೆಗಳ ಜತೆ ಕೆಲಸ ಮಾಡುತ್ತಾ ಹತ್ತು ತಿಂಗಳು ಕಳೆದರು. ಖ್ಯಾತ ಸಾಹಿತಿ 'ವಿಚಿತ್ರ' ಯೇತಡ್ಕ (ವೈ.ಎಸ್.ಹರಿಹರ ಭಟ್ಟ)ರ ಸಹವಾಸ ಈ ಸಮಯದಲ್ಲಿ ದೊರಕಿತು. ಅಲ್ಲಿಯೇ ಬಳ್ಳಾರಿಯ ತಾರಾನಾಥ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವೈ.ಕೆ. ಕೇಶವಭಟ್ಟರ ಪರಿಚಯವಾಗಿ ವೈದ್ಯಕೀಯ ವಿದ್ಯಾಭ್ಯಾಸದತ್ತ ಕಣ್ಣು ಹಾಯಿತು.

ತಾರಾನಾಥ ವೈದ್ಯಕೀಯ ಕಾಲೇಜಿನಲ್ಲಿಯೇ ಪ್ರವೇಶಕ್ಕಾಗಿ ಅರ್ಜಿಸಲ್ಲಿಸಿದವರು ಕೊನೆಯ ಕ್ಷಣದಲ್ಲಿ ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜಿನಲ್ಲಿ ಹೆಚ್ಚಿನ ಅನುಕೂಲತೆಗಳಿವೆ ಎಂದು ತಿಳಿದಾಗ ಮೈಸೂರಿಗೆ ಹೋದರು. ಆಗ ಪ್ರವೇಶದ ಕಾಲಾವಧಿ ಮುಗಿದಿದ್ದರೂ ಪ್ರಿನ್ಸಿಪಾಲ್. ಡಾ. ದ್ವಾರಕಾನಾಥ್ ಅವರ ಕಾರುಣ್ಯದಿಂದಾಗಿ

ತಡವಾಗಿ ಅಡ್ಮಿಷನ್ ಆಯಿತು. ಅದಕ್ಕೆ ಕಾರಣವಾದ ಅಂಶಗಳು ಎರಡು: ಒಂದು ಮರಕಿಣಿಯವರು ಡಾ. ದ್ವಾರಕಾನಾಥರಿಗೆ ಪರಿಚಿತರಾದ ಬೆಳ್ಳಾರೆಯ ಡಾ.ಪಿ.ಎಂ. ಭಟ್ಟರ ಹೆಸರು ಹೇಳಿದ್ದು. ಇನ್ನೊಂದು 'ಪಾಸಾದ ಮೇಲೇನು ಮಾಡ್ತೀಯಾ? ಎಂಬ ಪ್ರಿನ್ಸಿಪಾಲರ ಪ್ರಶ್ನೆಗೆ, 'ಹಳ್ಳಿ ಸಾರ್ ನಮ್ಮೂರು. ಅಲ್ಲಿ ವೈದ್ಯರಿಲ್ಲ. ಅಲ್ಲೇ ಪ್ರಾಕ್ಟೀಸ್ ಮಾಡ್ತೀನಿ' ಎಂಬ ಉತ್ತರ ನೀಡಿದ್ದು.

"ನೀನು ಡಾಕ್ಟರ್ ಆಗಬೇಕು" ಎನ್ನುವ ಒತ್ತಾಯ 'ವಿಚಿತ್ರ' ಯೇತಡ್ಕ ಅವರದಾಗಿತ್ತು. ಅದರಂತೆಯೇ ವೈದ್ಯಕೀಯ ಕಾಲೇಜು ಮೆಟ್ಟಲು ಹತ್ತಲು ಸಿದ್ಧರಾಗಿ ಹೊರಟಾಗ ಮನೆಯ ಆರ್ಥಿಕ ಪರಿಸ್ಥಿತಿ ಏನೂ ಅನುಕೂಲಕರವಾಗಿರಲಿಲ್ಲ. "ಅಪ್ಪ ಮತ್ತು ಅಣ್ಣ (ಈಶ್ವರ ಭಟ್ಟ ಮರಕಿಣಿ) ಏನೇನು ಚರ್ಚಿಸಿದರೋ ತಿಳಿಯದು.." ಎನ್ನುತ್ತಾರೆ ಎಂ.ಬಿ... "ಮೂರು ದಿನ ಪ್ರಯಾಣದ ವಿವರಗಳನ್ನು ಅಣ್ಣ ಹೇಳಿದರು. ಅಪ್ಪ 'ಸರಿಯಾಗಿ ಓದು' ಎಂದಷ್ಟೇ ಹೇಳಿ ೩೦೦ರೂಪ್ಯಾಗಳನ್ನು ಕೊಟ್ಟರು. ಇಷ್ಟು ಹಣ ಎಲ್ಲಿಂದ ಹೊಂದಿಸಿದರೋ ಏನೋ ಎಂದು ನಾನು ಅಚ್ಚರಿಪಡುತ್ತಿದ್ದೆ. ಆದರೆ ಆಗ ಮನೆಯಲ್ಲಿದ್ದ ಏಕೈಕ ಬೆಲೆ ಬಾಳುವ ವಸ್ತುವಾಗಿದ್ದ, ಅಪ್ಪನ ಕೈ ಬೆರಳ ಉಂಗುರ ಮಾತ್ರ ಕಾಣಿಸದಾಗಿತ್ತು..." ಇಂದು ನೆನಪಿಸಿಕೊಂಡು ಹೀಗೆ ಹೇಳುವಾಗ ಮರಕಿಣಿಯವರ ಕಣ್ಣುಗಳು ಹನಿಗೂಡುತ್ತವೆ.

ಎಲ್.ಎ.ಎಂ.ಎಸ್. ವಿದ್ಯಾರ್ಥಿಯಾಗಿ ಮೈಸೂರು ಸರ್ಕಾರಿ ಆಯುರ್ವೇದ ವಿದ್ಯಾಲಯದಲ್ಲಿ ಕಲಿಯುವಿಕೆ ಆರಂಭಿಸಿದ ಮರಕಿಣಿಯವರು ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಮುಂಚೂಣಿಯಲ್ಲಿದ್ದರು. ಪ್ರಾಂಶುಪಾಲ ಡಾ.ಸಿ.ದ್ವಾರಕಾನಾಥರು ಹಳೆಯ ಕಾಲೇಜಿನಲ್ಲಿ ಹೊಸ ಚೈತನ್ಯದ ಗಾಳಿ ಬೀಸುವಂತೆ ಮಾಡಿದವರು. ಆಯುರ್ವೇದದ ಜತೆ ಯುನಾನಿ ವಿಭಾಗವೂ ಅವರ ಕಾಲದಲ್ಲೇ ಆರಂಭವಾಗಿತ್ತು. ಸರಕಾರದ ಅನುಮತಿ ಯೊಂದಿಗೆ 'ಅಲೋಪತಿ' (ಆಧುನಿಕ ವೈದ್ಯ ವಿಜ್ಞಾನ)ಯನ್ನೂ ಸ್ವಲ್ಪ ಮಟ್ಟಿಗೆ ಕಲಿಸುವ ವ್ಯವಸ್ಥೆ ಜಾರಿಗೆ ಬಂದಿತು. ಪಾಠಪಟ್ಟಿ (Time Table)ಯನ್ನು ಕಟ್ಟು ನಿಟ್ಟಾಗಿ ಜಾರಿಗೆ ತಂದು, ವಾರ್ಡುಗಳಲ್ಲೇ ನಡೆಸುವ ಕ್ಲಿನಿಕಲ್ ಲೆಕ್ಚರ್, ತಪಾಸಣಾ ವಿಧಾನಗಳ ಕಲಿಕೆಗೂ ಅನುಕೂಲ ಮಾಡಿಕೊಡಲಾಯಿತು. ಹೀಗೆ ಎಲ್.ಎ.ಎಂ.ಎಸ್‌ಗೆ ಸುವ್ಯವಸ್ಥಿತ ರೂಪ ಕಲ್ಪಿಸಿದ್ದರಿಂದಾಗಿ ರಾಜ್ಯ-ಹೊರರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರಲಾರಂಭಿಸಿದರು. ಪ್ರಸಿದ್ಧ ವೈದ್ಯವಿದ್ಯಾಪಾರಂಗತರಾದ ಬಿ.ವಿ.ಪಂಡಿತರು, ಪಾಳ್ಯಂ ವೆಂಕಟಾಚಲ ಪಂಡಿತರು, ಎನ್.ಎಸ್. ಭಟ್ಟಾಚಾರ್ಯ, ಮ.ಗೋಪಾಲಕೃಷ್ಣರಾಯರು, ಅಚ್ಚುತ ಶೆಣೈ ಮುಂತಾದ ಹಲವು ಮಂದಿ ಗುರುಗಳು ಕಾಲೇಜಿನ ಕೀರ್ತಿಗೆ ಕಾರಣರಾದ ರೆಂಬುದನ್ನು ಡಾ. ಮರಕಿಣಿ ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸುತ್ತಾರೆ.

ಕಾಲೇಜಿನಲ್ಲಿ ಎಂ.ಬಿ. ಚಟುವಟಿಕೆಗಳಿಗೆ ಹೊಸ ಆಯಾಮ ದೊರಕಿದ್ದು ವಿದ್ಯಾರ್ಥಿ ಸಂಘದ ಚುನಾವಣೆಯ ಮೂಲಕ. ಅಧ್ಯಕ್ಷರು, ಕಾರ್ಯದರ್ಶಿ, ವಿವಿಧ ವಿಭಾಗಗಳ ಮುಖ್ಯಸ್ಥರು ಚುನಾವಣೆಯಿಂದ ಆಯ್ಕೆಯಾದ ಬಳಿಕ ಪ್ರಾಂಶುಪಾಲರು, "ಸಾಹಿತ್ಯ ವಿಭಾಗಕ್ಕೆ ಯಾರೂ ಸ್ಪರ್ಧಿಸಿಯೇ ಇಲ್ಲ. ಹಾಗಾಗಿ ಆ ಸ್ಥಾನಕ್ಕೆ ಮೊದಲನೆಯ ವರ್ಷದ ವಿದ್ಯಾರ್ಥಿ ಎಂ.ಎಂ. ಭಟ್ ನೇಮಕಗೊಂಡಿದ್ದಾರೆ" ಎಂದು ಘೋಷಿಸಿದರು. ಪ್ರತಿ

ಶುಕ್ರವಾರ ಸಂಜೆ ೪ ರಿಂದ ೬ ಗಂಟೆವರೆಗೆ ಸಾಹಿತ್ಯ ಸಂಜೆ. ಮೊದಲು ಹಾಸ್ಯ ಚಟಾಕಿಗಳ ಕಾರ್ಯಕ್ರಮ. ನಂತರ ಸಿನಿಮಾ ಹಾಡುಗಳು; ಮತ್ತೆ ಭಾವಗೀತೆಗಳು, ದೇವರನಾಮ, ಶಾಸ್ತ್ರೀಯ ಸಂಗೀತ, ವೀಣಾವಾದನ–ಹೀಗೆ ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ಒಂದರ ಹಿಂದೊಂದರಂತೆ ಸಂಘಟಿಸಿದರು. ಬುಧವಾರ ಚರ್ಚಾಗೋಷ್ಠಿ; ಇನ್ನೊಮ್ಮೆ ಹಿರಿಯ ಸಾಹಿತಿಗಳಿಂದ ಉಪನ್ಯಾಸ. ಕ್ರೀಡಾ ಚಟುವಟಿಕೆಗಳಲ್ಲಿ ಬ್ಯಾಡ್ಮಿಂಟನ್, ವಾಲಿಬಾಲ್ ತಂಡಗಳು ಅಂತರ್ಕಾಲೇಜು ಪಂದ್ಯಾಟಗಳಲ್ಲಿ ವಿಜಯಪತಾಕೆ ಹಾರಿಸಿದವು. ಭಾಷಣ ಸ್ಪರ್ಧೆಗಳಲ್ಲಿ ಸ್ವತಃ ಮರಕಿಣಿ, ಹಾ.ಮಾ.ನಾಯಕ, ಎಸ್. ಗಂಗಾಧರ ಮುಂತಾದ ಘಟಾನು ಘಟಿಗಳ ಜತೆ ಸ್ಪರ್ಧಿಸಿ ಬಹುಮಾನ ಗಳಿಸಿದರು. ಪ್ರಸಿದ್ಧ ಸಾಹಿತಿ ಪ್ರೊ.ವಿ.ಕೃ. ಗೋಕಾಕರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾಡಿದ ಭಾಷಣ ಬಹಳಷ್ಟು ಪ್ರಚಾರ ಪಡೆಯಿತು. ಉಚಿತ ಕಣ್ಣು ಪರೀಕ್ಷಾ ಶಿಬಿರದ ಸಂದರ್ಭದಲ್ಲಿ ಎಂ.ಬಿ.ಯವರ ತಂಡ ಕರಾವಳಿಯ ಜಾನಪದ ಗೀತೆಗಳನ್ನು ಹಾಡಿ ಪ್ರಶಸ್ತಿ ಪಡೆಯಿತು. ಅದರಲ್ಲಿ ಹವಿಗನ್ನಡ ಭಾಷೆಯ ಹಲವು ಗೀತೆಗಳನ್ನು ಹಾಡಲಾಗಿದ್ದು ಆ ದಿನಗಳಲ್ಲಿ ಅದೊಂದು ದಾಖಲೆಯೇ ಆಗಿತ್ತು ಎನ್ನುತ್ತಾರೆ ಅವರು ಆಕಾಶವಾಣಿಯಲ್ಲಿಯೂ "ಮಳೆಗಾಲದಲ್ಲಿ ತುಳುನಾಡು" ಎಂಬ ಅರ್ಧಗಂಟೆಯ ನುಡಿಚಿತ್ರ ಪ್ರಸಾರವಾಗಿ ಪ್ರಶಂಸೆ ಪಡೆಯಿತು. ಕುರಿಯ ವಿಠಲ ಶಾಸ್ತ್ರಿಗಳ ತಂಡದ ಯಕ್ಷಗಾನಬಯಲಾಟವನ್ನೂ ಮೈಸೂರಿನ ಪ್ರೇಕ್ಷಕರಿಗೆ ಪರಿಚಯಿಸಲಾಯಿತು. ಮುಂದಕ್ಕೆ ರಶ್ಯದ ನಾಯಕ ಕ್ರುಶ್ಚೇವ್ ಬೆಂಗಳೂರಿಗೆ ಬಂದಿದ್ದಾಗ ಲಾಲ್‌ಬಾಗಿನಲ್ಲಿ ಹದಿನೈದು ನಿಮಿಷಗಳ ಅವಧಿಯಲ್ಲಿ ಯಕ್ಷಗಾನ ಪ್ರದರ್ಶಿಸುವ ಅವಕಾಶ ದೊರೆಯಿತು. ಅಲ್ಲಿನ ರಸನಿಮಿಷವೊಂದನ್ನು ಡಾ.ಮರಕಿಣಿ ನೆನಪಿಸಿಕೊಳ್ಳುತ್ತಾರೆ. "ದಕ್ಷಯಜ್ಞ ಪ್ರಸಂಗದಲ್ಲಿ ವೀರಭದ್ರ ಪಾತ್ರಧಾರಿ ದೊಂದಿ ಹಿಡಿದುಕೊಂಡು ಅಬ್ಬರದಿಂದ ರಂಗಪ್ರವೇಶ ಮಾಡಿದಾಗ ಕ್ರುಶ್ಚೇವ್ ಗಾಬರಿಗೊಂಡು 'ಬೆಂಕಿ... ಬೆಂಕಿ...' ಎನ್ನುತ್ತ ವೇದಿಕೆಯತ್ತ ಧಾವಿಸಿದರು. ಅವರಿಗೆ ಕಥೆಯ ಬಗ್ಗೆ, ಕಲೆಯ ಬಗ್ಗೆ ತಿಳಿಹೇಳಿ ಸಮಾಧಾನಿಸ ಬೇಕಾದರೆ ನಾನು ಕಲಿತ ಇಂಗ್ಲಿಷ್ ಎಲ್ಲ ಖರ್ಚಾಯಿತು..." ಆ ಬಳಿಕ ಯಕ್ಷಗಾನವನ್ನು ಪ್ರದರ್ಶಿಸಲು ರಶ್ಯಾಕ್ಕೆ ಬರುವಂತೆ ಆಹ್ವಾನ ದೊರೆಯಿತಾದರೂ ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ.

ಕಾಲೇಜು ಕೈ ಬರಹದ ಪತ್ರಿಕೆ 'ಮಿಂಚು' ಎರಡು ವರ್ಷಗಳ ಬಳಿಕ ಮುದ್ರಿತ ಪುಸ್ತಕವಾಗಿ ಹೊರಬಂತು. ಅದರಲ್ಲಿ ಚಕ್ರವರ್ತಿ ರಾಜಗೋಪಾಲಾಚಾರಿ ಅಂಥವರ ಲೇಖನಗಳಿದ್ದವು. ಬಿಸಿಜಿ ಲಸಿಕೆ ಕಡ್ಡಾಯ ಬೇಕೇ ಬೇಡವೇ ಎಂಬ ಬಗ್ಗೆ ಪರಿಣತರ ಅಭಿಪ್ರಾಯ ಬರೆಹಗಳಿದ್ದವು. 'ಉದರರೋಗ ಚಿಕಿತ್ಸೆಯಲ್ಲಿ ಹೊಸ ಪ್ರಯೋಗ' ಎಂಬೊಂದು ಸಂಶೋಧನಾ ಲೇಖನವನ್ನು ಪ್ರಾಂಶುಪಾಲ ಡಾ. ದ್ವಾರಕಾನಾಥರು ಬರೆದಿದ್ದರು. ಹೀಗೆ ಸ್ಮರಣಸಂಚಿಕೆಯನ್ನು ಸ್ಮರಣಾರ್ಹವಾಗಿ ರೂಪಿಸುವಲ್ಲಿ ಡಾ. ಮರಕಿಣಿ ಸ್ಮರಣೀಯ ಪಾತ್ರವಹಿಸಿದ್ದರು.

ಎಲ್.ಎ.ಎಂ.ಎಸ್.ನ ಅಂತಿಮ ಪರೀಕ್ಷೆ ಮಾತ್ರ ಅವರಿಗೆ ಮತ್ತು ಎಲ್ಲ ವಿದ್ಯಾರ್ಥಿಗಳಿಗೆ ಸ್ಮರಣೀಯವಾದುದಾಗಿರಲಿಲ್ಲ. ಹೊಟೇಲು, ಹಾಸ್ಟೆಲ್, ಲಾಡ್ಜ್, ಮೆಸ್ ಅಂತ ಒಂದೊಂದೆಡೆ

ಒಂದಷ್ಟು ದಿನಗಳನ್ನು ಕಳೆಯುತ್ತಾ ಆಹಾರ-ವಾಸ್ತವ್ಯಗಳಿಗಾಗಿ ಇನ್ನಿಲ್ಲದ ಪಡಿಪಾಟಲು ಪಡುತ್ತಲೇ ಎರಡು ಮೂರು ತಿಂಗಳ ಕಠಿಣ ಅಭ್ಯಾಸವನ್ನು ಮಾಡಿ ಪರೀಕ್ಷೆಗೆ ತಯಾರಾಗಿದ್ದರು ಅವರು. ಪರೀಕ್ಷೆ ನಡೆಯುತ್ತಿದ್ದದ್ದು ಯುವರಾಜಾ ಕಾಲೇಜಿನಲ್ಲಿ. ಎಲ್ಲಾ ಪೇಪರುಗಳೂ, ಸಾಧಾರಣ ಮಟ್ಟಿಗೆ ಸರಿಯಾಗಿ ಓದಿದವರಿಗೆ ಪಾಸಾಗುವಂತೆಯೇ ಇದ್ದವು. ಕೊನೆಯ ಪೇಪರು ಸರ್ಜರಿ (ಶಸ್ತ್ರ ಚಿಕಿತ್ಸೆ) ಮಾತ್ರ ಬಾಕಿ ಇತ್ತು. ಆಗ ಬಂದ. ಸುದ್ದಿ ಎಲ್ಲರಿಗೂ ಆಘಾತವನ್ನುಂಟುಮಾಡಿತು. "ಈ ಪೇಪರ್‌ನಲ್ಲಿ ಎರಡು ಮುಖ್ಯ ಪ್ರಶ್ನೆಗಳು ಸಿಲೆಬಸ್‌ನಿಂದ ಹೊರಗಿನವಾಗಿರುತ್ತವೆ... ಉಳಿದ ಪ್ರಶ್ನೆಗಳೂ ಕಠಿಣವಾಗಿರುತ್ತವೆ... ಒಟ್ಟಿನಲ್ಲಿ ೧೫ ಮಾರ್ಕು ಕೂಡಾ ಯಾರಿಗೂ ಸಿಗುವ ಸಂಭವವಿಲ್ಲ..." ಎಂಬ ವಾರ್ತೆಯನ್ನು ಕೇಳಿ, ಮರಕಿಣಿಯವರು ತಮ್ಮ ಸಹಪಾಠಿಗಳ ಜತೆ ಐದು ನಿಮಿಷದ ಮಿಂಚಿನ ವಿಚಾರಮಂಥನ ನಡೆಸಿದರು. ಕೆಲವು ಮಂದಿ ಅಲೋಪತಿ ಅರೆಕಾಲಿಕ ಉಪನ್ಯಾಸಕರು ಅರೆಮನಸ್ಸಿನಿಂದ ಆಯುರ್ವೇದ ಕಾಲೇಜಿಗೆ ಬಂದು ಪಾಠ ಮಾಡಿ ಹೋಗುತ್ತಿದ್ದರು. ಸರಕಾರದ ಆದೇಶದ ಪ್ರಕಾರ ಅವರು ಪಾಠ ಮಾಡಲೇಬೇಕು, ಅದಕ್ಕೆ ನಿರ್ದಿಷ್ಟ ಮೊತ್ತದ ಗೌರವಧನವೂ ಇತ್ತು. ಆದರೆ ಆಯುರ್ವೇದ ವಿದ್ಯಾರ್ಥಿಗಳ ಬಗ್ಗೆ ಅವರಿಗೆ ಅನಾದರ, ತಿರಸ್ಕಾರ. ಅಂತಹ ಕೆಲವರು ಈ ವಿದ್ಯಾರ್ಥಿಗಳನ್ನು ಕಳಪೆಯೆಂಬಂತೆ ಬಿಂಬಿಸಲು ಕುತಂತ್ರ ನಡೆಸಿ ಅತ್ಯಂತ ಜಟಿಲವಾದ ಪ್ರಶ್ನೆ ಪತ್ರಿಕೆಯನ್ನು ರೂಪಿಸಿದ್ದರು. ಇದನ್ನರಿತ ಬಳಿಕ ಸುಮ್ಮನಿರಲು ಮರಕಿಣಿಯವರಿಗೆ ಸಾಧ್ಯವಾಗಲಿಲ್ಲ.

ಎಲ್ಲ ಸಹಪಾಠಿಗಳ ಜತೆ ಚರ್ಚಿಸಿ, ಜೇಬಿನಲ್ಲಿ ಒಂದು ಪೆನ್ಸಿಲ್, ನಾಲ್ಕೈದು ಕಾಗದ ಚೂರುಗಳು, ಒಂದೆರಡು ಚಿಕ್ಕ ಗುಂಡುಕಲ್ಲುಗಳನ್ನು ತುಂಬಿಕೊಂಡು, ಬೆಲ್ ಬಡಿದಾಗ ತಾನೊಬ್ಬನೇ ಒಳಹೋಗಿ ಕುಳಿತರು. ಕಿಟಕಿಯ ಪಕ್ಕದ ಸೀಟಿನಲ್ಲಿ ಕುಳಿತು ಪ್ರಶ್ನೆ ಪತ್ರಿಕೆಯ ಮುಖ್ಯಾಂಕಗಳನ್ನೆಲ್ಲ ಚೀಟಿಗಳಲ್ಲಿ ಗೀಚಿ ಕಲ್ಲಿನ ಉಂಡೆಗಳ ಭಾರದ ಜತೆಯಲ್ಲಿ ಕಿಟಕಿಯ ಮೂಲಕ ಕೆಲಕ್ಕೆ ಕಳುಹಿಸಿದರು. ಅರ್ಧ ಗಂಟೆಯ ಬೆಲ್ಲು ಬಾರಿಸಿದೊಡನೆ ಉಳಿದವರೆಲ್ಲ ಒಳಬಂದು ಉತ್ತರ ಬರೆಯತೊಡಗಿದರು. ಇವರು ಮಾತ್ರ ತಲೆತಗ್ಗಿಸಿ ಮೌನಿಯಾಗಿ ಕುಳಿತರು. ಪರೀಕ್ಷಾ ಮೇಲ್ವಿಚಾರಕರೊಬ್ಬರು ಬಳಿಬಂದು, "ನಡಿ... ಪರೀಕ್ಷಾಧಿಕಾರಿಗಳ ಹತ್ತಿರಕ್ಕೆ..." ಎಂದು ಆಜ್ಞಾಪಿಸಿ ಇವರೆಲ್ಲ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಂಡು ಕರಕೊಂಡು ಹೋದರು. ಮೇಲಿಂದ ಮೇಲೆ ವಿಚಾರಣೆ ನಡೆಸಿ, "ನಾಳೆ ವಿವರವಾದ ವಿಚಾರಣೆ ಪ್ರಿನ್ಸಿಪಾಲ್ ಚೇಂಬರಿನಲ್ಲಿ ೧೦ ಗಂಟೆಗೆ ಹಾಜರಾಗತಕ್ಕದ್ದು" ಎಂಬ ಅಪ್ಪಣೆಯೊಂದಿಗೆ ಬಿಡುಗಡೆಯಾಯಿತು. ಎಲ್ಲ ಪ್ರಶ್ನೆಗಳಿಗೂ, "ಹೌದು" "ಇಲ್ಲ" ಅಥವಾ ಉತ್ತರವಷ್ಟೇ ಇವರ ಬಾಯಿಯಿಂದ.ದೈಹಿಕ ವಾಗಿಯೂ ಮಾನಸಿಕವಾಗಿಯೂ ತೀರಾ ಸೋತಿದ್ದ ಮರಕಿಣಿ ಕೊಠಡಿಗೆ ಕಾಲೆಳೆಯುತ್ತ ಬಂದು ಮಂಚದ ಮೇಲೆ ಉರುಳಿಕೊಂಡರು. ನಿದ್ದೆಯ ಮಂಪರು ಆವರಿಸಿತ್ತು. ಸಂಜೆಗತ್ತಲಿನಲ್ಲಿ ಅವರ ಆಪತ್ಬಂಧು ರಾಮಚಂದ್ರರಾಯರು ಕಾಲೇಜಿನ ಗೌರವಾನ್ವಿತ ಪ್ರೊಫೆಸರ್ ಡಾ. ಮಹದೇವ ಶಾಸ್ತ್ರಿಗಳನ್ನು ರೂಮಿಗೇ ಕರೆದುಕೊಂಡು ಬಂದರು.

"ಯಾಕೆ ಹೀಗೆ ಮಾಡಿದಿರಿ? ಅಲ್ಲಿ ಏನೇನು ನಡೆಯಿತು?" ಎನ್ನುವ ಗುರುಗಳ

ಪ್ರಶ್ನೆಗೆ ಎಂ.ಬಿ.ಎಲ್ಲವನ್ನೂ ವಿವರಿಸಿ ಹೇಳಿದರು. "ವಿದ್ಯಾರ್ಥಿಗಳಿಗೆ ಅನ್ಯಾಯ, ಶಿಕ್ಷಣ ಮತ್ತು ಕಾಲೇಜಿನ ಅಪಮಾನ, ಸತ್ಯಕ್ಕೆ ಅಪಚಾರ–ಇವನ್ನು ನೋಡಿಕೊಂಡು ಸುಮ್ಮನಿರಲು ಸಾಧ್ಯವಾಗಲಿಲ್ಲ. ಆ ಕ್ಷಣದಲ್ಲೇ ಪ್ರತಿಕ್ರಿಯೆ ತೋರಿಸದಿದ್ದರೆ ಈ ನೈಚ್ಯ ಭಾವ ಖಾಯಂ ಆಗಿ ಬಿಡುತ್ತದೆ. ನನಗಿದ್ದುದು ಒಂದೇ ದಾರಿ ಪ್ರತಿಭಟನೆ ೩೯ ವಿದ್ಯಾರ್ಥಿಗಳ ೬ ತಿಂಗಳು ಮತ್ತು ನೂರಾರು ರೂಪಾಯಿಗಳು ಮತ್ತು ಶ್ರಮ ವೃಥಾಹಾಳಾಗುತ್ತಿತ್ತು ಎಂಬುದರಿಂದ ಪ್ರತಿಭಟಿಸಿದೆ.

"ಇದರಿಂದ ಏನಾಗಬಹುದು ಅಂತ ನನಗೆ ಗೊತ್ತಿದೆ... ನನ್ನನ್ನು ಸಸ್ಪೆಂಡ್ ಮಾಡಬಹುದು. ಡಿಬಾರ್ ಮಾಡಿ ಕಪ್ಪು ಪಟ್ಟಿಯಲ್ಲಿ ಎಂದೆಂದೂ ಮೆಡಿಕಲ್ ಪ್ರೊಫೆಷನ್ ನಡೆಸದಂತೆ ಶಿಕ್ಷೆ ವಿಧಿಸಬಹುದು... ಆದರೆ ದೂರದ ಹಳ್ಳಿಯಲ್ಲಿ ಯಾರಾದರೂ ಹಳೇ ವೈದ್ಯರ ಬಳಿಯಲ್ಲಿ ಕಂಪೌಂಡರ್ ಆಗಿ ದುಡಿದು ಹೊಟ್ಟೆ ಹೊರೆದುಕೊಳ್ಳಬಹುದು..." ಅನ್ನುವಾಗ ಎಂ.ಬಿ. ಯವರ ಕಣ್ಣುಗಳು ತುಂಬಿಕೊಂಡವು, ಧ್ವನಿ ಗದ್ಗದವಾಯಿತು.

"ನಮ್ಮ ಕಾಲೇಜಿನಲ್ಲಿ ಓದಿದವರು ಕಂಪೌಂಡರ್‌ಗಳಾಗುವುದಿಲ್ಲ, ಡಾಕ್ಟರ್ ಆಗುತ್ತಾರೆ" ಎಂದು ಬೆನ್ನು ತಟ್ಟಿ ನೇವರಿಸುವ ಧ್ವನಿಯಲ್ಲಿ ಹೇಳಿದ ಗುರುಗಳು ಅಲ್ಲಿಂದ ತೆರಳಿದರು. ಅನ್ಯಾಯದ ವಿರುದ್ಧ ಸಿಡಿದು ನಿಂತು ಎಲ್ಲರ ಒಳಿತಿಗಾಗಿ ತನ್ನೊಬ್ಬನ ಭವಿಷ್ಯವನ್ನೇ ಬಲಿಕೊಟ್ಟ ಡಾ. ಮರಕಿಣಿ ವ್ಯಕ್ತಿತ್ವ ಇಲ್ಲಿ ಮೇರು ಪರ್ವತದಂತೆ ಮೇರೆ ಮೀರಿ ನಿಲ್ಲುತ್ತದೆ! ಸುದೈವವಶಾತ್ ಅದನ್ನು ಅರ್ಥೈಸಿಕೊಂಡರು ಡಾ. ಮಹದೇವಶಾಸ್ತ್ರಿಗಳು. ಮುಂದಿನ ಬಾರಿ ಸಪ್ಲಿಮೆಂಟರಿಗೆ ಕೂರಲು ಅವಕಾಶ ದೊರೆಯಿತು. ಮಹಾಲಿಂಗಭಟ್ಟರು ಕಂಪೌಂಡರ್ ಆಗಲಿಲ್ಲ; ಡಾ.ಎಂ.ಬಿ. ಮರಕಿಣಿ ಎನಿಸಿಕೊಂಡು ಕಾಲೇಜಿನಿಂದ ಹೊರಬಂದರು!

*****

"ಡಾ. ಮರಕಿಣಿಯವರ ಸತ್ಯ ನಾರಾಯಣ ಫಾರ್ಮಸಿ" ೧೯೫೭ರ ಮಾರ್ಚ್‌ನಲ್ಲಿ ಅಡ್ಯನಡ್ಕದಲ್ಲಿ ಆರಂಭಗೊಂಡಿತು. ಹಾಜಿ ಸಾಹುಕಾರರೊಬ್ಬರು 'ಬಂಡಸಾಲೆ' (ಜೀನಸು ಅಂಗಡಿ) ತೆರೆಯುವ ಉದ್ದೇಶದಿಂದ ಕಟ್ಟಿಸಿದ್ದ, 'ಪಾದೆ ಅಂಗಡಿ' ಎಂದು ಕರೆಯಲ್ಪಡುತ್ತಿದ್ದ (ಬಂಡೆಗಳ ನಡುವೆ ಇದ್ದುದರಿಂದ), ವಿಶಾಲವಾದ ಕಟ್ಟಡದಲ್ಲಿ ಪ್ರಾರಂಭವಾದದ್ದು ಆ ಗ್ರಾಮೀಣ ಆಸ್ಪತ್ರೆ. ಆ ಕಾಲದಲ್ಲಿ ಆ ಆಸುಪಾಸಿನಲ್ಲಿ ಇದ್ದ ಏಕೈಕ ಸುಸಜ್ಜಿತ, ಬೋರ್ಡು ಇರುವ ಆಸ್ಪತ್ರೆ ಅದಾಗಿತ್ತು. ಬೈಚ್ಯನೆಂಬ ಹೆಸರಿನ ಮಲಯಾಳೀ ಪಂಡಿತರೊಬ್ಬರನ್ನು ಬಿಟ್ಟರೆ ಬೇರೆ ಯಾವ ವೈದ್ಯಕೀಯ ಸೌಲಭ್ಯಗಳೂ ಅಡ್ಯನಡ್ಕದಲ್ಲಿ ಲಭ್ಯವಿರಲಿಲ್ಲ. ಕ್ಲಿನಿಕ್‌ನ ಪೀಠೋಪಕರಣಗಳು, ಅತ್ಯಗತ್ಯ ಸಲಕರಣೆಗಳು ಹಾಗೂ ಸುಮಾರು ಮೂರು ತಿಂಗಳು ಸಾಕಾಗುವಷ್ಟು ಔಷಧಿಗಳ ಖರೀದಿಯ ಒಟ್ಟು ವೆಚ್ಚ ರೂಪಾಯಿ ೨,೨೦೦/ – ಆಗಿತ್ತು ಅಂತ ಡಾ.ಮರಕಿಣಿ ನೆನಪಿಸಿಕೊಳ್ಳುತ್ತಾರೆ. ಆಗ ಅಡಿಕೆಗೆ ಖಂಡಿಗೆ (೨೫೬ ಕೆ.ಜಿ.) ನೂರು ರೂಪಾಯಿ ಬೆಲೆ! ಒಂದು ಸೇರು ಅಕ್ಕಿಗೆ ಬರೇ ನಾಲ್ಕು ಆಣೆ (ಇಪ್ಪತ್ತೈದು ಪೈಸೆ)! ಅರ್ಧ ಲೀ.ಚಿಮಿಣಿಎಣ್ಣೆಗೆ (ಸೀಮೆಎಣ್ಣೆ) ೨೧/೨ ಅಣೆ! –"ಆ ಕಾಲವೇ ಎಷ್ಟೋ ಚೆನ್ನಾಗಿತ್ತು" ಅಂತ ಎಲ್ಲರೂ ಬಾಯಿ ಚಪ್ಪರಿಸುವುದು ಈ ಕಾರಣಕ್ಕೆ ಇರಬೇಕು!(ಆದರೆ 'ಅನ್ನಭಾಗ್ಯ', 'ಕ್ಷೀರಭಾಗ್ಯ' ಇತ್ಯಾದಿಗಳ ಈ ಕಾಲದಲ್ಲಿ ಆಹಾರಧಾನ್ಯಗಳಿಗೆ ಬೆಲೆಯೇ ಇಲ್ಲ!)

ಬೆಳ್ಳಾರೆಯ ಡಾ.ಪಿ.ಎಂ. ಭಟ್ಟರ ಕ್ಲಿನಿಕ್‌ನಲ್ಲಿ ಕಂಪೌಂಡರ್ ಆಗಿ ದುಡಿದಿದ್ದ ಅಣ್ಣ ಐ.ಬಿ. ಮರಕಿಣಿಯವರು ತಮ್ಮನ ಕ್ಲಿನಿಕ್‌ಗೆ ಔಷಧಿಗಳ ಸಹಿತ ಎಲ್ಲ ಸಾಮಾನು ಸರಂಜಾಮುಗಳ ವ್ಯವಸ್ಥೆ ಮಾಡಿಕೊಟ್ಟಿದರು.

ವೈದ್ಯರುಗಳ ಗ್ರಾಮೀಣ ಸೇವೆಯ ಬಗ್ಗೆ ತುಂಬ ಚರ್ಚೆಯಾಗುತ್ತಿರುವ ಈ ದಿನಗಳಲ್ಲಿ ಡಾ.ಮರಕಿಣಿ ಅಂದು ಯಾತಕ್ಕೋಸ್ಕಾರ ತಮ್ಮ ಹಳ್ಳಿಯಲ್ಲಿ ಚಿಕಿತ್ಸಾಲಯ ಆರಂಭಿಸಿದರೆಂಬ ಕಾರಣಗಳನ್ನು ತಿಳಿದುಕೊಳ್ಳುವುದು ಪ್ರಸ್ತುತವೆನಿಸುತ್ತದೆ. ಮೂರು ಸಾವುಗಳನ್ನು ಅವರು ಬೆಟ್ಟು ಮಾಡುತ್ತಾರೆ–ಇಬ್ಬರು ಸೋದರಿಯರು ಮತ್ತು ಸ್ವತಃ ತಮ್ಮ ತಾಯಿ ಕೂಡಾ ಹೆರಿಗೆ ಮತ್ತು ಬಾಣಂತನದ ಸಂದರ್ಭಗಳಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ದೊರೆಯದೇ, ಕಣ್ಣೆದುರೇ ಅಸುನೀಗಿದ್ದು ಮರಕಿಣಿಯವರ ಮನ ಕಲಸಿತ್ತು. ಗರ್ಭಧಾರಣೆ, ಆ ಸಂದರ್ಭದಲ್ಲಿ ತೆಗೆದುಕೊಳ್ಳ ಬೇಕಾದ ಅಗತ್ಯಕ್ರಮಗಳು, ಹೆರಿಗೆ, ಬಾಣಂತನ, ಶಿಶುಗಳ ಪಾಲನೆ–ಲಸಿಕಾರಕರನ–ಪೋಷಣೆ–ಇತ್ಯಾದಿಗಳ ಬಗ್ಗೆ ಹಳ್ಳಿ ಜನರಿಗಿದ್ದ ಜಾಗೃತಿ ಮತ್ತು ಮಾಹಿತಿ ತೀರಾ ಕಡಿಮೆಯಾಗಿತ್ತು. ಅದ್ದರಿಂದ, ತಾನು ಕಲಿತ ವೈದ್ಯಕೀಯ ಜ್ಞಾನ ಎಂದಿಗೂ ಹಳ್ಳಿ ಜನರಿಗೇ ಮೀಸಲು ಎಂಬ ದೃಢ ನಿರ್ಧಾರ ಎಂ.ಬಿ. ಮನದಲ್ಲಿ ಮೊಳೆಯಿತು. ಅದು ಮತ್ತೆ ಹೆಮ್ಮರವಾಗಿ ಬೆಳೆದು ದೇಶದ ಉದ್ದಗಲಕ್ಕೆ ಪಸರಿಸಿತು!

ಅಡ್ಯನಡ್ಕದ 'ಪಾದೆ ಆಸ್ಪತ್ರೆ' ಸುಮಾರು ನಾಲ್ಕು ವರ್ಷ ಬಹಳ ಚೆನ್ನಾಗಿ ನಡೆಯಿತು. (ಈಗ್ಗೆ ಒಂದೆರಡು ವರ್ಷ ಹಿಂದಿನ ತನಕವೂ ಅಲ್ಲಿ 'ಪಾದೆಡಾಕ್ಟ್ರು' ಎನಿಸಿಕೊಂಡೇ ಮೂರ್ನಾಲ್ಕು ದಶಕಗಳ ಸೇವೆಗೈದ ಡಾ.ಕೆ.ಕೆ ಭಟ್ಟರು ವೃತ್ತಿ ನಡೆಸಿದ್ದರು) ಆರಂಭೋತ್ಸವದ ದಿನ ತಮ್ಮ ಕ್ಲಿನಿಕ್‌ನ ಮೊದಲ ಫಲಾನುಭವಿ ತಾವೇ ಆಗಿದ್ದನ್ನು ಮರಕಿಣಿ ನೆನಪಿಸಿ ಕೊಳ್ಳುತ್ತಾರೆ. ಪುರೋಹಿತರಿಂದ ಧನ್ವಂತರಿ ಪೂಜೆ, ಅಲ್ಪೋಪಹಾರದ ಸಿಹಿ ವಿತರಣೆ ನಡೆದ ಬಳಿಕ ಬಂದಿದ್ದ ಕೆಲವೇ ಮಂದಿ ಅತಿಥಿಗಳು ಶುಭಹಾರೈಸಿ ತೆರಳಿದ್ದರು. ಆತಂಕ ದಿಂದಲೂ, ಕ್ಲಿನಿಕ್ಕಿನ ಒಳಗೆ–ಹೊರಗೆ ಇದ್ದ ಬೇಸಿಗೆಯ ತಾಪಮಾನದ ಕಾರಣದಿಂದಲೂ ತಲೆನೋವು ಶುರುವಾಯಿತು ಡಾಕ್ಟ್ರಿಗೆ. "ಕುತ್ತಿಗೆ, ಕೆನ್ನೆ, ಹಣೆ, ಮೂಗಿಗೆಲ್ಲ ಅಮೃಂತಾಜನ ಬಡಿದಾಗಿತ್ತು–ಕಣ್ಣಿನಿಂದ ಧಾರಾಕಾರವಾಗಿ ನೀರಿಳಿಯಿತು; ಕೆನ್ನೆ ತುಸು ಬೆಚ್ಚಗಾಯಿತು; ಹಣೆಯ ಮೇಲೆ ಬೆವರೊಡೆಯಿತು–ಇಷ್ಟೇ ವಿನಃ ಸಂಕಟವೇನೂ ಇಳಿಮುಖವಾಗಲಿಲ್ಲ... ಸುತ್ತುಮುತ್ತಲ ವಸ್ತುಗಳೆಲ್ಲ ಮಂಜು ಮಂಜಾಗಿ ಕಾಣತೊಡಗಿದವು... ಒಂದು ಆಸ್ಪ್ರೋ ಮಾತ್ರೆ ನುಂಗಿ ನೀರು ಕುಡಿದು ಅಲ್ಲೇ ಇದ್ದ ಸ್ಟೂಲಿನ ಮೇಲೆ ಕುಸಿದೆ..."

ಪ್ರಾಥಮಿಕ ಶಾಲೆಯ ಊಟದ ಬಿಡುವಿನ ಗಂಟೆ ಢಣ್...ಢಣ್...ಅಂತ ಬಾರಿಸಿದಾಗಲೇ ಎಚ್ಚರವಾದದ್ದು ಡಾಕ್ಟ್ರಿಗೆ. ಆದರೆ ಆ ಚುಟುಕು ನಿದ್ದೆ, ಆಸ್ಪ್ರೋ ಮಾತ್ರೆಯ ಜತೆ ಸೇರಿ ತಲೆನೋವನ್ನು ಮಾಯ ಮಾಡಿಬಿಟ್ಟಿತ್ತು! ಎದ್ದು ನೋಡುತ್ತಾರೆ – ಹೊರರೋಗಿಗಳ ರಿಜಿಸ್ಟರ್, ಮೊದಲ ಪುಟದಲ್ಲಿ ಪುರೋಹಿತರ ಶುಭ ಹಾರೈಕೆಯಾಗಿ "ಓಂ" ಅಂತ ಬರೆಸಿಕೊಂಡು, 'ಮೊದಲ ರೋಗಿಯಾಗಿ ನಿನ್ನ ಹೆಸರನ್ನೇ ಬರೆದುಕೋ' ಅಂತ ನಗುತ್ತ ಆಹ್ವಾನಿಸುತ್ತಿದೆ!

ಅದು ಬಿಟ್ಟರೆ, ಮೊದಲ ಗಿರಾಕಿಯನ್ನು (ಹಾಗೆ ಕರೆಯಬಹುದಾದರೆ!) ಡಾಕ್ಟ್ರು

ನೋಡಿದ್ದು ಸಂಜೆ ನಾಲ್ಕು ಗಂಟೆಗೆ. ಆ ನಂತರದ ಅನುಭವವನ್ನು ಅವರ ಮಾತಲ್ಲೇ ಹೇಳುವುದಾದರೆ: "ಡಾಕುಟ್ರೇ, ದಿಂಜ ಪೊರ್ತಾಂಡು-ಕಾತು ಕುಳ್ಳುತೆ (ಡಾಕ್ಟ್ರೇ, ತುಂಬ ಹೊತ್ತಾಯಿತು, ನಿಮ್ಮನ್ನು ಕಾದು ಕುಳಿತಿದ್ದೇನೆ) ಎಂದು ಹೇಳುತ್ತ ಹೆಗಲ ಮೇಲಿದ್ದ ಮಗುವನ್ನು ಕೆಳಗಿಳಿಸಿ ಹರಕು ಕೊಳಕು ಬಟ್ಟೆಯಿಂದ ಮುಖವೊರೆಸಿಕೊಂಡು ಬಂದು ನಿಂತ-ಒಬ್ಬಗಿರಾಕಿ, ಟೇಬಲಿನ ಮೇಲೆ ಚಿಕ್ಕ ಕರಡಿಗೆಯನ್ನಿರಿಸಿ, ದೂರ ಸಾದಿ, ಬೇಕ ಪೋವೊಡು (ದೂರದ ಹಾದಿ, ಬೇಗ ಹೋಗ ಬೇಕು) ಎಂದು ವಿನಂತಿಸಿದ. ಕರಡಿಗೆಯ ಮುಚ್ಚಳ ತೆರೆದೆ. ಒಂದು ಚಿಕ್ಕ ಚೀಟಿಯೂ ಒಂದು ರೂಪಾಯಿ ನಾಣ್ಯವೂ ಇತ್ತು. ಚೀಟಿಯಲ್ಲಿ 'ಈ ಹುಡುಗನ ಕಜ್ಜಿಗೆ ಪೇನೇಸ್ ಮುಲಾಮು ಕೊಡಿರಿ ೧ರೂಪಾಯಿಗೆ' ಎಂಬ ಒಕ್ಕಣೆ ಇತ್ತು.

ಹಣ ಕಳಿಸಿದ್ದು ಮುಲಾಮು ತರುವುದಕ್ಕೆ ಆದರೂ ರೋಗಿಯನ್ನು ಪರೀಕ್ಷಿಸಿ ನೋಡುವ ಪ್ರಯತ್ನ ಮಾಡುತ್ತಿದ್ದ ಹಾಗೆಯೇ 'ಮುಲಾಮು ಕೊಟ್ಟು ಬಿಡಿ ಡಾಕ್ಟ್ರೇ, ಅಷ್ಟು ಸಾಕು' ಎಂದು ಬಿನ್ನವಿಸಿಕೊಂಡ. ಮೇಲು ನೋಟಕ್ಕೇ ಆ 'ಕೈ ಕಾಲು ಸಣ್ಣ – ಹೊಟ್ಟೆ ಡುಮ್ಮಣ್ಣ, ಕಜ್ಜಿ ಬುರುಕ, ಸಿಂಬಳ ಸುರುಕ' ಎಂದು ರಾಗವಾಗಿ ಹಾಡಿ ಗೇಲಿ ಮಾಡುವುದಕ್ಕೆ ತಕ್ಕ ಮಾದರಿಯಂತಿದ್ದ ಆ ಮಗುವಿನ ಮೈ ಮೇಲಿನ ಕಜ್ಜಿ ಕೇವಲ ಕಜ್ಜಿಯಷ್ಟೇ ಅಲ್ಲ ಅದು ಅಪೌಷ್ಟಿಕತೆಯ ಒಂದು ಬಾಹ್ಯ ಲಕ್ಷಣವಾಗಿರಬಹುದು ಎಂದು ಕಾಣಿಸುತ್ತಿದ್ದರೂ 'ದಣಿಗಳು' ಹೇಳಿದಂತೆ ಮಾತ್ರ ಮುಲಾಮು ಕೊಟ್ಟೆ. 'ಮೊದಲ ಗಿರಾಕಿ' ಕೊಟ್ಟ ಒಂದು ರೂಪಾಯಿ ಬೆಳ್ಳಿಯ ನಾಣ್ಯವನ್ನು ಎತ್ತಿಕೊಂಡು ಎರಡೆರಡು ಬಾರಿ ನೋಡಿಕೊಂಡು ಟೇಬಲ್ ಡ್ರಾಯರಿನ ಒಂದು ಮೂಲೆಯಲ್ಲಿ ಚಿಕ್ಕ ಲಕೋಟೆಯಲ್ಲಿ ಹಾಕಿ ಬಚ್ಚಿಟ್ಟೆ. ಬಹುಕಾಲ ಅದು ಅಲ್ಲೇ ಇತ್ತು. ಅ ನಂತರ ಯಾರೋ ಒಬ್ಬರು ಹಳೆಯ ನಾಣ್ಯ ಸಂಗ್ರಹಿಸುವವರು ಬಂದಾಗ ಅವರಿಗೆ ಕೊಟ್ಟು ಬಿಟ್ಟೆ. ಅದು ಆಂಗ್ಲರ ಆಡಳಿತ ಕಾಲದ ವಿಕ್ಟೋರಿಯಾ ರಾಣಿ ಛಾಪಿನ ನಾಣ್ಯವಾಗಿತ್ತು.

ಮೊದಲ ಗಿರಾಕಿಯನ್ನು ರಿಜಿಸ್ಟರಿನಲ್ಲಿ ನಮೂದಿಸಿ ಆಸೆಯ ಕಣ್ಣುಗಳಿಂದ ರಸ್ತೆಯತ್ತ ಬಾರಿ ಬಾರಿ ದಿಟ್ಟಿಸತೊಡಗಿದೆ... ಕಣ್ಣಿನ ರೆಪ್ಪೆ ಮುಚ್ಚಿ ತೆರೆದು ಮುಚ್ಚಿ ತೆರೆದು ನೋವಾಯಿತೇ ವಿನಾ 'ಗಿರಾಕಿ'ಗಳು ಯಾರೂ ಬಂದದ್ದು ಗೋಚರಿಸಲಿಲ್ಲ.

ಮತ್ತೊಮ್ಮೆ ಶಾಲೆಯ ಗಂಟೆ ಬಾರಿಸಿದ್ದು ಕೇಳಿಸಿತು. ಶಾಲೆ ಬಿಟ್ಟಿತು ಎಂಬ ಸಂತೋಷದಿಂದ ಮಕ್ಕಳು ಜೋರಾಗಿ ಕಿರುಚುತ್ತ ನಗುತ್ತ ನೆಗೆಯುತ್ತ ಕುಪ್ಪಳಿಸುತ್ತ ಪುಸ್ತಕದ ಚೀಲವನ್ನು ಬೆನ್ನ ಮೇಲೆ ತೂಗು ಹಾಕಿಕೊಂಡು ಮನೆಕಡೆಗೆ ಮುಖ ಮಾಡಿದರು. ಕೆಲವು ಮಕ್ಕಳು ಕ್ಲಿನಿಕ್ ಕಡೆಗೆ ದೃಷ್ಟಿ ಹಾಯಿಸಿ ಏನೋ ಕಿಸಿಪಿಸಿ ಮಾತಾಡಿಕೊಳ್ಳುವುದೂ ಆಯಿತು. ಒಬ್ಬ ತುಂಟ ಹುಡುಗ ಮಾತ್ರ 'ಡಾಮರ ಕಿಣಿ' ಎಂದು ನಾಮಫಲಕವನ್ನು ಓದಿಯೇ ಬಿಟ್ಟ! (ಡಾಮರ ಎಂದರೆ ರಸ್ತೆಗೆ ಹಾಕುವ ಕಪ್ಪು ಟಾರು, ಡಾಂಬರು!) ಇನ್ನೊಂದಿಷ್ಟು ಹೊತ್ತು ಕಳೆದಾಗ ಶಾಲೆಯ ಕೆಲವು ಅಧ್ಯಾಪಕರು ಒಂದು, ಕೈ ಕುಲುಕಿ, ಶುಭಾಶಯ ಹೇಳಿ ಹೋದರು. ಊರಿನ ಒಬ್ಬಿಬ್ಬ ಹಿರಿಯರು ಸಹ ಬಂದು 'ಹ್ಯಾಗಿದೆ ಅಂತ ನೋಡೋದಕ್ಕಷ್ಟೇ ಬಂದದ್ದು... ಹೆಹೆಹೆ' ಎಂದು ಹೇಳಿಬಂದ ದಾರಿಗೆ ಸುಂಕವಿಲ್ಲ

ಎಂಬುದನ್ನು ನೆನಪು ಮಾಡಿಕೊಂಡರು. ಅದಕ್ಕೂ ಮೊದಲು ಕಪಾಟುಗಳಲ್ಲಿ ಆಕರ್ಷಕವಾಗಿ ಜೋಡಿಸಿಟ್ಟದ್ದ ಔಷಧಿ ಬಾಟಲಿಗಳನ್ನೂ ಕೆಲವೊಂದು ಚಿಕಿತ್ಸಾ ಸಲಕರಣೆಗಳನ್ನು ನೋಡಿ ನೋಡಿ ಆಶ್ಚರ್ಯಪಟ್ಟರು ಎನ್ನಬೇಕು. 'ಬೇಯರ್' ಕಂಪೆನಿಯ ೩ಅಡಿ ಎತ್ತರದ ಹವಾಮಾನ ಸೂಚಕ ಬೇರೋ ಮೀಟರ್‌ನ್ನು ಕೈಯಿಂದ ಮುಟ್ಟಿ ಮುಟ್ಟಿ ನೋಡಿದರು. ಭಾರ ನೋಡುವ ಚಿಕ್ಕ 'ಮೆಶೀನ್'ನ ಮೇಲೆ ಕಾಲು ಜೋಡಿಸಿ ನಿಂತು ತಮ್ಮ ತಮ್ಮ ತೂಕವನ್ನು ತಿಳಿದುಕೊಂಡು ಸಂತೋಷಪಟ್ಟರು.

ಹಾಗೂ ಹೀಗೂ ಸೂರ್ಯ ಪಡುವಣದ ಅಂಚನ್ನು ತಲುಪುವ ಸಮಯಕ್ಕೆ ಸರಿಯಾಗಿ ತನ್ನ ತಂದೆಯನ್ನು ಕೈ ಹಿಡಿದು ನಡೆಸಿಕೊಂಡು ನಿಧಾನವಾಗಿ ಬಂದು ಕ್ಲಿನಿಕ್‌ನ್ನು ಪ್ರವೇಶಿಸಿದ ಚನಿಯಪ್ಪು. ಚನಿಯಪ್ಪು ನಮ್ಮ ನೆರೆಮನೆಯ ರಾಮಕೃಷ್ಣ ಭಟ್ಟರ ಒಕ್ಕಲು (ಖಾಯಂ ಕೂಲಿ). ಒಮ್ಮೊಮ್ಮೆ ನಮ್ಮ ತೋಟದ ಕೆಲಸಕ್ಕೂ ಬರುತ್ತಿದ್ದ. ಸುಮಾರು ನನ್ನದೇ ವಯಸ್ಸು. ಇಷ್ಟರಲ್ಲೇ ೪ ಮಕ್ಕಳ ತಂದೆ; ಹೆಂಡತಿ, ಅಪ್ಪ, ಅಮ್ಮ ಅಂತ ಏಳೆಂಟು ಜನರ ಸಂಸಾರ!

"ಅಪ್ಪನಿಗೆ ೮-೧೦ ದಿವಸಗಳಿಂದ ಜ್ವರ. ಹಗಲೆಲ್ಲ ಚೆನ್ನಾಗಿಯೇ ಇರ್‍ತಾನೆ. ರಾತ್ರೆ ಆಯಿತು ಅಂದ್ರೆ ಶೂರು –'ನೆರಕ್ಕು'ವುದು, ಚಳಿ, ನಡುಕ–ಏನೆಲ್ಲಾ ತೊಂದರೆ. ನಮಗೆ ಯಾರಿಗೂ ನಿದ್ರೆಯೇ ಇಲ್ಲ. ವಾರ ಲಾಗಾಯ್ತು ಹೀಗೆಯೇ ಆಗಿದೆ, ಸಾರ್–ಏನು ಮಾಡಲಿ ಹೇಳಿ, ನೀವು 'ಠಮ್ಮನೆ' ಗುಣ ಆಗುವಂಥಾ ಮಾತ್ರೆಯೋ ಮದ್ದೋ ಕೊಟ್ಟರೆ ತುಂಬಾ ಉಪಕಾರವಾಗುತ್ತದೆ" ಎಂಬರ್ಥದಲ್ಲಿ ತನ್ನ ಅಳಲನ್ನು ತೋಡಿಕೊಂಡ. ರೋಗಿಯನ್ನು ಪರೀಕ್ಷೆ ಮಾಡಿದೆ. ವಿವರವನ್ನೆಲ್ಲ ಕೇಳಿದ ಮೇಲೆ 'ಮಲೇರಿಯ' ಅಂತ ಖಚಿತವಾಯಿತು. 'ಜ್ವರಾರಿ' ಕಂಪೆನಿಯ ೩ ಮಾತ್ರೆ, ಮೂರು ಹೊತ್ತಿನ 'ಪಂಚತ್ತಿಕ' ಕಷಾಯ ಕೊಟ್ಟು ಮರುದಿನ ಸಂಜೆ ಬಂದು ಹೇಗಿದೆ ಅಂತ ಹೇಳು. ನೋಡೋಣ, ಕಮ್ಮಿ ಆಗುತ್ತದೆ. ಮೂರು ಮಾತ್ರೆಗಳನ್ನು ಒಂದೇ ಬಾರಿ ನುಂಗಬೇಕು ಅಂತ ಹೇಳಿ ಧೈರ್ಯ ತುಂಬಿದೆ.

ತನ್ನ ಹರಿದ ಅಂಗಿಯ ಜೇಬಿನಲ್ಲಿ ತಡಕಾಡಿ ಒಂದಿಷ್ಟು ಚಿಲ್ಲರೆ ಹಣವನ್ನು ತೆಗೆದು ಟೇಬಲ್ ಮೇಲೆ ಇರಿಸಿ, ಕೈ ಮುಗಿದ. 'ಬಿಲ್ ಎಷ್ಟೋ ಗೊತ್ತಿಲ್ಲ. ನನ್ನ ಹತ್ರ ಉಳಿದದ್ದು ಇಷ್ಟೇ' ಎಂದ ನಾನು 'ಸರಿ' ಎಂದು ತಲೆ ಅಲ್ಲಾಡಿಸಿದೆ. ಮತ್ತೊಮ್ಮೆ ಕೈ ಮುಗಿದು ಅಪ್ಪ–ಮಗ ಇಬ್ಬರೂ ಕ್ಲಿನಿಕ್‌ನಿಂದ ಹೊರಗೆ ಕಾಲಿಟ್ಟರು. ಕತ್ತಲಾವರಿಸುತ್ತಿದ್ದುದನ್ನು ಗಮನಿಸಿ ಟೇಬಲ್ ಮೇಲೆ ಇರಿಸಿದ್ದ ದೊಡ್ಡ 'ಲ್ಯಾಂಪ್'ಅನ್ನು ಉರಿಸಿ ಬತ್ತಿಯನ್ನು ಎತ್ತರಿಸಿದೆ. ಆಗ ಗೋಚರಿಸಿತು ಚನಿಯಪ್ಪು ಟೇಬಲ್ ಮೇಲೆ ಇಟ್ಟು ಹೋದ ಔಷಧಿಯ ಕ್ರಯ. ಆ ಚಿಲ್ಲರೆಯನ್ನು ಎಣಿಸಿ ನೋಡಿದೆ–೧೦ ಆಣೆಗಳು... ಅಂದಿನ ದಿನಗಳಲ್ಲಿ ದಿನಗೂಲಿ ೧ರೂಪಾಯಿ... ಚನಿಯಪ್ಪು ಅಂದಿನ ಕೂಲಿಯಲ್ಲಿ ಅಪ್ಪನ ಔಷಧಿಗೆ ೧೦ ಅಣೆಕೊಟ್ಟು ಉಳಿದ ೬ ಆಣೆಯಲ್ಲಿ ಅಕ್ಕಿ–ಉಪ್ಪು–ಮೆಣಸು ಖರೀದಿಸಿ ಮನೆಗೆ ತೆಗೆದುಕೊಂಡು ಹೋದರೇನೇ ರಾತ್ರೆ ಅವನ ಮನೆಯಲ್ಲಿ ಒಲೆ ಉರಿಯುತ್ತದೆ ಎಂಬ ಸತ್ಯ ನನಗೆ ಹೊಳೆದಾಗ ಮನಸ್ಸು ಚುರುಕ್ ಎಂದಿತು.

ಹೊರಗೆ ಕತ್ತಲು ಆವರಿಸಿತು. ಇನ್ನಿಬ್ಬರು ಒಳಗೆ ಬಂದರು ಪಿಸುಮಾತಿನಲ್ಲೇ

'ಡಾಕ್ಟರ ಫೀಸು ಎಷ್ಟಾಯಿತು?' 'ನಾನೇನು ಕೇಳಲಿಲ್ಲ. ಒಂದು ದಿನದ ಮದ್ದು ೩ಹೊತ್ತಿನ ಮಾತ್ರೆ ಕೊಟ್ಟಿದ್ದಾರೆ. ನಾನು ಹತ್ತಾಣೆ ಟೇಬಲ್ ಮೇಲೆ ಇಟ್ಟು ಕೈ ಮುಗಿದೆ.' 'ಓಹೋ... ಪಾದೆ ಆಸುಪತ್ರೆ-ಹತ್ತಾಣೆ ಡಾಕುಟ್ರು...' ಎಂಬ ಪಿಸುಮಾತು ನನ್ನ ಕಿವಿವರೆಗೂ ತಲಪಿತು. ಮುಂದೆ ಅದೇ ಖಾಯಂ ಆಯಿತು-ನನ್ನ ಹೆಸರಾಗಲೀ, ಎಲ್.ಎ.ಎಮ್.ಎಸ್ ವೈದ್ಯಪದವಿಯಾಗಲೀ-ಯಾವುದೂ ಗಣ್ಯಕ್ಕೆ ಬರಲಿಲ್ಲ. ಪಾದೆ ಆಸುಪತ್ರೆ, ಹತ್ತಾಣೆ ಡಾಕುಟ್ರು ಎಂಬುದೇ ಖಾಯಂ ಆಯಿತು. ಹೀಗೆ ಜನತಾ ಜನಾರ್ದನನಿಂದ ಪುನರ್ನಾಮಕರಣವಾಯಿತು ಮೊದಲ ದಿನವೇ...

ಮುಂದಿನ ಒಂದೆರಡು ಗಳಿಗೆ-ಬ್ಯಿಸೀ ಟೈಮ್... ಆಸುಪತ್ರೆಯಲ್ಲಿ ಜನ ದಿಮಿಕ್ಕಿದ್ದೇ ದಿಮಿಕ್ಕಿದ್ದು (ಸಣ್ಣ ಜನಸಂದಣಿ ಜಮಾಯಿಸಿದ್ದು)... 'ಗಡೀ ಎಣ್ಣೆ ಒಂದೆಂಟಾಣೆಗೆ ಕೊಡಿ ಡಾಕ್ಟ್ರೇ' 'ಜಂತುನಾಶಕ ಪುಡಿ ಉಂಟೋ ಇದ್ದರೆ ನಾಲ್ಕು ಕಟ್ಟು ಬೇಕಿತ್ತು' 'ಒಂದು ಬಾಟ್ಲಿ ಕೇಸ್ರಿ ಎಣ್ಣೆ ಬೇಕು' (ಕ್ಯಾಸ್ಟರ್ ಆಯಿಲ್-ಭೇದಿ ಎಣ್ಣೆ)... 'ನಮಗೆ ಒಂದು ಸ್ಟ್ರಾಂಗ್ ಟಾನಿಕ್ 'ಊಚುಮಾಲು' ಇದ್ರೆ ಕೊಡಿ ನೋಡುವ...'

ಹೀಗೆ ನಾನಾ ಬಗೆಯ ಜನಗಳು, ನಾನಾ ವಿಧದ ಬೇಡಿಕೆಗಳು-ಎಲ್ಲವನ್ನೂ ಸಾವಧಾನದಿಂದಲೇ ಕೇಳಿಸಿಕೊಂಡು ಅವರವರ 'ಇಷ್ಟಾರ್ಥ' ಪೂರೈಸಿ ಹಣ ಪಡೆದುಕೊಂಡು ಇನ್ನೇನು ಕ್ಲಿನಿಕ್ ಕ್ಲೋಸ್ ಮಾಡಬೇಕು ಅಂದುಕೊಳ್ಳುವಷ್ಟರಲ್ಲಿ ರಸ್ತೆಯಿಂದಲೇ ದೊಡ್ಡ ಧ್ವನಿಯಲ್ಲಿ 'ಡಾಕ್ಟ್ರೇ ಬಾಗ್ಲು ಹಾಕುವ ಟೈಮ್ ಆಯ್ತೂಂತ ಕಾಣುತ್ತದೆ- ಒಂದು ಗಳಿಗೆ ತಡೆಯಬೇಕು, ಅರ್ಜೆಂಟ್ ನಮ್ಮಲ್ಲಿಗೆ ಬರಬೇಕು' ಎಂಬ ಅಶರೀರವಾಣಿ ಕೇಳಿಸಿತು. ಎರಡು ನಿಮಿಷಗಳಲ್ಲಿ ಹೊಳೆಕರೆ ಶಂಭಟ್ಟರು ಪ್ರತ್ಯಕ್ಷ!

ಕತ್ತಲು ಗಂಟೆ ಎಂಟು... ಹೊತ್ತು ಕಂತಿದ ಮೇಲೆ ಮತ್ತು ಗಿರಾಕಿಗಳು ಬಂದದ್ದರಿಂದ ಸಂತೋಷವೂ ಆಗಿತ್ತು, ಆಯಾಸವೂ ಆಗಿತ್ತು. ಇನ್ನೇನು 'ದಿನಚರಿ' ಮುಗಿಸಿ ಮನೆ ಸೇರಿಕೊಂಡೇನು ಎನ್ನುವಷ್ಟರಲ್ಲಿ ಈ ಮನೆ ಭೇಟಿ-ಎರಡು ಮೈಲು ಹೋಗಲು ಎರಡು ಮೈಲು ಬರಲು 'ನಟರಾಜ ಸರ್ವೀಸೇ' ಗತಿ! (ಬರೀ ಕಾಲ್ನಡಿಗೆ!) ಹಾಗಿದ್ದರೂ ಭಾಗ್ಯಲಕ್ಷ್ಮಿ ಬಾಗಿಲಿಗೆ ಬಂದಾಗ 'ಬೇಡ' ಎನ್ನಲಾಗುತ್ತದೆಯೇ? 'ಕಿಟ್‌ಬ್ಯಾಗ್'ನ್ನು ರೆಡಿ ಮಾಡಿ ಭಟ್ಟರ ತುಂಡುಗುದಿಗೆ ಜವ್ವನಿಗ(ಅಂಗರಕ್ಷಕ)ನ ಕೈಗೆ ಕೊಟ್ಟು ಹೊರಟೇ ಬಿಟ್ಟೆ.

ಮುಂದಿನ ಕತೆ ಸಂಕ್ಷೇಪದಲ್ಲಿ: ಭಟ್ಟರ ಶ್ರೀಮತಿಯವರಿಗೆ ತಿಂಗಳಿಗೆ ಎರಡು ಬಾರಿ ಇಂಜೆಕ್ಷನ್ ಕೊಡಿಸುವುದು ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ... ಚುಚ್ಚುಮದ್ದು, ಸಿರಿಂಜ್, ಸೂಜಿ, ಹತ್ತಿ, ಸ್ಪಿರಿಟ್-ಎಲ್ಲವನ್ನೂ 'ರೆಡಿ' ಇಟ್ಟಿದ್ದು ಚುಚ್ಚೋದಷ್ಟೇ ನನ್ನ ಕೆಲಸ ಡಾಕ್ಟರನಾದ್ದಕ್ಕೆ ... ೫ ರೂಪಾಯಿ ನೋಟನ್ನು ಕಿಸೆಗೆ ತುರುಕಿಕೊಂಡು ಕ್ಲಿನಿಕ್‌ನತ್ತ ಮುಖಮಾಡಿದೆ. ಭಟ್ಟರ 'ಆಳು' ಬ್ಯಾಗ್ ತಂದುಕೊಟ್ಟು 'ಹಲ್ಲು ಬೇನೆಗೆ ಒಂದು ಮಾತ್ರೆ' ಕೇಳಿತೆಗೆದುಕೊಂಡು ಹೋದ. ನಾನು ದಿನದ ಕೊನೆಯ ರೋಗಿಯ ಹೆಸರು ಇತ್ಯಾದಿ ರಿಜಿಸ್ಟರಿನಲ್ಲಿ ಬರೆದು, ಜಮೆಯಾದ ಹಣವನ್ನು 'ಟೋಟಲ್' ಮಾಡಿ ನಗದಿಯನ್ನು ಎಣಿಸಿ ನೋಡಿದೆ : ೩೮ರೂಪಾಯಿ ೮ ಆಣೆ

'ಪರವಾಗಿಲ್ಲವೇ' ಅಂತ ಅಂದುಕೊಂಡು ನನಗೆ ನಾನೇ ಭೇಷ್ ಅನ್ನುತ್ತಾ ಕೈ

ಕುಲುಕಿಕೊಂಡು, ಮನೆಯತ್ತ ಬೀಸುಗಾಲು ಹಾಕಿದೆ..."

ಆ ದಿನಗಳಲ್ಲಿ ಹೊಸದಾಗಿ ಕ್ಲಿನಿಕ್ ಆರಂಭಿಸಿದ ಯುವ ವೈದ್ಯನೋರ್ವನ ಮನೋವ್ಯಾಪಾರವನ್ನು ಆಡುಭಾಷೆಯ ಸೊಗಡಿನೊಂದಿಗೆ ಸ್ವಾರಸ್ಯಕರವಾಗಿ, ಲಘುಹಾಸ್ಯ ಬೆರೆತ ಶೈಲಿಯೊಂದಿಗೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದರಿಂದಾಗಿ ಅವರ ಆತ್ಮಕತೆಯ ಈ ಭಾಗ ನನಗೆ ಅತ್ಯಂತ ಆಪ್ತವಾಯಿತು. ಆದ್ದರಿಂದ ಅದನ್ನು ಹಾಗೇ ಹಾಗೇ ನಿಮ್ಮೆದುರು ಬಿಚ್ಚಿಟ್ಟಿದ್ದೇನೆ.

ಗ್ರಾಮೀಣ ಕ್ಲಿನಿಕ್ ಎಂದಾಗ, ಅದರದ್ದೇ ಆದ ಲಕ್ಷಣಗಳಿರುತ್ತವೆ. ಈಗಲೂ ಕೂಡಾ ಹಳ್ಳಿಗಳಲ್ಲಿ ಅಂತಹ ವೈದ್ಯರ ಅಗತ್ಯ ಇದ್ದೇ ಇದೆ. ಆದರೆ ಈಗ ಎಂ.ಬಿ.ಬಿ.ಎಸ್. ಪದವೀಧರರಾದವರು ಹಳ್ಳಿಗಳಿಗೆ ಹೋಗುವುದೇ ಇಲ್ಲ; ಅಷ್ಟಕ್ಕೆ ವಿದ್ಯಾಭ್ಯಾಸ ನಿಲ್ಲಿಸುವವರೂ ಇಲ್ಲ! ಎಂ.ಡಿ.ಯನ್ನಾದರೂ ಕನಿಷ್ಠ ಪಕ್ಷ ಸ್ನಾತಕೋತ್ತರ ಪದವಿಯಾಗಿ ಪಡೆಯದೇ ಇದ್ದರೆ ಏನೂ ಪ್ರಯೋಜನವಿಲ್ಲ ಎಂಬಂತಹ ಸ್ವಘೋಷಿತ ಪರಿಸ್ಥಿತಿ ನಿರ್ಮಾಣವಾಗಿದೆ! ಹೀಗಾಗಿ ಬಿ.ಎ.ಎಂ.ಎಸ್.ಎಂಬ ಆಯುರ್ವೇದ ಪದವಿ ಪಡೆದವರು ಮಾತ್ರ ಹಳ್ಳಿಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಅವರು ಅಲೋಪತಿ ಔಷಧಿಗಳ ಸರಿಯಾದ ತರಬೇತಿಯನ್ನು ಪಡೆದಿರುವುದಿಲ್ಲ. ಆದರೆ 'ತಕ್ಷಣ ಗುಣವಾಗಬೇಕು' ಎಂಬ ಉದ್ದೇಶದಿಂದ ಹೆಚ್ಚಿನ ಮಟ್ಟಿಗೆ ಅಲೋಪತಿ ಔಷಧಿಗಳನ್ನೇ ಉಪಯೋಗ ಮಾಡುತ್ತಾರೆ. ಖಂಡಿತವಾಗಿಯೂ ಇದು ಒಳ್ಳೆಯ ಬೆಳವಣಿಗೆಯಲ್ಲ. ಹಾಗಂತ ಇದಕ್ಕೆ ಆಯುರ್ವೇದ ಪದವೀಧರರನ್ನು ಮಾತ್ರ ದೋಷಿಗಳನ್ನಾಗಿಸಲೂ ಸಾಧ್ಯವಿಲ್ಲ. ಹಳ್ಳಿಗಳಿಂದ ದಿಮುಖರಾಗಿರುವ ಎಂ.ಬಿ.ಬಿ.ಎಸ್. ವೈದ್ಯರು, ವೈದ್ಯಶಿಕ್ಷಣವ್ಯವಸ್ಥೆ, ಸರಕಾರ, ಪೋಷಕರು – ಎಲ್ಲರ ಜವಾಬ್ದಾರಿಯೂ ಇದರಲ್ಲಿದೆ. ಅಂದಿನ ಎಲ್.ಎ.ಎಂ.ಎಸ್. ಪದವೀಧರರು ಆಯುರ್ವೇದದ ಜತೆಗೆ ಅಲೋಪತಿಯಲ್ಲಿಯೂ ಮೂಲಭೂತ ಔಷಧಿಗಳ ಬಗ್ಗೆ ತಿಳಿದುಕೊಂಡು 'ಇಂಟರ್ ಗ್ರೇಟೆಡ್ ಮೆಡಿಸಿನ್' ಎಂಬ ನಾಮಕರಣವನ್ನು (ಸಮನ್ವಯಿತ ವೈದ್ಯಕೀಯ) ಪಡೆಯುವಷ್ಟರ ಮಟ್ಟಿಗೆ ಕಲಿಯುತ್ತಿದ್ದರು. ಇದು ಗ್ರಾಮೀಣ ಸೇವೆಯಲ್ಲಿ ತುಂಬ ಪರಿಣಾಮಕಾರಿಯಾಗಿತ್ತು.

ಹಳ್ಳಿಗಳಲ್ಲಿ ವೈದ್ಯವೃತ್ತಿ ನಡೆಸುವಾಗ ಅಲ್ಲಿನ ಜನರಿಗೆಲ್ಲ ಆತ್ಮೀಯನಾಗಿ ಕೌಟುಂಬಿಕ ಬಂಧುವಿನಂತಿರುತ್ತಾನೆ. ಅವರ ಮನೆಗಳಲ್ಲಾಗುವ ಪೂಜೆ, ಶ್ರಾದ್ಧ, ಅಂತ್ಯ ಸಂಸ್ಕಾರ, ಮದುವೆ, ಉಪನಯನ–ಎಲ್ಲದಕ್ಕೂ ಆತನಿಗೆ ಆಮಂತ್ರಣವಿರುತ್ತದೆ. ಕುಟುಂಬದ ಎಲ್ಲ ಸದಸ್ಯರ ಆರೋಗ್ಯ ಮಟ್ಟದ ಬಗ್ಗೆ ಖಚಿತವಾದ ಮಾಹಿತಿ ಆತನಿಗಿರುತ್ತದೆ. ಹಾಗಾಗಿ ಗಂಭೀರವಾದ ಕಾಯಿಲೆ ಬಂದಾಗ ಕೂಡ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಸರಿಯಾದ ಕಡೆಗೆ ನಿರ್ದೇಶಿಸಬಲ್ಲ ಸಾಮರ್ಥ್ಯವೂ ಆತನಿಗಿರುತ್ತದೆ. ಮನೆಯೊಂದರ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ರೀತಿ–ನೀತಿ, ಭಾವನಾತ್ಮಕ ಸಂಬಂಧಗಳ ಬಗ್ಗೆಯೂ ಅತನಿಗೆ ತಿಳಿದಿರುವುದರಿಂದ ಅಲ್ಲಿನವರ ಎಲ್ಲ ಆರೋಗ್ಯ ಸಮಸ್ಯೆಗಳ ನಿವಾರಣೆ ಆತನಿಗೆ ಸಮಸ್ಯೆಯಾಗುವುದಿಲ್ಲ. ಹೀಗಿರುವ ಕುಟುಂಬವೈದ್ಯ (Family Doctor) ಎನ್ನುವಂತಹ ಪರಿಕಲ್ಪನೆಯೂ ಈ ದಿನಗಳಲ್ಲಿ ಅಲೋಪತಿ ವೈದ್ಯರಿಂದ ದೂರ ವಾಗುತ್ತಿದೆ.

"ಒಮ್ಮೊಮ್ಮೆ ಸಾಲುಗಟ್ಟಿ ಕುಳಿತುಕೊಳ್ಳುವ ಬಡರೋಗಿಗಳು, ಆಗೊಮ್ಮೆ ಈಗೊಮ್ಮೆ ಮನೆ ಭೇಟಿಗಳು... ವಾರ ವಾರ ಮಂಗಳೂರಿನಿಂದ ಬಸ್ಸ್ ಡ್ರೈವರ್ ಮೊಯ್ದೀನ್ ಸಾಹೇಬರ ಮುಖಾಂತರ ತರಿಸುತ್ತಿದ್ದ ಔಷಧಿಗಳು–ಇವೆಲ್ಲ ದೊಡ್ಡವರ' ಗಮನಕ್ಕೆ ಬಾರದಿರಲಿಲ್ಲ. ಹಾಗಾಗಿ ನನ್ನ ರೋಗ ಶುಶ್ರೂಷಾ ವ್ಯವಸ್ಥೆಯನ್ನು ಅಷ್ಟಿಷ್ಟು ಬಳಸಿಕೊಳ್ಳಲು ಪ್ರಾರಂಭಿಸಿದರು. ಮಕ್ಕಳ ಅಲ್ಲಾಡುವ ಹಲ್ಲು (Milk tooth) ಕೀಳುವುದು, ಮಂಗಳೂರಿನ ಡಾಕ್ಟರಿಂದ ಎಂದೋ ಬರೆಸಿಕೊಂಡು ತಂದಿದ್ದ ಟಾನಿಕ್ ತರಿಸಿಕೊಡಲು ಹೇಳುವುದು, ಅವರುಗಳ ಪ್ರಿಸ್ಕ್ರಿಪ್ಷನ್ ಪ್ರಕಾರ ತಾವು ತಂದಿರಿಸಿ ಕೊಂಡಿದ್ದ ಸೂಜಿಮದ್ದನ್ನು ಮನೆ ತನಕ ಹೋಗಿ ಚುಚ್ಚುವುದು, ಗಾಯಗಳಿಗೆ ಪಟ್ಟಿ ಬದಲಿಸುವುದು, ಕಠಿಣ ಮಲಬದ್ಧತೆಯಲ್ಲಿ ಎನಿಮಾ ಕೊಡುವುದು–ಇಂಥಾ ಸೇವಾ ಸೌಲಭ್ಯವನ್ನು ನನ್ನಿಂದ ಪಡೆದುಕೊಳ್ಳುವುದು ಪ್ರಾರಂಭವಾಯಿತು... (ಹಣ ಮಾತ್ರ ತಪ್ಪದೆ ಜಮೆಯಾಗುತ್ತಿತ್ತು)

"ದಿನದಿಂದ ದಿನಕ್ಕೆ ಕ್ಲಿನಿಕ್‌ನ ಕಾರ್ಯಕ್ರಮ ಬೆಳೆಯುತ್ತಲೇ ಹೋಗುತ್ತಿತ್ತು. ಎರಡನೇ ತಿಂಗಳ ಕೊನೆಗೆ ಒಂದು ಅಂದಾಜಿನಂತೆ, ನಮ್ಮೂರವರಷ್ಟೇ ಅಲ್ಲದೆ ಅಕ್ಕಪಕ್ಕದ ಊರುಗಳಿಂದ 'ರೋಗಿಗಳು' ಬರುತ್ತಿದ್ದರು. ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. 'ಕೈಪಲ್ಸ್' (ಹಸ್ತಗುಣ) ಚೆನ್ನಾಗಿದೆ ಎಂದು ತಮ್ಮ ಭಾಷೆಯಲ್ಲೇ ಹೇಳಿ ಪ್ರಚಾರ ಪ್ರಸಾರ ಮಾಡುತ್ತಿದ್ದರು. ಕಮ್ಮಿ ಖರ್ಚು, ಸರಿಯಾದ ತಪಾಸಣೆ, ಸಮರ್ಪಕ ಚಿಕಿತ್ಸೆ–ಎಂಬ ಮೂರು ಅಂಶಗಳು ಬಡವರಿಗೆ ಅನಿರೀಕ್ಷಿತ ವರದಾನವಾಯಿತು. ನನ್ನ ಆದಾಯವೂ ಹೆಚ್ಚಿತು. ಮೊದಲಲ್ಲಿ (Royal Enfield) ಸಂಸ್ಥೆಯ ಬೈಕ್ ಬಂತು. ಆ ಬಳಿಕ ಸ್ವಂತ ಕಾರು ಕೂಡಾ ಬಂತು... ರೋಗ ಶುಶ್ರೂಷಾ ಕಾರ್ಯಕ್ರಮದಲ್ಲಿ ಯಾವುದೇ ಬದಲಾವಣೆಯಿರಲಿಲ್ಲ. ಬಡವರ ಪಾಲಿಗೆ ಹತ್ತಾಣೆ ದರ ಚಾಲೂ ಇದ್ದೇ ಇತ್ತು..." ಎಂಬುದಾಗಿ ಅಡ್ಯನಡ್ಕದಂತಹ ಪುಟ್ಟ ಊರಿನಲ್ಲಿ ತಮ್ಮ ಕ್ಲಿನಿಕ್ ಬೆಳೆದು ಬಂದ ಬಗೆಯನ್ನು ಡಾ. ಮರಕಿಣಿ ವಿವರಿಸುತ್ತಾರೆ.

ಹೀಗೆ ಗ್ರಾಮೀಣ ಪ್ರದೇಶದ ವೈದ್ಯರುಗಳಿಗೆ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ತಕ್ಕಷ್ಟು ಮಟ್ಟಿಗೆ ಗೌರವಯುತವಾದ ಬದುಕು ಒದಗುತ್ತದೆಯಾದರೂ ಇತ್ತೀಚಿನ ದಿನಗಳಲ್ಲಿ ವೈದ್ಯರು ಹಳ್ಳಿಗಳನ್ನು ಬಿಟ್ಟು ನಗರಗಳತ್ತಲೇ ಮುಖ ಮಾಡುವುದು ಏಕೆ? ಎಂಬ ಪ್ರಶ್ನೆಗೆ ಉತ್ತರ ಜನ ಸಾಮಾನ್ಯರ ವರ್ತನೆಯಲ್ಲೇ ಅಡಗಿದೆ. ವೈದ್ಯನೆಂದಲ್ಲ, ಎಲ್ಲರೂ ಇಂದು ಪೇಟೆಯಲ್ಲಿನ ಸಂಕುಚಿತವಾದ ಆದರೆ ಶೋಕಿಯ, ಗಡಿಬಿಡಿಯ ಧಾವಂತದ, ಹೊಗೆ–ಧೂಳು–ಪ್ಲಾಸ್ಟಿಕ್–ಕಸ–ಕೊಚ್ಚೆಯ ಬದುಕನ್ನೇ ಅರಸಿಕೊಂಡು, ಆರಿಸಿಕೊಂಡು 'ಕೆಟ್ಟು ಪಟ್ಟಣ ಸೇರು' ಎಂಬಂತೆ ವರ್ತಿಸುತ್ತಿದ್ದಾರೆ, ತಾನೆ? ವೈದ್ಯರು ಈ ಬೆಳವಣಿಗೆಯಿಂದ ಹೊರತಾಗಿರಲು ಹೇಗೆ ಸಾಧ್ಯ? ತಮ್ಮ ಮಕ್ಕಳಿಗೆ ಹಳ್ಳಿಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಸಿಗುವುದಿಲ್ಲ ಎಂದು ಹೇಳುವ ಅಪ್ಪ–ಅಮ್ಮಂದಿರು ಅಂಥ ಹಳ್ಳಿಗಳಲ್ಲೇ ಓದಿ ಯಶಸ್ಸುಗಳಿಸಿದವರಾಗಿರುತ್ತಾರೆ! ಆಧುನಿಕ ಸೌಲಭ್ಯ–ಸವಲತ್ತುಗಳಂತೂ ಇಂದು ಹಳ್ಳಿಗಳಲ್ಲಿ ಧಾರಾಳವಾಗಿ ಲಭ್ಯವಿರುತ್ತವೆ. ಈ ಎಲ್ಲ ಅಂಶಗಳನ್ನು ಗಮನಿಸುತ್ತಾ ಯೋಚಿಸುವಾಗ ಡಾ.ಮರಕಿಣಿಯಂಥವರು ನಮ್ಮ ಯುವ ವೈದ್ಯ ಸಮುದಾಯಕ್ಕೆ ಆದರ್ಶಪ್ರಾಯರು ಅಂತ ನನಗನಿಸುತ್ತದೆ.

ಅಡ್ಯನಡ್ಕದ ಕ್ಲಿನಿಕ್ ಅನ್ನು ಅವರು ಹೆಚ್ಚು ವರ್ಷ ನಡೆಸಲಿಲ್ಲ. ಕೇವಲ ನಾಲ್ಕು ವರ್ಷ ಮಾತ್ರ ಅಲ್ಲಿ ಕೆಲಸ ಮಾಡಿದರು. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವ' ಮರಕಿಣಿ ಮನಸ್ಸು ವೈದ್ಯಕೀಯದಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಯೂರೋಪಿಗೆ ಹೋಗುವ ತಯಾರಿ ನಡೆಸಿತು. ಹಾಗಂತ ವಿದೇಶದಲ್ಲೇ ಖಾಯಂ ಆಗಿ ನೆಲೆಗೊಳ್ಳಲಿಕ್ಕೆ ಅಲ್ಲ; ಇಲ್ಲಿನ ಪರಿಸ್ಥಿತಿಗಳಿಗೆ ಅಗತ್ಯವಿರುವ ಗ್ರಾಮೀಣ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಪಡೆಯುವುದಕ್ಕೆ ಎಲ್.ಎ. ಎಮ್.ಎಸ್.ಓದಿದವರಿಗೆ ವಿದೇಶಗಳಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶವಿರಲಿಲ್ಲ. ಹೀಗಾಗಿ ಡಾ.ಮರಕಿಣಿ, ಆ ಸಂದರ್ಭ ದೆಹಲಿಯಲ್ಲಿದ್ದ, ತಮ್ಮ ಪ್ರಾಂಶುಪಾಲ ಡಾ.ದ್ವಾರಕನಾಥರನ್ನು ಕಂಡು ಮುಖತಃ ಮಾತನಾಡಿದರು. ಖರ್ಚುವೆಚ್ಚಗಳನ್ನು ನಿಭಾಯಿಸಬಹುದಾದರೆ ಜರ್ಮನಿಯ ಹ್ಯಾಂಬರ್ಗಿನಲ್ಲಿ ಡಿಪ್ಲೊಮಾ ಇನ್ ಟ್ರೋಪಿಕಲ್ ಮೆಡಿಸಿಲ್ (ಡಿ.ಟಿ.ಎಂ–ಉಷ್ಣವಲಯದ ಕಾಯಿಲೆಗಳ ಚಿಕಿತ್ಸಾತರಬೇತಿ) ಪಡೆಯುವ ಅವಕಾಶವಿರುವುದನ್ನು ತಿಳಿಸಿದರು. ಅದರಂತೆ ಅರ್ಜಿ ಸಲ್ಲಿಸಿದಾಗ ಅವಕಾಶದ ಕರೆ ಓಡೋಡಿ ಬಂತು.

ಆರಂಭದಲ್ಲಿ ರೋರಿಂಗ್ ಪ್ರಾಕ್ಟೀಸ್ (ಕೈ ತುಂಬ ಸಂಪಾದನೆ) ಇದ್ದ ಡಾ.ಮರಕಿಣಿ ಕೊನೆಯಲ್ಲಿ ಸಾಲದ ಸುಳಿಗೆ ಸಿಲುಕಿದ್ದರು! ಇಂಗ್ವೈನಲ್ ಹರ್ನಿಯಾ ಎಂಬ ಕಾಯಿಲೆಗೆ ತುತ್ತಾಗಿ ಶಸ್ತ್ರಚಿಕಿತ್ಸೆ–ವಿಶ್ರಾಂತಿಯ ಅಗತ್ಯ ಬಿದ್ದುದು, 'ವಿಚಾರವಾಣಿ' ಪತ್ರಿಕೆಯ ಸಂಪಾದಕರಾಗಿ ಜವಾಬ್ದಾರಿ ನಿರ್ವಹಿಸತೊಡಗಿದ್ದು, ತಾಲೂಕು ಅಭಿವೃದ್ಧಿ ಮಂಡಳಿಯ ಚುನಾವಣೆ ಪ್ರಚಾರಕ್ಕಾಗಿ ಸುತ್ತ ಮುತ್ತಲ ಊರುಗಳಲ್ಲಿ ಪ್ರವಾಸಕೈಗೊಂಡುದು, ಕಾರು ಮೇಲಿಂದ ಮೇಲೆ ಅಪಘಾತಕ್ಕೊಳಗಾಗಿ ಆಗಾಗ ರಿಪೇರಿ ಮಾಡಿಸಬೇಕಾಗಿ ಬಂದುದು – ಈ ಎಲ್ಲ ಕಾರಣಗಳಿಂದಾಗಿ ಅವರ ಆರ್ಥಿಕ ಪರಿಸ್ಥಿತಿ ನಾಜೂಕಾಯಿತು. ಹೇಗೋ, ಎಲ್ಲವನ್ನೂ ನಿಭಾಯಿಸಿ ಪತ್ರಿಕೆ, ಪ್ರೆಸ್, ಕಾರು, ಕ್ಲಿನಿಕ್–ಎಲ್ಲವನ್ನೂ ಒಬ್ಬೊಬ್ಬರಿಗೆ ಒಪ್ಪಿಸಿ ಹ್ಯಾಂಬರ್ಗಿಗೆ ಹಂಬಲಿಸಿ ಹೊರಟರು.

ಮುಂಬೈನಿಂದ ಹಡಗಿನಲ್ಲಿ ಮಾರ್ಸಲಿಸ್ ಬಂದರಿಗೆ ಹೋದರು. ಅಲ್ಲಿಂದ 'ಟ್ರಾನ್ಸ್ ಯೂರೋಪ್' ರೈಲು ಹಿಡಿದು ಹ್ಯಾಂಬರ್ಗ್ ತಲಪಿದಾಗ ಒಟ್ಟು ಹದಿಮೂರು ದಿನಸಗಳ ಸುದೀರ್ಘ ಪ್ರಯಾಣ! ಅಲ್ಲಿನ 'ಟ್ರೋಪನ್ ಇನ್ಸ್‌ಟಿಟ್ಯೂಟ್' ನಲ್ಲಿ ಡಿ.ಟಿ.ಎಂ.ಕೋರ್ಸ್ ಮುಗಿಸಿದ ಬಳಿಕ ಲಂಡನ್ನಿಗೆ ಹೋದರು. ಅಲ್ಲಿ ಆರಂಭದಲ್ಲಿ ವೈಎಂಸಿಎ ಪ್ರವಾಸಿ ಮಂದಿರದಲ್ಲಿದ್ದು ಬಳಿಕ ಮಿತವೆಚ್ಚದ ತಕ್ಕಷ್ಟು ಅನುಕೂಲತೆಗಳನ್ನು ಹೊಂದಿದ್ದ 'ಇಂಡಿಯನ್ ಹಾಸ್ಟೆಲ್'ಅನ್ನು ಸೇರಿಕೊಂಡರು. ಅಂತರರಾಷ್ಟ್ರೀಯ ಕುಟುಂಬಯೋಜನಾ ಸಂಸ್ಥೆ ನಡೆಸುತ್ತಿದ್ದ ಜನನ ನಿಯಂತ್ರಣ–ಕುಟುಂಬಕಲ್ಯಾಣಗಳಿಗೆ ಸಂಬಂಧಿಸಿದ ಎರಡು ಕೋರ್ಸ್‌ಗಳಿಗೆ ಸೇರಿದರು. ಕ್ರೈಡನ್ ಮುಂತಾದ ಲಂಡನ್ನಿನ ಪ್ರಸಿದ್ಧ ಆಸ್ಪತ್ರೆಗಳಲ್ಲಿ ಪ್ರತ್ಯಕ್ಷ ಶಿಕ್ಷಣ–ತರಬೇತಿಗಳನ್ನು ಗಳಿಸಿದರು. ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಆಗ ರೂಪುಗೊಳ್ಳುತ್ತಿದ್ದ 'Health For all' (ಎಲ್ಲರಿಗೂ ಆರೋಗ್ಯ) ಎಂಬ ವಿಚಾರಧಾರೆಗೆ ಸಂಬಂಧಿಸಿದ ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸಿದರು. ಆ ಬಳಿಕ ಐರ್ಲೆಂಡಿನ ಡಬ್ಲಿನ್‌ನಲ್ಲಿ ಟ್ರಿನಿಟಿ ಹಾಸ್ಪಿಟಲ್‌ನಲ್ಲಿ 'ನವಜಾತ ಶಿಶುಸಂರಕ್ಷಣೆ' ಕುರಿತಾದ ತರಬೇತಿಗೆ ಸಿದ್ಧತೆ

ಮಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಭಾರತದ ಉತ್ತರ ಭಾಗದಲ್ಲಿ ಗಡಿವಿವಾದ ಉಲ್ಬಣಿಸಿದುದರಿಂದಾಗಿ ವಿದೇಶೀ ಪರವಾನಿಗೆಯನ್ನು ವಿಸ್ತರಿಸುವುದು ಕಷ್ಟವಾಯಿತು. ತರಾಕುರಿಯಲ್ಲಿ ಡಾ.ಮರಕಿಣಿ ಭಾರತಕ್ಕೆ ವಾಪಸಾಗಬೇಕಾಯಿತು. ವಿದೇಶದಲ್ಲಿನ ಕೆಲವು ವಿಚಾರಗೋಷ್ಠಿಗಳಲ್ಲಿ, ಆಂಧ್ರಪ್ರದೇಶದ ತೆಲಂಗಾಣ ಹಾಗೂ ಹೈದರಾಬಾದ್ ಕರ್ನಾಟಕ (ರಾಯಚೂರು-ಬೀದರ್-ಗುಲ್ಬರ್ಗ) ಗಳಲ್ಲಿ ಆರೋಗ್ಯ ಸೇವೆಗಳ ಪರಿಸ್ಥಿತಿ ನಮ್ಮಲ್ಲಿನ ಹಳ್ಳಿಗಳಿಗಿಂತಲೂ ತೀರಾ ಹಿಂದುಳಿದಿದೆ, ಅದರಲ್ಲೂ ಹರಿಜನ-ಗಿರಿಜನ-ಲಂಬಾಣಿ ವರ್ಗಗಳ ಜನರಿಗೆ ಆರೋಗ್ಯ ಸೌಲಭ್ಯಗಳು ಇಲ್ಲವೇ ಇಲ್ಲವೆಂಬಷ್ಟು ಕಡಿಮೆ ಎಂಬಿತ್ಯಾದಿ ಅಂಶಗಳು ಮರಕಿಣಿಯವರ ಗಮನ ಸೆಳೆದವು. ಮಾಡಿದರೆ ಅಂಥವರಿಗೋಸ್ಕರ ಏನಾದರೂ ಕೆಲಸ ಮಾಡಬೇಕು ಎನ್ನುವ ನಿರ್ಧಾರ ಮನದಲ್ಲಿ ಮೂಡಿದ್ದು ಆವಾಗಲೇ.

*****

ಮಂತ್ರಾಲಯದ ಬಳಿ ತುಂಗಭದ್ರಾದಲ್ಲಿ ಪ್ರಖ್ಯಾತ ವೈದ್ಯ ಪಂಡಿತ ತಾರಾನಾಥರು 'ಪ್ರೇಮಾಯತನ ತಾರಾನಾಥ ಚಿಕಿತ್ಸಾಲಯ'ವನ್ನು ನಡೆಸುತ್ತಿದ್ದರು. ಅವರು ಸ್ವರ್ಗಸ್ಥರಾದಾಗ ಚಿಕಿತ್ಸಾಲಯ ಮುಚ್ಚಿ ಹೋಗಿತ್ತು. ಬಳಿಕ ಅವರ ಮಗ ರಣಬೀರ್ ತಾರಾನಾಥ್ ವೈದ್ಯಕೀಯ ವ್ಯಾಸಂಗ ಮುಗಿಸಿ ಬಂದು ವಿಟ್ಲದ ಸರಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಣೆಗೆ ತೊಡಗಿದರು. ಮನದ ಮೂಲೆಯಲ್ಲಿ ತಮ್ಮ ತಂದೆಯ ಆಸ್ಪತ್ರೆಯನ್ನು ಮರಳಿ ಪ್ರಾರಂಭಿಸಬೇಕೆಂಬ ಆಸೆಯೇನೋ ಇತ್ತು; ಸದ್ಯ ಸರಕಾರಿ ಕರ್ತವ್ಯದ ಕಾರಣ ಅನುಕೂಲತೆ ಇರಲಿಲ್ಲ. ಅಂತಹ ಡಾ.ರಣಬೀರ್ ಮರಕಿಣಿಯವರಿಗೆ ಆತ್ಮೀಯರಾಗಿದ್ದರು.

ಮರಕಿಣಿ ಮನಸ್ಸಿಗೆ ಹತ್ತಿರವಾಗಿದ್ದ ಇನ್ನೊಬ್ಬರು ಡಾ. ಸಬಿತಾ. ವಿಟ್ಲದಲ್ಲಿ ಹೈಸ್ಕೂಲು ಮೆಟ್ಟಲು ಹತ್ತುವಾಗಲೇ ಅವರ ವಿವಾಹ ಸ್ಫುರದ್ರೂಪಿಯಾದ ವಿದ್ಯಾವಂತ ಸಿರಿವಂತ ಯುವಕನೊಡನೆ ನಡೆದಿತ್ತು. ಆದರೆ ಅವರೀರ್ವರ ನಡುವೆ ಸಾಂಸಾರಿಕ ಜೀವನ ಪ್ರಾರಂಭವಾಗಲೇ ಇಲ್ಲ. ತನ್ನ ಅಕ್ಕನ ಮನೆಯಲ್ಲಿದ್ದುಕೊಂಡು ವಿದ್ಯಾಭ್ಯಾಸ ಮುಂದುವರಿಸಿದ ಸಬಿತಾ, ಮೈಸೂರಿನಲ್ಲಿ ವೈದ್ಯಶಿಕ್ಷಣ ಪಡೆದು ಎಲ್.ಎ.ಎಂ.ಎಸ್ ಪದವಿಯೊಂದಿಗೆ ಡಾಕ್ಟರ್ ಆಗಿ ಊರಿಗೆ ಮರಳಿ ವಿಟ್ಲದಲ್ಲಿಯೇ ಸ್ವಂತ ಚಿಕಿತ್ಸಾಲಯ ತೆರೆದು ಅಲ್ಪಕಾಲದಲ್ಲಿಯೇ ವೃತ್ತಿರಂಗದಲ್ಲಿ ಅಪಾರ ಯಶಸ್ಸು – ಜನಮನ್ನಣೆ ಗಳಿಸಿದ್ದರು. ಆದರೆ ಅಸಫಲವಾದ ವೈವಾಹಿಕ ಬದುಕು ವಿಚ್ಛೇದನದಲ್ಲಿ ಕೊನೆ ಗೊಂಡಿತ್ತು. ತನ್ನಂತೆಯೇ ಹವ್ಯಕ ಬ್ರಾಹ್ಮಣರಾಗಿದ್ದ ಸಬಿತಾರ ವೈದ್ಯಕೀಯ ಶಿಕ್ಷಣದ ಸಂದರ್ಭದಲ್ಲಿ ಅವರಿಗೆ ಅಗತ್ಯ ಸಹಕಾರ-ಪ್ರೋತ್ಸಾಹಗಳನ್ನು ನೀಡಿದ್ದರು, ಡಾ. ಮರಕಿಣಿ. ಹೀಗಾಗಿ ಅವರೀರ್ವರ ನಡುವೆ ಆಪ್ತತೆ ಬೆಳೆದಿತ್ತು.

ಮಂಗಳೂರು ಫಾದರ್ ಮುಲ್ಲರ್ಸ್ ಆಸ್ಪತ್ರೆಯಲ್ಲಿ ಹರ್ನಿಯಾ ಕಾಯಿಲೆಗೋಸುಗ ಚೂರಿ-ಕತ್ತರಿಗಳಿಗೆ ತನ್ನನ್ನೊಪ್ಪಿಸಿಕೊಂಡು, ಬಳಿಕ ವಿಶ್ರಾಂತಿ ಪಡೆಯುತ್ತಿದ್ದ ಸಂದರ್ಭ ಒಂದು ಮಧ್ಯಾಹ್ನ ನಡೆದ ಮನಕಲಕುವ ಮಾತುಕತೆಯನ್ನು (ಹವ್ಯಕ ಭಾಷೆಯಲ್ಲಿದೆ) ಮರಕಿಣಿ ಮಾತುಗಳಲ್ಲೇ ಕೇಳಿ:

"ಮಧ್ಯಾಹ್ನ ಸ್ವಲ್ಪಹೊತ್ತು ಮೀರಿದ ಕಾರಣ ಟೇಬಲ್ ಮೇಲೆ ಇರಿಸಿದ್ದ ಆಹಾರವನ್ನು

ಅವಸರವಸರವಾಗಿ ಮುಗಿಸುತ್ತಿದ್ದೆ. ಊಟ ರುಚಿಯಾಗಿತ್ತು. ಹಸಿವೂ ಚೆನ್ನಾಗಿತ್ತು. ಕೊನೆಯ ತುತ್ತನ್ನು ಕೈಗೆತ್ತಿಕೊಳ್ಳಬೇಕೆನ್ನುವಾಗ ಅರೆತೆರೆದ ಕೋಣೆಯ ಬಾಗಿಲಿನಿಂದ ಒಳಬಂದು 'ಎಂತ ಊಟ ಜೋರಾಗಿ ಸಾಗಿದ ಹಾಂಗಿದ್ದು' ಎಂಬ ಪರಿಚಿತ ಧ್ವನಿ ಕೇಳಿಸಿತು.

ಕೈ ಯಲ್ಲಿ ತುತ್ತನ್ನು ಹಿಡಿದುಕೊಂಡೇ ಅತ್ತ ಮುಖ ಮಾಡಿ, 'ಓಹೋ ನೀನೋ, ಉಂಬಾಗ ಬಂದೋರು ಭಾರೀ ಹತ್ರಾಣೋರು ಹೇಳುವ ಗಾದೆ ಇದ್ದು.

'ಹಾಂಗೊಂದು ಗಾದೆ ಇದ್ದೋ, ಎನಗೆ ಗೊಂತಿಲ್ಲೆ. ಇನ್ನೂ ಎಂತೆಲ್ಲಾ ಗಾದೆಗೊ ಇದ್ದೋ ಏನೋ' ಕಿರುನಗೆಯೊಂದಿಗೆ ಕಚಗುಳಿ ಇಡುವ ಮಾರ್ದನಿಯ ಉತ್ತರ ಬಂತು.

'ಅದೆಂತಾರೂ ಇರಲಿ, ಕೂರು. ಆನು ಕೈ ತೊಳಕ್ಕೊಂಡು ಬತ್ತೆ' ಎನ್ನುತ್ತಾ ಊಟದ ತಟ್ಟೆಯನ್ನು ಟೇಬಲ್ಲಿನ ಮೂಲೆಗೆ ತಳ್ಳಿ ಬೇಸಿನ್‌ನಲ್ಲಿ ಕೈ ಬಾಯಿ ತೊಳೆದು ಬಂದು –

'ಹೊಟ್ಟೆ ರಜಾ ಬಾದಿ ಭಾಳಾ ಆಯಿದು – ಹಾಸಿಗೆಲಿ ಕಾಲು ಬಿಡ್ಸುತ್ತೆ' ಎಂದು ಹೇಳಿ ಕಾಲು ಚಾಚಿದೆ.

'ಹ್ಞೂ, ಹೇಳು ಸಬಿತಾ, ಎಂತ ಸಮಾಚಾರ?'

'ಆನು ವಿಟ್ಲದ ಕ್ಲಿನಿಕ್‌ನ ಕ್ಲೋಸ್ ಮಾಡಿದೆ'

'ಮತ್ತೆ, ಮುಂದೆ?"

'ರಣ ಬೀರ ಹೇಳಿದ, ತುಂಗಭದ್ರ–ಪ್ರೇಮಾಕ್ಲಿನಿಕ್'

ಒಂದು ಕ್ಷಣ ನನ್ನ ಎದೆ ಧಡಕ್ ಎಂದಿತು. ಅಲ್ಲಿಗೆ ಹೋಗುವ ವಿಚಾರ ಮಾಡಿದ್ದು ನಾನು. ಆದರೆ ಇದೇನು ಈಗ? ಸ್ವಲ್ಪ ಹೊತ್ತು ಸುಮ್ಮನಿದ್ದು ಮನಸ್ಸು ಸ್ಥಿಮಿತಕ್ಕೆ ಬಂದ ಮೇಲೆ ಏನೋ ಹೇಳಲು ಬಾಯಿ ತೆರೆಯುವಷ್ಟರಲ್ಲಿ.

'ಅಲ್ಲಿ ನರ್ಸಿಂಗ್ ಹೋಂ ನಡೆಶುಲಕ್ಕು–ಇಬ್ರೂ ಸೇರಿಗೊಂಡರೆ'

ಮತ್ತೊಮ್ಮೆ ಎದೆ ಡವಡವ. ಇದ್ದ ಬದ್ದ ಧೈರ್ಯವನ್ನೆಲ್ಲ ಒಟ್ಟುಗೂಡಿಸಿ ಕೇಳಿದೆ.

'ನೀನು – ಎನ್ನ (ನನ್ನನ್ನು)...'

ಮುಂದಿನ ಶಬ್ದವನ್ನು ಉಸುರುವ ಅಗತ್ಯ ಬರಲಿಲ್ಲ.

ನನ್ನ ಕೆನ್ನೆಯ ಮೇಲೆ ಎರಡು ಹನಿ ಕಣ್ಣೀರು ಬಿತ್ತು–ಅದು ಸುಖೋಷ್ಣವಾಗಿತ್ತು. ಪ್ರೀತಿ, ವಿಶ್ವಾಸದ, ಆತ್ಮೀಯ ಭರವಸೆಯ, ಸ್ನೇಹಪೂರ್ವಕವಾದ ಆನಂದಾಶ್ರು...

ಹೀಗೆ ನಿವೇದನೆಗೊಂಡ ಎಂ.ಬಿ.–ಸವಿತಾ ಪ್ರೇಮ, ಮಂತ್ರಾಲಯ ರೋಡ್ ಸ್ಟೇಷನ್ ಬಳಿಯ ಪ್ರೇಮಾಯತನ ಆಶ್ರಮದಲ್ಲಿ ವಿವಾಹವಾಗುವ ತನಕ ಮುಂದುವರಿದು ದಿ.ಪಂಡಿತ ತಾರಾನಾಥರ ಪ್ರೇಮ ಚಿಕಿತ್ಸಾಲಯವನ್ನು ಜಂಟಿಯಾಗಿ ನಿರ್ವಹಿಸುವ ಮೂಲಕ ಗಟ್ಟಿಯಾಯಿತು; ಬೆಳೆದು ಹೆಮ್ಮರವಾಯಿತು.

ಅವರ ಮಧುಚಂದ್ರ ಪ್ರೇಮಚಿಕಿತ್ಸಾಲಯದ ಪುನರುಜ್ಜೀವನದಲ್ಲಿ ಕಳೆಯಿತು. ಇಪ್ಪತ್ತು ವರ್ಷಗಳ ಕಾಲ ಬಾಗಿಲು ಮುಚ್ಚಿದ್ದ ದವಾಖಾನೆಯನ್ನು ಪುನರಾರಂಭಿಸಿ ಸುವ್ಯವಸ್ಥಿತಗೊಳಿಸಿದರು. ಸುಮಾರು ಒಂದು ವರ್ಷಕಾಲ ಡಾ. ಮರಕಿಣಿ ದಂಪತಿಗಳ ಸಾರಥ್ಯದಲ್ಲಿ ಪುನರುತ್ಥಾನಗೊಂಡ ಆ ಆಸ್ಪತ್ರೆಯನ್ನು, ಬಳಿಕ ಡಾ.ರಣಬೀರ ತಾರಾನಾಥರೇ

ವಹಿಸಿಕೊಂಡರು. ವಿಟ್ಲದ ಸರಕಾರಿ ಆಸ್ಪತ್ರೆಯನ್ನು ಬಿಟ್ಟು ಬಂದು ತಮ್ಮ ತಂದೆಯ ಹೆಸರಿನ ಚಿಕಿತ್ಸಾಲಯವನ್ನು ತಾವೇ ಮುನ್ನಡೆಸತೊಡಗಿದರು. ಡಾ.ಮರಕಿಣಿ ತಂಡದಲ್ಲಿ ಶುಶ್ರೂಷಕಿಯಾಗಿದ್ದ ಚಂದ್ರಾವತಿಯವರನ್ನು ಪ್ರೇಮಿಸಿ ವಿವಾಹವಾದ ಅವರು ತನ್ಮೂಲಕ ಅವರನ್ನಲ್ಲೇ ಉಳಿಸಿಕೊಂಡರು. ಡಾ. ಮರಕಿಣಿ ಜೋಡಿ, ತಮ್ಮ 'ಅಲೆಮಾರಿ' ಜೀವನದ ಮುಂದಿನ ನಿಲ್ದಾಣವಾದ ಹೈದರಾಬಾದ್ ಕರ್ನಾಟಕದ ಹಿಂದುಳಿದ ಪ್ರದೇಶವಾದ ಚಿತ್ತಾಪುರ (ಗುಲಬರ್ಗಾ ಜಿಲ್ಲೆಯ ತಾಲೂಕು ಕೇಂದ್ರ)ಕ್ಕೆ ಚಿತ್ತೈಸಿತು.

ಹದಿನಾಲ್ಕು ವರ್ಷ 'ಯೌವನ'ವಾಸ

'ಮೊಗ್ಲಾಯಿ' ಊರುಗಳೆಂಬ ಅಡ್ಡ ಹೆಸರನ್ನು ಪಡೆದಿದ್ದ ಜಿಲ್ಲೆಗಳು–ಹೈದರಾಬಾದ್ ಕರ್ನಾಟಕದ, ನಿಜಾಮರ ಆಡಳಿತಕ್ಕೆ ಸೇರಿದ್ದ ರಾಯಚೂರು–ಬೀದರ್–ಗುಲಬರ್ಗಾ (ಈಗಿನ ಕೊಪ್ಪಳ ಮತ್ತು ಯಾದಗಿರಿ ಕೂಡ). ಚಿತ್ತಾಪುರವೆಂಬುದು ತಾಲೂಕು ಕೇಂದ್ರವಾಗಿದ್ದರೂ ಕೂಡಾ ಹಳ್ಳಿಯಂತೆಯೇ ಇತ್ತಲ್ಲದೆ ನಗರ ಜೀವನದ ಲಕ್ಷಣಗಳೇನೂ ಇರಲಿಲ್ಲ. ಅಂತಹ ಚಿತ್ತಾಪುರದಲ್ಲಿ ತಮ್ಮ ತಿರುಗಾಟದ ಹಾಗೂ ಜೀವನದ ದೊಡ್ಡ ಪಾಲನ್ನು ಕಳೆದರು ಡಾ.ಎಂ.ಬಿ.ದಂಪತಿ–ಸುಮಾರು ಹದಿನಾಲ್ಕು–ಹದಿನೈದು ವರ್ಷ. ಹಾಗಾಗಿ ಇದನ್ನು 'ಹದಿನಾಲ್ಕು ವರ್ಷದ ವನವಾಸ' ಅಂತ ಕರೆದರು! ಆದರೆ ನಿಜವಾಗಿ ಅವರ 'ಯೌವನವಾಸ'ವೂ ಅದೇ ಆಗಿತ್ತು! ಆ ಕಾಲದಲ್ಲಿಯೇ ಈರ್ವರು ಮಕ್ಕಳು (ನಾರಾಯಣ, ಗೌರಿ) ಅವರ ಮಡಿಲನ್ನು ತುಂಬಿದರು; ಬದುಕಿಗೆ ಬಣ್ಣಗಳನ್ನು ತುಂಬಿದರು!

ಹತ್ತಿರದ ಆಸುಪಾಸಿನಲ್ಲಿ ಸರಿಯಾದ ಶಾಲೆಗಳು ಇರಲಿಲ್ಲ. ಹೀಗಾಗಿ ಅನಿವಾರ್ಯ ವಾಗಿ, ತಮ್ಮ ಮಕ್ಕಳ ಶಿಕ್ಷಣಕ್ಕೋಸ್ಕರವಾಗಿಯಾದರೂ, ಹೊಸದೊಂದು ಶಾಲೆಯನ್ನೇ ಹುಟ್ಟು ಹಾಕುವಂತಾಯಿತು. ಹತ್ತನೇ ತರಗತಿಯ ತನಕ ಹೆತ್ತವರ ಜತೆಯಲ್ಲಿಯೇ ಇದ್ದುಕೊಂಡು ಮಕ್ಕಳು ಬೆಳೆಯಬೇಕೆಂದು ಡಾ. ಸಬಿತಾ ಹಟಮಾಡಿದ್ದು ಇಂಥದೊಂದು ಗಮನಾರ್ಹ ಬೆಳವಣಿಗೆಗೆ ಮೂಲವಾಯಿತು!

ಆಗ ಒಮ್ಮೆ, ಶಾಲೆಗೆ ಸರಕಾರದ ಅನುಮತಿ ಸಿಗಬೇಕಾದರೆ ಕನಿಷ್ಠ ನಲುವತ್ತು ಮಕ್ಕಳು ಬೇಕೆಂಬ ನಿಯಮ ಬಂತು. ಆದರೆ ಆ ಶಾಲೆಗೆ, ಊರಿಡೀ ಕಷ್ಟಪಟ್ಟು ಹುಡುಕಿದರೂ ೩೦ಕ್ಕಿಂತ ಹೆಚ್ಚು ಮಕ್ಕಳು ಸಿಗಲಿಲ್ಲ. ಡಾಕ್ಟ್ರು ಚಿಂತೆಯಲ್ಲಿರುವಾಗ, ಅವರಲ್ಲಿಗೇ ಖಾಯಂ ಆಗಿ ಚಿಕಿತ್ಸೆಗೆ ಬರುವ ಸಿರಿವಂತರೊಬ್ಬರು ಎಲ್ಲಿಂದಲೋ ಹತ್ತು ಮಂದಿ ಮಕ್ಕಳನ್ನು ಒಮ್ಮೆಲೇ ಗಾಡಿಯಲ್ಲಿ ಕರೆದುಕೊಂಡು ಬಂದು "ತಗೊಳ್ಳಿ.... ಸಾಕಲ್ಲ ಗೌರ್ಮೆಂಟ್ ರೆಕಗ್ನಿಷನ್‌ಗೆ...?" ಅಂದರು! ಈಗ ಆ ಮಕ್ಕಳಿಗೆ ವಸತಿಯ ವ್ಯವಸ್ಥೆಯನ್ನೂ ಮಾಡಬೇಕಾಗಿ ಬಂತು! ಅಂತೂ ಊರವರ ಸಹಕಾರದಿಂದ ಅದಕ್ಕೂ ವ್ಯವಸ್ಥೆಯಾಯಿತು. ಗೌಡರೊಬ್ಬರಿಂದ ಒಂದು ದನ, ಒಂದು ರಾಶಿ ಜೋಳದಂಟು ಸರಬರಾಜಾಯಿತು.

ಹೀಗೆ ಪ್ರಾರಂಭವಾದ ಶಿಕ್ಷಣ ಸಂಸ್ಥೆಯೊಂದು ಈಗ ಹೈಸ್ಕೂಲ್ ಹಂತದವರೆಗೆ ಬೆಳೆದಿದ್ದು ವಿದ್ಯಾರ್ಥಿನಿಲಯವನ್ನೂ ಕೂಡಾ ಹೊಂದಿ, ಮಂಗಳೂರಿನ 'ಬೆಥನಿ ಎಜ್ಯುಕೇಶನ್ ಸೊಸೈಟಿ' ಯಿಂದ ನಿರ್ವಹಿಸಲ್ಪಡುತ್ತ ಇದೆ. ಆರಂಭದ ದಿನಗಳಲ್ಲಿ ಆ

ಶಾಲೆಯಲ್ಲಿ ಓದಿದ ಹಲವು ಮಂದಿ ಇಂದು ಉತ್ತಮ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎಷ್ಟೋ ವರ್ಷಗಳ ಬಳಿಕ, ೯೩ ವರ್ಷದ ವಯೋವೃದ್ಧ ಮುದ್ದೇ ಗೌಡ ಎಂಬವರು ಡಾ.ಮರಕಿಣಿ ಯವರ ಭೇಟಿಯಾದ ಸಂದರ್ಭದಲ್ಲಿ ಹೇಳಿದರಂತೆ: "ನೀವು ಸುರು ಮಾಡಿದ ಶಾಲೆಯಲ್ಲಿ ಓದಿದ ನನ್ನ ಮಕ್ಕಳಿಬ್ಬರೂ ದೊಡ್ಡ ಹುದ್ದೆಯಲ್ಲಿದ್ದಾರೆ. ಮಗ ಎಂ.ಎ. ಮಾಡಿ ಒಂದು ಕಂಪೆನಿಯಲ್ಲಿ ಪ್ರಾದೇಶಿಕ ಪ್ರಬಂಧಕನಾಗಿದ್ದಾನೆ. ಮಗಳು ಎಂ.ಎ.ಎಲ್.ಎಲ್.ಬಿ. ಮಾಡಿದ್ದಾಳೆ... "ಅಂತ. ಸಾರ್ಥಕ್ಯದ ಭಾವ ತುಂಬದಿದ್ದೀತೆ ಡಾ.ಮರಕಿಣಿ ಮನದಲ್ಲಿ?

ಚಿತ್ತಾಪುರದಲ್ಲಿ ಕೇವಲ ಶಾಲೆಯನ್ನಷ್ಟೇ ಅಲ್ಲ, ಹತ್ತು ಹಲವು ಚಟುವಟಿಕೆಗಳಿಗೆ ಶ್ರೀಕಾರ ಹಾಕಿದರು ಎಂ.ಬಿ. ಗಣೇಶೋತ್ಸವ, ದಸರಾ, ದೀಪಾವಳಿ ಮೊದಲಾದ ಹಬ್ಬಗಳನ್ನು ಸಾರ್ವಜನಿಕವಾಗಿ ಆಚರಿಸುವ ಮೂಲಕ ಜನಜಾಗೃತಿ ಮೂಡಿಸಿದರು. ಚಿತ್ತಾಪ್ರೆಸ್, ಉಚಿತ ವಾಚನಾಲಯ, ಯುವಕ ಸಂಘ ಇತ್ಯಾದಿಗಳು ಆರಂಭಗೊಂಡು ಎಡೆಬಿಡದೆ ಕಾರ್ಯಾಚರಿಸತೊಡಗಿದವು. ಸತತ ಬರಗಾಲದಿಂದ ಆ ಪರಿಸರವು ಕಂಗೆಟ್ಟಾಗ ಇಪ್ಪತ್ತೈದು ಕಡೆಗಳಲ್ಲಿ ಗಂಜಿಕೇಂದ್ರಗಳನ್ನು ನಡೆಸಿದ್ದುದಷ್ಟೇ ಅಲ್ಲದೆ, ಹಸುಗಳಿಗೆ ಮೇವು, ಉಚಿತ ಬಟ್ಟೆ ಬರೆ, ಉಚಿತ ವೈದ್ಯಕೀಯ ಶಿಬಿರಗಳು–ಮೊದಲಾದ ಮೂಲಭೂತ ಸೌಲಭ್ಯಗಳನ್ನೂ ಸೇವಾರೂಪದಲ್ಲಿ ವ್ಯವಸ್ಥೆ ಮಾಡಲಾಯಿತು. ಈ ಸೇವೆಗಳ ಸಮಾರೋಪ ಸಮಾರಂಭದಲ್ಲಿ ಅಂದಿನ ಕರ್ನಾಟಕದ ರಾಜ್ಯಪಾಲರು ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿ ಯುವ ಸಂಘಟನೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಇವೆಲ್ಲವುಗಳ ಹಿಂದಿನ ಕ್ರತು ಶಕ್ತಿ ಡಾಕ್ಟ್ರದ್ದಾಗಿತ್ತು.

ಬಹುಮುಖಿಯಾದ ಸಾಮಾಜಿಕ ಕಾರ್ಯಕ್ರಮಗಳಿಗೆ ಮುನ್ನುಡಿ ಬರೆದಿದ್ದು ಡಾ. ಮರಕಿಣಿ ದಂಪತಿಯ 'ಮೈಸೂರು ದವಾಖಾನೆ'. ಹೆರಿಗೆ ವಾರ್ಡ್ ಸಹಿತವಾಗಿ ಊರ–ಪರವೂರ ಬಳ–ಹೊರ ರೋಗಿಗಳಿಗೆ ಸಕಲ ಪ್ರಾಥಮಿಕ ಚಿಕಿತ್ಸೆಗಳ ಕೇಂದ್ರವಾಗಿ ಅದು ರೂಪುಗೊಂಡಿತ್ತು. ಇನ್ನಷ್ಟು ಜನರ ಹತ್ತಿರಕ್ಕೆ ಹೋಗಬೇಕೆಂಬ ಉದ್ದೇಶದಿಂದ ದೂರದೂರದ ೨೫ ಗ್ರಾಮಗಳು, ತಾಂಡಾಗಳಿಗೆ ಸಂಚಾರಿ ಚಿಕಿತ್ಸಾಘಟಕವನ್ನೂ ಪ್ರಾರಂಭಿಸಲಾಯಿತು. ಅದು ಮಾತ್ರ ಹೆಚ್ಚು ಕಾಲ ಮುಂದುವರಿಯಲ್ಲಿಲ್ಲ.

ಚಿತ್ತಾಪುರದ ಚಿತ್ತಾಕರ್ಷಕ ಪರಿಸರದಲ್ಲಿನ ಈ 'ಯೌವನವಾಸ'ಕ್ಕೆ ಊರಿನಿಂದ ಬಂದ ಬಂಧುಬಳಗದ ಮಕ್ಕಳೂ ರಜಾಕಾಲದಲ್ಲಿ ಸಾಥ್ ನೀಡುತ್ತಿದ್ದರು. ಎಂ.ಬಿ. ತಮ್ಮಂದಿರಿಗೆ ಎರಡನೆಯ ತವರುಮನೆಯಾಗಿತ್ತುದು. ತಂದೆ ನಾರಾಯಣಭಟ್ಟರು ಕೂಡ ವರ್ಷಕ್ಕೊಮ್ಮೆ ಬಂದು ೧೦–೧೫ದಿನ ಇದ್ದು ವಾಪಸಾಗುತ್ತಿದ್ದರು. ಅರ್ಧಕ್ಕೇ ನಿಂತಿದ್ದ ತಮ್ಮ ವೆಂಕಟರಮಣ ಭಟ್ಟರ ಎಂ.ಬಿ.ಬಿ.ಎಸ್ ವ್ಯಾಸಂಗವೂ ಇದರದೇ ಸ್ಫೂರ್ತಿಯಿಂದ ಮತ್ತೆ ಮುಂದುವರಿದು ಪೂರ್ತಿಗೊಂಡಿತು.

ಚಿತ್ತಾಪುರದಲ್ಲಿದ್ದಾಗ ಸಾಹಿತ್ಯ ಕೃಷಿಯೂ ಜೋರಾಗಿ ನಡೆಯಿತು. ಸುಧಾ, ಪ್ರಜಾಮತ, ಕಸ್ತೂರಿ ಮುಂತಾದ ಪತ್ರಿಕೆಗಳಲ್ಲಿ ವೈದ್ಯಕೀಯ ಜೀವನದ ಅನುಭವಗಳನ್ನು ವಿವರಿಸುವ ಹಲವಾರು ಲೇಖನಗಳನ್ನು ಬರೆದರು. ವೈದ್ಯ ಸಾಹಿತಿಯಾಗಿ ನಾಡಿನಾದ್ಯಂತ

ಗುರುತಿಸಲ್ಪಟ್ಟು ಅಖಿಲ ಕರ್ನಾಟಕ ವೈದ್ಯ ಸಾಹಿತಿಗಳ ಸಮ್ಮೇಳನ (ಬೆಳಗಾವಿ)ಕ್ಕೂ ಆಹ್ವಾನಿತರಾದರು. ಡಾ.ಕೆ.ಎ.ಅಶೋಕ ಪೈಯವರಂಥ ಪ್ರಸಿದ್ಧ ವೈದ್ಯಲೇಖಕರಿಂದ ಪ್ರಶಂಸೆಯನ್ನೂ ಪಡೆದರು. ವೈದ್ಯಕೀಯವನ್ನೂ ದಾಟಿ, ಧಾರವಾಡ ಆಕಾಶವಾಣಿಯಲ್ಲಿ "ಸರಸ್ವತಿಯ ತವರು ನಾಗಾಯಿ" ಎಂಬ ಶಬ್ದ ಚಿತ್ರದ ಮೂಲಕ ಚಿತ್ತಾಪುರದ ಹತ್ತಿರದ 'ನಾಗಾಯಿ'ಯ ಶಿಲಾಶಾಸನ ಹಾಗೂ ೪ಶತಮಾನಗಳಷ್ಟು ಹಳೆಯ ದೇವಾಲಯ –ಅಗ್ರಹಾರ–ಪುಸ್ತಕಭಂಡಾರ–ಗುರುಕುಲಗಳ ಬಗ್ಗೆ ನಾಡಿನ ಗಮನ ಸೆಳೆದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ರಾಗಿದ್ದ ಶ್ರೀ ವೃಷಭೇಂದ್ರಸ್ವಾಮಿಯವರ ಕೋರಿಕೆಯಂತೆ 'ವಿಷವೈದ್ಯಶಾಸ್ತ್ರ' ಎಂಬ ಪಠ್ಯ ಪುಸ್ತಕವನ್ನು ರಚಿಸಿದರು. ಐದು ವರ್ಷಗಳ ಕಠಿಣ ಪರಿಶ್ರಮ– ಅಧ್ಯಯನಗಳ ಮೂಲಕ ರಚಿಸಲ್ಪಟ್ಟ ಈ ಕೃತಿ, ಕನ್ನಡದಲ್ಲಿ ವಿಷವೈದ್ಯದ ಬಗ್ಗೆ ಬಂದ ಕೆಲವೇ ಕೃತಿ ಗಳಲ್ಲಿ ಅತಿಪ್ರಮುಖವಾದದ್ದೆಂದು ಸಾರ್ವತ್ರಿಕ ಪ್ರಶಂಸೆಗೆ ಪಾತ್ರವಾಯಿತು.

'ಮೈಸೂರು ದವಾಖಾನೆ'ಯ ಶುಭಾರಂಭವೆಂಬುದು ಇಡಿಯ ಚಿತ್ತಾಪುರದ ಚಿತ್ರಣದ ಬದಲಾವಣೆಗೆ ನಾಂದಿ ಹಾಡಿತು. ಮೂರ್‍ನಾಲ್ಕು ಮಂದಿ ಸುಶಿಕ್ಷಿತ ವೈದ್ಯರ ಕ್ಲಿನಿಕ್‌ಗಳು, ನಾಲ್ಕಾರು ಖಾಸಗೀ ಶಿಕ್ಷಣಸಂಸ್ಥೆಗಳು, ಮೂರು ಹೈಸ್ಕೂಲುಗಳು, ಕೈಗಾರಿಕಾ ತರಬೇತಿ ಕೇಂದ್ರ, ಬ್ಯಾಂಕ್, ಇತರ ಉದ್ಯಮಗಳು... ಹೀಗೆ ಅಲ್ಲಿನ ಸರ್ವಾಂಗೀಣ ಬೆಳವಣಿಗೆಗೆ ಕಿಡಿ ಹೊತ್ತಿಸಿದವರು ದೂರದೃಷ್ಟಿಯ ವ್ಯಕ್ತಿತ್ವವುಳ್ಳ ಒಬ್ಬ ವೈದ್ಯರು ಎಂಬುದು ವಿಶೇಷ.

*****

ಡಾ. ಮರಕಿಣಿಯವರ ಜೀವನರಥದ ಮುಂದಿನ ತಂಗುದಾಣ ಪಡಕ್ಕಲ್‌ನಲ್ಲಿ. ಅವೇರ್ ಎಂಬ ಸ್ವಯಂಸೇವಾ ಸಂಸ್ಥೆಯ ಗ್ರಾಮೀಣ ಚಿಕಿತ್ಸಾಕೇಂದ್ರದ ವೈದ್ಯಾಧಿಕಾರಿ ಯಾಗಿ ನೇಮಕಗೊಂಡ ಅವರು ಎಷ್ಟೋ ವರ್ಷಗಳಿಂದ ಉಳ್ಳವರ ಶೋಷಣೆಯ ಕರಿನೆರಳಿನಲ್ಲಿಯೇ ಬದುಕುತ್ತಿದ್ದ ದಲಿತರ ಗುಂಪುಗಳನ್ನು ಒಗ್ಗೂಡಿಸಿ, ಅಹಿಂಸಾತ್ಮಕ ವಾಗಿಯೇ ಶೋಷಕರ ವಿರುದ್ಧ ಸೆಟೆದು ನಿಲ್ಲುವಂತೆ ಮಾಡಿದರು. ಆ ಮೂಲಕ ಸದ್ದಿಲ್ಲದ ಸಾಮಾಜಿಕ ಕ್ರಾಂತಿಯ ಹರಿಕಾರನಾದರು. ಮೊದಲಿಗೆ ಪತ್ನಿ ಮತ್ತು ಮಕ್ಕಳನ್ನು ಚಿತ್ತಾಪುರದಲ್ಲಿಯೇ ಬಿಟ್ಟು ಬಂದಿದ್ದರು. ಮತ್ತೆ ಪಡಕ್ಕಲ್ಲಿನ ಕ್ಲಿನಿಕ್–ಸಮಾಜವಿಕಾಸ ಕಾರ್ಯಕ್ರಮಗಳು ಹೆಚ್ಚಿದಂತೆ ಅವರುಗಳನ್ನೂ ಅಲ್ಲಿಗೇ ಕರೆಸಿಕೊಂಡರು. ಚಿತ್ತಾಪುರದ 'ಮೈಸೂರು ದವಾಖಾನೆ'ಯನ್ನು ಮುಚ್ಚಿ ಡಾ.ಸಬಿತಾ ಮತ್ತು ಮಕ್ಕಳು ಪಡಕ್ಕಲ್ಲಿಗೆ ಬಂದರು. ಆದರೆ ಮತ್ತೆ ಮಕ್ಕಳು ಶಿಕ್ಷಣಕ್ಕೋಸ್ಕರ ಬೇರೆ ಬೇರೆ ಕಡೆಗಳಿಗೆ ಹೋಗ ಬೇಕಾಯಿತು. ಮಗಳು ಗೌರಿ ಹೈದರಾಬಾದಿನ ನೃಪತುಂಗ ಕಾಲೇಜಿಗೆ, ಮಗ ನಾರಾಯಣ ಬಳ್ಳಾರಿಯಲ್ಲಿ ಹಾಸ್ಟೆಲ್‌ವಾಸದ ಜತೆ ಹೈಸ್ಕೂಲಿಗೆ ಸೇರ್ಪಡೆಯಾದರು. ಪುನಃ 'ದೊರೆ'ಯ ಬಂಗಲೆಗೇ ವಾಸ್ತವ್ಯ ವರ್ಗಾವಣೆಗೊಂಡಿತು. 'ದೊರೆ'ಗಳು ಪಡಕ್ಕಲ್ಲಿಗೆ ಬರುವುದು ತೀರಾ ಅಪರೂಪವಾಗಿತ್ತು. ಅವರ ಬಂಗಲೆಯ ಒಂದು ಭಾಗವನ್ನು ೧೦೦ ರೂಪಾಯಿ ಬಾಡಿಗೆಗೆ ಡಾಕ್ಟ್ರ ಕುಟುಂಬಕ್ಕೆ ನೀಡಲಾಯಿತು.

'ಡಾಕ್ಟರಮ್ಮ' ಹಳ್ಳಿಗೆ ಬಂದಿದ್ದರಿಂದ ಗರ್ಭಿಣಿಯರು, ಬಾಣಂತಿಯರು ಮತ್ತು

ಮಕ್ಕಳು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಪಡಕ್ಕಲ್‌ಕ್ಲಿನಿಕ್ಕಿಗೆ ಬರಲಾರಂಭಿಸಿದರು. ಪ್ರತಿ ಹಳ್ಳಿಗೂ ಆರೋಗ್ಯ ಕಾರ್ಯಕರ್ತೆಯರನ್ನು ಅಲ್ಪ ಸಂಭಾವನೆಗೆ ನೇಮಿಸಿ ಅವರ ಮೂಲಕ ಆರೋಗ್ಯ ಮಾಹಿತಿ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಆಸ್ಟ್ರೇಲಿಯಾದ Health and Hunger Concern ಹಾಗೂ Community Aid Abroad ಎನ್ನುವ ಎರಡು ಸಂಸ್ಥೆಗಳು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಆರ್ಥಿಕ ನೆರವನ್ನು ನೀಡುತ್ತಿದ್ದವು. ಅದನ್ನು ಬಳಸಿಕೊಂಡು 'ಅವೇರ್' ಸಂಸ್ಥೆ ಕಾರ್ಯವೆಸಗುತ್ತಿತ್ತು. ೭೫ಶೇಕಡಾ ನೆರವನ್ನು ಅವುಗಳು ನೀಡಿದರೆ, ೨೫ಶೇಕಡಾ ಅನ್ನು ಸ್ಥಳೀಯವಾಗಿ ಭರಿಸಬೇಕೆಂಬುದು ಅವರ ನಿಯಮವಾಗಿತ್ತು. ಇಂತಹ ಅರ್ಥಪೂರ್ಣ ಸಹಭಾಗಿತ್ವದಲ್ಲಿ ಡಾ.ಮರಕಿಣಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು.

'ರೇಡಿಯೋ ಆಸ್ಟ್ರೇಲಿಯಾ'ದಲ್ಲಿ Community health-Padakkal Model by Dr.Bhat ಎಂಬುದಾಗಿ ೪೫ನಿಮಿಷಗಳ ನುಡಿಚಿತ್ರ ಪ್ರಸಾರಗೊಂಡಿತು. ಅದಕ್ಕೆ ಪೂರ್ವಭಾವಿಯಾಗಿ ಅಲ್ಲಿನ ಸಿಡ್ನಿ ಯೂನಿವರ್ಸಿಟಿಯ ಪ್ರೊಫೆಸರ್ ಒಬ್ಬರ ನೇತೃತ್ವದಲ್ಲಿನ ತಂಡವೊಂದು ಪಡಕ್ಕಲ್ಲಿಗೆ ಬಂದು ಪ್ರಾಜೆಕ್ಟಿನ ವಿವರಗಳನ್ನೆಲ್ಲ ದಾಖಲಿಸಿಕೊಂಡಿತು. "ಅದಕ್ಕೋಸ್ಕರವೇ ಆ ಪ್ರೊಫೆಸರ್, ಗ್ರಾಮೀಣ ಜನರ ಭಾಷೆಯನ್ನು ಮೊದಲೇ ಕಲಿತು ಕೊಂಡು ಬಂದು ಅವರ ಜತೆ ಇನ್ನೊಬ್ಬರ ನೆರವಿಲ್ಲದೆ ಸರಾಗವಾಗಿ ವ್ಯವಹರಿಸುತ್ತಿದ್ದರು" ಅಂತ ನೆನಪಿಸಿಕೊಳ್ಳುತ್ತಾರೆ ಡಾ. ಮರಕಿಣಿ.

ಸ್ವಯಂಸೇವಾ ಸಂಸ್ಥೆಗಳು ಮತ್ತು ಅಭಿವೃದ್ಧಿಗೆ ನೆರವು ನೀಡುವ ಸಂಸ್ಥೆಗಳ ನಡುವೆ ನೇರ ಸಂವಾದ ನಡೆಸುವ 'ಕಮಿಷನ್ ಆಫ್ ಡಯಲಾಗ್-ಡೆವಲಪ್‌ಮೆಂಟ್' ಆಯೋಗದ ಅಧಿವೇಶನದಲ್ಲಿ ಭಾಗವಹಿಸಲು ಬಂದ ಆಹ್ವಾನವನ್ನು ಸ್ವೀಕರಿಸಿ, ನೆದರ್‌ಲ್ಯಾಂಡಿನ 'ದಿ ಹೇಗ್' ನಗರಕ್ಕೆ ತೆರಳಿದ ಡಾ.ಮರಕಿಣಿ, ಅಲ್ಲಿ 'ಅವೇರ್' ಆಸ್ಪತ್ರೆಯ ಭವಿಷ್ಯದ ಬಗ್ಗೆ ಗ್ರಾಮೀಣ ಆರೋಗ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು. ನೆದರ್‌ಲ್ಯಾಂಡಿನಲ್ಲಿ 'ಭಾರತ ಮಿತ್ರರು' ಎಂಬ ಗ್ರಾಮಾಭಿವೃದ್ಧಿಪರ ಗುಂಪುಗಳಿದ್ದು ಅವರು ವರ್ಷಕ್ಕೆ ೨ಬಾರಿ ವಿವಿಧ ಕಾರ್ಯಕ್ರಮಗಳ ಮೂಲಕ ದೇಣಿಗೆಗಳನ್ನು ಸಂಗ್ರಹಿಸಿ 'ನೋವಿಬ್' ಸಂಸ್ಥೆಯ ಮೂಲಕ ಭಾರತಕ್ಕೆ ಕಳುಹಿಸಿಕೊಡುತ್ತಿದ್ದರು. 'ಅವೇರ್' ಮುಖಾಂತರ ಪಡಕ್ಕಲ್ಲಿನಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ಕಂಡು ಅವರೆಲ್ಲ ಹರ್ಷಚಿತ್ತರಾಗಿದ್ದುದು ಅವರ ಜತೆಗಿನ ಮಾತುಕತೆ ವೇಳೆ ಮರಕಿಣಿಯವರಿಗೆ ಗೊತ್ತಾಗಿ ಸಮಾಧಾನವಾಯಿತು. ಅದಕ್ಕೆ ಇನ್ನೊಂದು ಕಾರಣವೂ ಇತ್ತು-ಭಾರತದ 'ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ' ರೀತಿಯಲ್ಲಿ ನೆದರ್‌ಲ್ಯಾಂಡಿನಲ್ಲಿ ಪ್ರಕಟವಾಗುತ್ತಿದ್ದ ಸಚಿತ್ರ ಜನಪ್ರಿಯ ಪತ್ರಿಕೆಯೊಂದರಲ್ಲಿ ('ಮಾರ್ಗರೆಟ್' ಅಂತ ಅದರ ಹೆಸರು), ಪಡಕ್ಕಲ್ಲಿಗೆ ಭೇಟಿ ನೀಡಿದ್ದ ಮಿಸೆಸ್‌ವಾರೆನ್ ಮತ್ತು ಬಳಗ ಎರಡು ವಿಸ್ತೃತವಾದ, ವರ್ಣರಂಜಿತ ಚಿತ್ರಗಳ ಸಹಿತವಾದ ಲೇಖನಗಳನ್ನು ಪ್ರಕಟಿಸಿ ಗಮನ ಸೆಳೆದಿದ್ದುದು!

ಹೇಗ್‌ನಿಂದ ಬಂದ ಬಳಿಕ ಆಸ್ಪತ್ರೆ ತನ್ನ ಕಾಲ ಮೇಲೆ ತಾನೇ ನಿಲ್ಲುವಂತಾಗಬೇಕೆಂಬ ಉದ್ದೇಶದಿಂದ ಕೆಲವು 'ಆದಾಯಪರ' ಗ್ರಾಮೀಣ ಚಟುವಟಿಕೆಗಳನ್ನು (ಕುರಿಸಾಕಣೆ,

ಕೋಳಿಸಾಕಣೆ, ರೇಶ್ಮೆವ್ಯವಸಾಯ, ತೋಟಗಾರಿಕೆ, ಹೈನುಗಾರಿಕೆ ಇತ್ಯಾದಿ) ಪ್ರಾರಂಭಿಸಿದರು. ಅವುಗಳಿಂದ ಬಂದ ಆದಾಯವನ್ನು ಆಸ್ಪತ್ರೆಯ ನಿರ್ವಹಣೆಗೆ ಉಪಯೋಗಿಸಿಕೊಂಡು ವಿದೇಶೀ ಆರ್ಥಿಕ ನೆರವಿಲ್ಲದೆಯೂ ಸ್ವಾವಲಂಬಿಯಾಗಿ ಮುಂದುವರಿಯುವಂತೆ ಯೋಜನೆ ರೂಪಿಸಿದರು. ಒಂದು ಪುಟ್ಟ ಗ್ರಾಮೀಣ ಕ್ಲಿನಿಕ್, ಹಳ್ಳಿಯ ಬಡಜನರ ಸಮಗ್ರ ಬೆಳವಣಿಗೆ ಮತ್ತು ವಿಕಾಸದ ದಿಸೆಯಲ್ಲಿ ಕಾರ್ಯವೆಸಗುವ ಸ್ವತಂತ್ರ 'ಆರೋಗ್ಯ ಕೇಂದ್ರ'ವಾಗಿ ತಳವೂರಿದ ಬಳಿಕ, ಅಂದರೆ ಆರು ವರ್ಷಗಳ ಭದ್ರಬುನಾದಿಯ ಕ್ಷೇತ್ರ ಕಾರ್ಯದ ಬಳಿಕ ಮತ್ತೆ ಕನ್ನಡ ನಾಡಿನತ್ತ ಚಲಿಸಿತು ಮರಕಿಣಿಯ ಸಂಚಾರಿ ತೇರು.

ನೀರಮೇಲೆ ತೇಲಿ ಬಂತು ಔಷಧಾಲಯ...

ಪಡಕಲ್ಲಿನಲ್ಲಿದ್ದಾಗಲೇ ಮರಕಿಣಿಯವರು ಕೈ ಗೊಂಡ ಇನ್ನೊಂದು ವಿನೂತನ ಪ್ರಯೋಗ "ದೋಣಿ ಆಸ್ಪತ್ರೆ". ಆಂಧ್ರಪ್ರದೇಶದ ಮುಖ್ಯ ನದಿಗಳಲ್ಲೊಂದಾದ ಗೋದಾವರಿ, ದಟ್ಟ ಕಾಡುಗಳ ಮೂಲಕ ಹರಿದು ಬಂದು ಬಂಗಾಳಕೊಲ್ಲಿಯನ್ನು ಸೇರುತ್ತದೆ. ಖಮ್ಮಂ ಜಿಲ್ಲೆಯ ಭದ್ರಾಚಲ ಒಂದು ಮುಖ್ಯ ಯಾತ್ರಾಸ್ಥಳ. ಅಲ್ಲಿಂದ ಸುಮಾರು ನೂರು ಕಿ.ಮೀ ದೂರದಲ್ಲಿರುವ ಕೂನಾವರಂ ಎಂಬ ಪಟ್ಟಣ ನದಿಯ ದಂಡೆಯ ಮೇಲೆಯೇ ಬೆಳೆದಿದೆ. ಒಂದು ಕಡೆ ನದಿ, ಮೂರು ಕಡೆ ಗೊಂಡಾರಣ್ಯ! ಅಲ್ಲಲ್ಲಿ ಜೋಪಡಿಗಳ ಗುಂಪುಗಳಲ್ಲಿ ಬದುಕು ಕಟ್ಟಿಕೊಳ್ಳಲೆತ್ನಿಸುವ ವನವಾಸಿಗಳು–ಆದಿ ವಾಸಿಗಳು–ಹರಿಜನರು ಎಲ್ಲ! ಗೋದಾವರಿ ನದಿಯ ಮೂಲಕವೇ ಹೊರ ಜಗತ್ತಿನ ಸಂಪರ್ಕವೇರ್ಪಡಬೇಕಷ್ಟೇ! ಇಂತಹ ದುರ್ಗಮ ಪ್ರದೇಶದಲ್ಲಿ, ಶಿಕ್ಷಣ, ಆರೋಗ್ಯ, ವಾಹನ ಸಂಚಾರದಂತಹ ಸೌಲಭ್ಯಗಳು ಅತಿ ಕನಿಷ್ಠವಾಗಿರುವ ಪರಿಸರದಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪಿಸುವರೇ ದೊಡ್ಡ ಮೊತ್ತದ ವಿದೇಶೀ ಸಹಾಯಧನ ಮಂಜೂರಾಗಿತ್ತು. ಆದರೆ ಯಾರೂ ಈ ಯೋಜನೆಗೆ ಅಷ್ಟಾಗಿ ಆಸಕ್ತಿ ತೋರಿಸದಿದ್ದಾಗ ಮರಕಿಣಿ ಚುರುಕಾದರು.

೧೯೮೨ರಲ್ಲಿ "ಜೀವನಸ್ರವಂತಿ" ಎಂಬ ಹೆಸರಿನ ದೋಣಿ ಆಸ್ಪತ್ರೆ, ಯಾಂತ್ರೀಕೃತ ಡೀಸೆಲ್ ದೋಣಿ (ಲಾಂಚ್)ಯಲ್ಲಿ 'ಹುಟ್ಟು' ಹಾಕಲ್ಪಟ್ಟಿತು! ಕೂನಾವರಂನ ಆರೋಗ್ಯ ಕೇಂದ್ರವನ್ನು ಕೇಂದ್ರಸ್ಥಾನವಾಗಿರಿಸಿಕೊಂಡು ಅಲ್ಲಿಂದ ಎರಡು ದಿನಗಳ ತಿರುಗಾಟವಿರುವ ಸಂಚಾರಿ ಘಟಕದ ಕಾರ್ಯ ಕ್ರಮ–ಒಂದು ಮುಂಜಾನೆ ಏಳು ಘಂಟೆಗೆ ಹೊರಟರೆ ಮರುದಿನ ಸಂಜೆ ಏಳು ಘಂಟೆಗೆ ವಾಪಸಾಗುವಂತೆ! ಖಮ್ಮಂ ಪಟ್ಟಣದ ಓರ್ವ ವೈದ್ಯರನ್ನೇ ಮುಖ್ಯ ವೈದ್ಯಾಧಿಕಾರಿಯಾಗಿ ನೇಮಿಸಿ, ಅವರಿಗೆ ಸಹಾಯಕ್ಕೆ ಅಲ್ಲಲ್ಲಿ ಅಷ್ಟಿಷ್ಟು ಶಿಕ್ಷಣ ಪಡೆದಿದ್ದ ವನವಾಸಿ ಅಭ್ಯರ್ಥಿಗಳನ್ನು ಕಲೆಹಾಕಿ ಅವರಿಗೆ'ದಿಢೀರ್ ತರಬೇತಿ' (Lightening Training) ನೀಡಿ ವ್ಯವಸ್ಥೆ ಮಾಡಲಾಯಿತು. ಅಲ್ಲಲ್ಲಿ ಉಪಕೇಂದ್ರಗಳನ್ನು ತೆರೆದು ಅಲ್ಲಿಗೂ ಇಬ್ಬಿಬ್ಬರಂತೆ ಕ್ಷಿಪ್ರ ತರಬೇತಿಯ ಕಾರ್ಯಕರ್ತರನ್ನು ನೇಮಿಸಿದರು. ನದಿಯ ದಂಡೆಯಲ್ಲಿ ತುಸು ಎತ್ತರದಲ್ಲಿ ತಾತ್ಕಾಲಿಕ ಚಪ್ಪರದಂತಹ ವ್ಯವಸ್ಥೆಗಳಲ್ಲಿ ವೈದ್ಯಕೀಯ ಸಿಬಂದಿಯ ಮೂಲಕ ತಪಾಸಣೆ–ಚಿಕಿತ್ಸೆಯ ಕಾರ್ಯಕ್ರಮ! ಲಾಂಚ್ ಅನ್ನು ನಡೆಸುವ ಸಿಬಂದಿ ಮತ್ತು ವೈದ್ಯಕೀಯ ಸಿಬಂದಿ–ಇಡಿಯ ತಂಡದ

ಊಟ, ವಿಶ್ರಾಂತಿ, ನಿದ್ದೆ ಎಲ್ಲವೂ ನದಿಯ ನೀರಲ್ಲಿ ತೇಲುತ್ತ-ಲಂಗರು ಹಾಕುತ್ತ ಇರುವ ಲಾಂಚಿನಲ್ಲಿಯೇ! ಹೆಚ್ಚಿನ ಚಿಕಿತ್ಸೆಯ ಅಗತ್ಯವುಳ್ಳವರಿಗೆ ದೋಣಿಯ ಮೂಲಕ ಕೂನಾವರಂಗೆ ನಿರ್ದೇಶನ (ರೆಫರಲ್)!

ಆರಂಭದಲ್ಲಿ ಕುತೂಹಲಕ್ಕೆಂದು ಜನ ಬರುತ್ತಿದ್ದರೆ, ದಿನಕಳೆದಂತೆ ನಿಗದಿತ ದಿನದಂದು ಮೊದಲೇ ಬಂದು ರೋಗಿಗಳು ಸರತಿಯ ಸಾಲಿನಲ್ಲಿ ನಿಲ್ಲಲು ಪ್ರಾರಂಭಿಸಿದರು! ಮೆಡಿಕಲ್ ಟೀಮಿಗೆ ಕೆಲವು ಮಂದಿ ಯುವ ಉತ್ಸಾಹೀ ವೈದ್ಯರು ಬಂದು ಸೇರಿಕೊಂಡರು. ಒಬ್ಬರು ಮಹಿಳಾ ವೈದ್ಯರ ಸಹಿತ ಜವಾಬ್ದಾರಿಯುತ ಸಿಬಂದಿಗಳ ಗಟ್ಟಿಯಾದ ತಂಡವನ್ನೇ ಸಜ್ಜುಗೊಳಿಸಿ ಅವರ ಸಾರಥ್ಯದಲ್ಲಿ "ಜೀವನಸ್ರವಂತಿ" ಸುರಕ್ಷಿತವಾಗಿ ತೇಲುತ್ತ ಸಾಗುತ್ತದೆ, ಯಶಸ್ಸಿನ ದಡ ಸೇರುತ್ತದೆ ಎಂಬ ಭರವಸೆ ಮೂಡಿದ ಬಳಿಕ ಮರಕಿಣಿ ಪಡಕ್ಕಲ್ಲಿಗೆ ಮರಳಿದರು. ವೈದ್ಯಕೀಯ ಕ್ಷೇತ್ರದಲ್ಲಿನ ಡಾ.ಮರಕಿಣಿ ಸೃಜನಶೀಲತೆಗೆ ಉತ್ಕೃಷ್ಟ ಉದಾಹರಣೆ ಲಾಂಚ್ ಮೇಲೆ ಲಾಂಚ್ ಮಾಡಿದ ಆಸ್ಪತ್ರೆ!

ಮೈರಾಡದ ಜತೆ ಆರೇಳು ವರ್ಷ

೧೯೮೪ರ ಸಪ್ಟಂಬರ್ ತಿಂಗಳಲ್ಲಿ, ಪಡಕ್ಕಲ್ಲಿನಿಂದ 'ಅವೇರ್' ಸಂಸ್ಥೆಯ ಸವಾರಿ ಮುಗಿಸಿ, ಬೆಂಗಳೂರಿಗೆ ಬಂದು ಮೈರಾಡ ಸಂಸ್ಥೆಯ ಬೆನ್ನೇರಿದರು ಎಂ.ಬಿ. ಈ ಸಂಸ್ಥೆಯ ಜತೆ ಸೇರಿ ಎರಡುಕಡೆ ಕೆಲಸ ಮಾಡಿದರು. ಮೊದಲ ಗುಲಬರ್ಗಾ ಜಿಲ್ಲೆಯ ಕಮಲಾಪುರ ಎಂಬ ಊರಿನಲ್ಲಿ ಜಲಾನಯನ ಪ್ರದೇಶಾಭಿವೃದ್ಧಿ ಕಾರ್ಯಕ್ರಮದ (Watershed Development Project) ದ ಯೋಜನಾಧಿಕಾರಿ (Project officer) ಆಗಿ ಸ್ವಲ್ಪ ಕಾಲ ಕೆಲಸ ಮಾಡಿದರು. ಬರಗಾಲ ಪೀಡಿತ ಪ್ರದೇಶವಾಗಿದ್ದ ಅಲ್ಲಿ ನೀರಿಂಗಿಸುವ-ಅಂತರ್ಜಲ ಹೆಚ್ಚಿಸುವ ಕ್ರಮಗಳನ್ನು ಕೈಗೊಂಡು ಬರದೆದುರು ಬವರ ಸಾರುವುದು ಯೋಜನೆಯ ಮುಖ್ಯ ಉದ್ದೇಶವಾಗಿದ್ದು ಡಾಕ್ಟ್ರಿಗೆ ಇದು ಹೊಸ ಕೆಲಸ, ಹೊಸ ಅನುಭವ. ಬರಗಾಲ ಬರದಂತೆ ತಡೆಯುವ ಕಾರ್ಯಕ್ರಮವೊಂದನ್ನು ವೈದ್ಯರೊಬ್ಬರು ನಡೆಸಿದ್ದು ನಿಜಕ್ಕೂ ವಿಶೇಷ. ಆದರೆ ದಪ್ಪ ಚರ್ಮದ ಸರ್ಕಾರೀ ಅಧಿಕಾರಿಗಳು, ಆಲಸಿವಿಲಾಸಿ ಸ್ವಯಂ ಸೇವಾಕಾರ್ಯಕರ್ತರ ಜತೆ ಏಗುತ್ತಾ ಹೆಚ್ಚು ಸಮಯ ಕಾರ್ಯ ನಿರ್ವಹಿಸುವುದು ಅವರಿಂದಾಗಲಿಲ್ಲ. ಕುಡಿಯುವ ನೀರಿಗೇ ಅತ್ಯಂತ ಸಮಸ್ಯೆಯಿದ್ದ ಕಮಲಾಪುರದ ಹಲವು ಹಳ್ಳಿ, ತಾಂಡಾಗಳಲ್ಲಿ ಸುಮಾರು ೨೦-೨೫ ಕೊಳವೆ ಬಾವಿಗಳನ್ನು ಕೊರೆದು, ಅಷ್ಟರಮಟ್ಟಿಗೆ ಜಲದಾಹವನ್ನು ನೀಗಿಸಿದ್ದು ಅವರ ಸಾಧನೆಯೆನ್ನಬಹುದು-ತಾವಿದ್ದ ಕೇವಲ ಒಂದು ವರ್ಷದ ಅವಧಿಯಲ್ಲಿ! ಕಮ್ಯೂನಿಟಿ ಹೆಲ್ತ್ ಪ್ರಮೋಟರ್ (CHP) ಎಂಬ ಸ್ವಯಂ ಸೇವಕರು ಗರ್ಭಿಣಿ ಮಗು ಮತ್ತು ಬಾಣಂತಿಯರ ಆರೋಗ್ಯ ರಕ್ಷಣಾ ಚಟುವಟಿಕೆಗಳಲ್ಲಿ ಆರೋಗ್ಯ ಸಹಾಯಕಿಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ನೆರವಾಗುವಂತೆ ಕಾರ್ಯಕ್ರಮ ರೂಪಿಸಿದರು. ಕುಷ್ಠರೋಗ ಚಿಕಿತ್ಸೆ, ಹಲವಾರು ಆರೋಗ್ಯ ಶಿಬಿರಗಳ ಆಯೋಜನೆಯಲ್ಲೂ ವಿಶೇಷ ಪರಿಶ್ರಮ ವಹಿಸಿದರು ಡಾ.ಎಂ.ಬಿ.

ಮುಂದಕ್ಕೆ ಮೈಸೂರು ಜಿಲ್ಲೆಯ ಹೆಗ್ಗಡೆದೇವನಕೋಟೆ ಹೆಗ್ಗಳಿಕೆ ತಂದ ಊರಾಯಿತು ಡಾ.ಮರಕಿಣಿಯವರಿಗೆ. ಯಾಕೆಂದರೆ ಅಲ್ಲಿ ಐದುವರ್ಷಗಳ ಹೆಚ್.ಡಿ.ಕೋಟೆ ಪ್ಲಾನ್ ಪ್ರಾಜೆಕ್ಟ್ ಅನ್ನು ಫಾಸ್ಟರ್ ಪೇರೆಂಟ್ಸ್ ಎಸೋಸಿಯೇಷನ್ (Foster Parents Association) ನೆರವಿನಿಂದ ಅತ್ಯಂತ ಯಶಸ್ವಿಯಾಗಿ ನಡೆಸಿದುದಕ್ಕಾಗಿ Us National Organisation ನಿಂದ Award of Excellence (ಶ್ರೇಷ್ಠತೆಯ ಪುರಸ್ಕಾರ) ಎಂಬ ಅಂತಾರಾಷ್ಟ್ರೀಯ ಗೌರವವನ್ನು ಪಡೆದರು. ತೀರಾ ಗ್ರಾಮೀಣ ಪ್ರದೇಶದಲ್ಲಿ ನಡೆಸಿದ ದಾಯಿಯರ ತರಬೇತಿ ಕಾರ್ಯಕ್ರಮ ಕ್ಕೆ ಮುಖ್ಯವಾಗಿ ಆ ಪ್ರಶಸ್ತಿ ಒಲಿದು, ಅರಸಿ ಬಂತು.

ಹೆಗ್ಗಡೆದೇವನ ಕೋಟೆ ಹೆಚ್ಚಾಗಿ ಹಾಡಿ–ಹಳ್ಳಿ, ಗುಡ್ಡ–ಕಾಡುಗಳಿಂದಲೇ ಕೂಡಿದ್ದು ಆರೋಗ್ಯರಕ್ಷಣೆಯ ಕಾರ್ಯಕ್ರಮಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಪ್ರಮಾಣ ದಲ್ಲಿದ್ದವು. ಗರ್ಭಿಣಿ–ಬಾಣಂತಿಯರ ಆರೋಗ್ಯ ಸಮಸ್ಯೆಗಳು ಶಿಶುಮರಣ ಹಾಗೂ ಅಪೌಷ್ಟಿಕತೆಗಳು ಅತ್ಯಂತ ಸಾಮಾನ್ಯವಾಗಿದ್ದವು. 'ಗ್ರಾಮಕ್ಕೊಬ್ಬಳು ತರಬೇತಿ ಹೊಂದಿದ ಪಾರಂಪರಿಕ ಸೂಲಗಿತ್ತಿ' (Trained Traditional Birth Attendant) ಎಂಬ ತಾರಕ ಮಂತ್ರವನ್ನು ಜಪಿಸುತ್ತ ನಿರಂತರವಾಗಿ ದಾಯಿ ಪುನಶ್ಚೇತನ ತರಬೇತಿಗಳನ್ನು ನಡೆಸಿದ್ದು ಒಳ್ಳೆಯ ಫಲವನ್ನು ಕೊಟ್ಟಿತು. ಹಳ್ಳಿಯ ಮನೆಯಲ್ಲಿಯೂ 'ನಿರ್ಮಲ ಹೆರಿಗೆ' ಸಾಧ್ಯ ಎಂಬುದನ್ನು ತರಬೇತಿ ಮತ್ತು ಹೆರಿಗೆ ಕಿಟ್ ವಿತರಣೆಯ ಮೂಲಕ ತೋರಿಸಿ ಕೊಟ್ಟರು. ಸುರಕ್ಷಿತ ಹೆರಿಗೆಗೆ, ಚುಚ್ಚುಮದ್ದು, ಪೋಲಿಯೋಡ್ರಾಪ್ಸ್ ನೀಡಿಕೆ ಕಾರ್ಯಕ್ರಮ ಹಾಗೂ ಕುಟುಂಬಯೋಜನಾ ವಿಧಾನಗಳ ತಿಳುವಳಿಕೆಯೂ ಸೇರಿಕೊಂಡವು. ದಾಯಿ ತರಬೇತಿ ಎಷ್ಟು ಗಮನ ಸೆಳೆಯಿತೆಂದರೆ ಮುಂದಕ್ಕೆ ಮೈರಾಡ ಕ್ಯಾಂಪಸ್‌ನಲ್ಲಿಯೇ ಸುಸಜ್ಜಿತ ತರಬೇತಿ ಕೇಂದ್ರದ ಸ್ಥಾಪನೆಗೆ ೧೭ಲಕ್ಷ ರೂಪಾಯಿಗಳ ವಿಶೇಷ ಅನುದಾನವೂ ದೊರೆಯಿತು!

ಶುದ್ಧವಾದ ಕುಡಿಯುವ ನೀರಿನ ಪೂರೈಕೆಗೆ ಜಿಲ್ಲಾ ಪಂಚಾಯತ್ ನೆರವು, ಮನೆಗೊಂದು ಸುಲಭ ಶೌಚಾಲಯ, ಅಪೌಷ್ಟಿಕತೆಯಿರುವ ಮಕ್ಕಳಿಗೆ ಸರಕಾರದ ಸಹಾಯ, ಅಂಗವೈಕಲ್ಯ ಹೊಂದಿದವರಿಗೆ ವಿಶೇಷ ತರಬೇತಿ–ಪುನರ್ವಸತಿ ವ್ಯವಸ್ಥೆ–ಹೀಗೆ ಬಹುಮುಖೀ ಯೋಜನೆಗಳು ಡಾ. ಮರಕಿಣಿ ಬತ್ತಳಿಕೆಯಿಂದ ಹೊರಬಂದವು. ಅಷ್ಟೇ ಅಲ್ಲ, ತಾಲೂಕಿನ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅಗತ್ಯವಾಗಿ ಬೇಕಾಗಿದ್ದ ಹಲವು ಉಪಕರಣಗಳನ್ನು ಒದಗಿಸಲಾಯಿತು. ತಾಲೂಕು ಆಸ್ಪತ್ರೆಗೆ ಒಂದು ಕ್ಷ–ಕಿರಣ ಯಂತ್ರವನ್ನೇ ಪೂರೈಸಲಾಯಿತು. ಹಂಪಾಪುರ ಆರೋಗ್ಯ ಕೇಂದ್ರದಲ್ಲಿ ನೂತನ 'ಹೆರಿಗೆ ವಾರ್ಡ್' ನಿರ್ಮಿಸಿ ಅಗತ್ಯ ಸಾಧನ–ಸವಲತ್ತುಗಳನ್ನು ನೀಡಲಾಯಿತು.

"ನಿಮ್ಮ ಸಹಭಾಗಿತ್ವ–ಸಹಯೋಗದಿಂದ ಸಮರ್ಪಕ ರೋಗೋಪ ಚಾರ–ಚಿಕಿತ್ಸೆ" ಎಂಬ ಸೂತ್ರವನ್ನು ಅನುಸರಿಸಿ ಒಂದು ವಿಶಿಷ್ಟ ಯೋಜನೆಯನ್ನು ಜಾರಿಗೆ ತಂದರು ಡಾ.ಮರಕಿಣಿ Foster Parents Association ಮುಖಾಂತರ ಬಡಕುಟುಂಬದ ಪ್ರಾಥಮಿಕ ಶಾಲಾ ವಯಸ್ಸಿನ ಒಂದು ಮಗುವನ್ನು ದತ್ತು ಸ್ವೀಕರಿಸಿ ಇಡಿಯ ಕುಟುಂಬದ ಅಭಿವೃದ್ಧಿಗೆ ಆರ್ಥಿಕ ನೆರವನ್ನು ನೀಡುವುದು ಸಂಸ್ಥೆಯ ಕಾರ್ಯಕ್ರಮ. ಆದರೆ ಕುಟುಂಬವೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು, ವರ್ಷಕ್ಕೆ ೧೨ ರೂಪಾಯಿ ವಂತಿಗೆಯನ್ನು

ಅವರೂ ಪಾವತಿಸುವಂತೆ ಮಾಡಿದರು. ಆಯೂ ಗ್ರಾಮದ ಆರೋಗ್ಯ ನಿಧಿಯ ಹಣ ಆಯೊ ಗ್ರಾಮದ ಮೈರಾಡ ಕಾರ್ಯಕರ್ತರು ಮತ್ತು ಪೋಷಿತ ಕುಟುಂಬಗಳ ಪ್ರತಿನಿಧಿಯ ಸಂಯುಕ್ತ ಆಡಳಿತ ಮಂಡಳಿಯ ಹೆಸರಿನಲ್ಲಿ ಸ್ಥಳೀಯ ಅಂಚೆ ಕಚೇರಿಯಲ್ಲಿ ಇದ್ದುದರಿಂದ ನೇರವಾದ-ಸುಲಭವಾದ ವಹಿವಾಟೂ ಸಾಧ್ಯವಾಯಿತು. ಸಂಸ್ಥೆಯೂ ಉತ್ತೇಜಿತವಾಗಿ ಇನ್ನಷ್ಟು ಧನಸಹಾಯವನ್ನು ಖಾತೆಗೆ ಜಮೆ ಮಾಡಲೂ ಕಾರಣವಾಯಿತು. ಮನೆಯ ಅಭಿವೃದ್ಧಿ, ವಿದ್ಯಾಭ್ಯಾಸಕ್ಕಾಗಿ ಬಡ್ಡಿರಹಿತ ಸಾಲ ಮುಂತಾದ ಉಪಯುಕ್ತ ಚಟುವಟಿಕೆಗಳೂ ಅದರಿಂದ ಸಾಧ್ಯವಾಯಿತು.

ಕೇಂದ್ರಸ್ಥಾನದಲ್ಲಿನ ಕ್ಲಿನಿಕ್‌ನಲ್ಲಿ ರೋಗಿಗಳ ಉಪಚಾರದ ಹೊಣೆಯನ್ನು ಡಾ.ಸಬಿತಾ ನಿರ್ವಹಿಸುತ್ತಿದ್ದರೆ, ಕಾಡಿಗೆ ಹೋಗಿ, ಹಾಡಿಗೆ ಹೊಕ್ಕು ಹಳ್ಳಿ ಜನರ ವನವಾಸಿಗಳ ಆಂತರ್ಯವನ್ನು ಅರಿತು ಅಗತ್ಯಗಳಿಗೆ ತಕ್ಕಂತೆ ಕಾರ್ಯಕ್ರಮ ರೂಪಿಸುವ ಜವಾಬ್ದಾರಿ ಎಂ.ಬಿ.ಯವರದ್ದಾಗಿತ್ತು. ಹಾಗೆ ಗ್ರಾಮಸುಭಿಕ್ಷದ ಕಲ್ಪನೆ ಸಾಕಾರಗೊಳ್ಳುವಂತಾಯಿತು.

ಸ್ವಾತಂತ್ರ್ಯವೀರರ ಸ್ಮರಣೆ : ಪಂಚರಿಗೆ ತರಬೇತಿ

ಡಾ. ಮರಕಿಣಿ ದಶಾವತಾರಗಳಲ್ಲಿ ಮುಂದಿನದು ರಾಷ್ಟ್ರವೀರ ಸ್ವಾಮಿ ರಾಮಾನಂದ ತೀರ್ಥ ಟ್ರಸ್ಟಿನ ನಿರ್ದೇಶಕ ಸ್ಥಾನ. ವಿಜಾಪುರಜಿಲ್ಲೆಯ ಸಿಂದಗಿಯಲ್ಲಿ ಜನಿಸಿದ ಸ್ವಾಮಿ ರಾಮಾನಂದ ತೀರ್ಥರು ಮರಾಠಾವಾಡಾದ ಮೊಮಿನಾಬಾದ್ ಅನ್ನು ಕೇಂದ್ರವಾಗಿರಿಸಿ ಕೊಂಡು ಹೈದರಾಬಾದನ್ನು ನಿಜಾಂಶಾಹಿಯಿಂದ ಮುಕ್ತಗೊಳಿಸಿ ಸ್ವತಂತ್ರಭಾರತದಲ್ಲಿ ವಿಲೀನಗೊಳಿಸುವ ಹೋರಾಟದಲ್ಲಿ ಎರಡು ದಶಕಗಳ ಕಾಲ(೧೯೨೮-೪೮) ಹಗಲಿರುಳೂ ತೊಡಗಿಕೊಂಡವರು. ಅದರಲ್ಲಿ ವಿಜಯಿಯಾದ ಬಳಿಕ ಗಾಂಧೀಜಿ ಅನುಯಾಯಿಗಳಾಗಿ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ನಿರತರಾದವರು. ಅಂತಹ ವ್ಯಕ್ತಿಯ ಸ್ಮರಣೆಯಲ್ಲಿ ಟ್ರಸ್ಟ್ ಒಂದು ಅಸ್ತಿತ್ವಕ್ಕೆ ಬಂದಾಗ ಅಗಿನ ಪ್ರಧಾನಿ ಪಿ.ವಿ.ನರಸಿಂಹರಾಯರು ಅಧ್ಯಕ್ಷರಾದರು; ಪ್ರಸಿದ್ಧ ಶಿಕ್ಷಣತಜ್ಞ ಗೋವಿಂದಭ್ಯಾಶ್ರಾಫ್ ಕಾರ್ಯದರ್ಶಿಗಳಾದರು; ಗುಲಬರ್ಗಾದ ಜಗನ್ನಾಥ ಚಂಡ್ರಿಕೆಯವರು ಪ್ರಧಾನ ಸಂಚಾಲಕರಾಗಿದ್ದರು. ಇವರೆಲ್ಲ ಸ್ವಾಮಿಜಿಯವರ ನಿಕಟವರ್ತಿಗಳಾಗಿದ್ದರು.

ಅಂತಹ ಟ್ರಸ್ಟಿನ ನಿರ್ದೇಶಕರಾಗಿ ಡಾ.ಮರಕಿಣಿ ಅಧಿಕಾರ ಸ್ವೀಕರಿಸಿದಾಗ ಅವರು ಹೊರಗಿನವರೆಂಬ ಕಾರಣಕ್ಕೆ ಹೊಸಪೀಳಿಗೆಯವರ ವಿರೋಧ-ಪ್ರತಿಭಟನೆ ವ್ಯಕ್ತವಾಯಿತು. ಗಾಂಧೀತ್ತತ್ವಗಳು ಸದ್ಯದ ಕಾಲಘಟ್ಟದಲ್ಲಿ ಕೆಲಸಕ್ಕೆ ಬಾರದವುಗಳೆಂಬ ಭಾವನೆ ಅಂಥವರಲ್ಲಿ ಬೇರೂರಿತ್ತು. ಅವರ ವೈಯಕ್ತಿಕ ಆಕಾಂಕ್ಷೆ-ಆಸಕ್ತಿಗಳು ಕೂಡಾ ಇವರದಕ್ಕಿಂತ ತುಂಬ ಬೇರೆಯಾಗಿದ್ದವು. ಹೀಗಾಗಿ ಡಾಕ್ಟ್ರು ಮರುಮಾತನಾಡದೆ ಸೀದಾ ಹಳ್ಳಿಗಳತ್ತ ನಡೆದರು. ಗ್ರಾಮಪಂಚಾಯತ್ ಮಟ್ಟದಲ್ಲಿ ಜಾಗೃತಿ ಮೂಡಿಸುವ ಕೆಲಸಕ್ಕೆ ತೊಡಗಿದರು. ಆಗಷ್ಟೇ ಗ್ರಾಮಪಂಚಾಯತಿಗೆ ಚುನಾವಣೆ ನಡೆದು ಮೀಸಲಾತಿಯಲ್ಲಿ ಆಯ್ಕೆಯಾಗಿದ್ದ ಹಿಂದುಳಿದ ಜನಾಂಗದವರು, ಮಹಿಳೆಯರು-ಇವರಿಗೆಲ್ಲ ವಿದ್ಯಾಭ್ಯಾಸವಿರಲಿಲ್ಲ. ಮುಗ್ಧರೂ, ಅನನುಭವಿಗಳೂ ಆದ ಇವರನ್ನು ತಮಗೆ ಬೇಕಾದ ಹಾಗೆ ಬಳಸಿಕೊಂಡು, ಹೆಬ್ಬೆಟ್ಟು

ಒತ್ತಿಸಿಕೊಂಡು ಬಲಾಢ್ಯರು ತಮ್ಮದೇ ಆಡಳಿತವನ್ನು ನಡೆಸುತ್ತಲಿದ್ದರು. ಪಂಚಾಯತಿನ ಕಾರ್ಯವೈಖರಿ ಹಾಗೂ ಸದಸ್ಯರ ಹಕ್ಕುಗಳು, ಕರ್ತವ್ಯಗಳ ಬಗ್ಗೆ ಅರಿವು ನೀಡುವ ತರಬೇತಿ ಶಿಬಿರಗಳನ್ನು ಅಲ್ಲಲ್ಲಿ ಏರ್ಪಾಡು ಮಾಡಿದ ಡಾಕ್ಟ್ರು, ಮಹಿಳೆಯರಿಗೆ ಇನ್ನೂ ಪ್ರತ್ಯೇಕವಾಗಿ ಚಿಂತನ–ಮಂಥನ ಕಾರ್ಯಕ್ರಮಗಳನ್ನು ಜರಗಿಸಿದರು. ಗ್ರಾಮಪಂಚಾಯತಿನ ಸ್ವರೂಪ–ಕೆಲಸಕಾರ್ಯಗಳ ಕ್ರಮ–ಹಣಕಾಸಿನ ಮಿತಿಗಳು–ಅಭಿವೃದ್ಧಿಯೋಜನೆಗಳು –ಎಲ್ಲ ಸೂಕ್ಷ್ಮಗಳ ಕುರಿತು ತಿಳಿಹೇಳಲಾಯಿತು. ಸಹಜವಾಗಿ ಇಂತಹ ಶಿಕ್ಷಣ ಕಾರ್ಯಕ್ರಮಗಳು ದಪ್ಪಚರ್ಮದ ಅಧಿಕಾರಿಗಳು–ರಾಜಕಾರಣಿಗಳಿಗೆ ಅಷ್ಟಾಗಿ ರುಚಿಸಲಿಲ್ಲ. 'ಗ್ರಾಮ ಪಂಚಾಯತಿ ಶಾಸನ ಪರಿಚಯ' ಎಂಬ ಕಿರುಹೊತ್ತಗೆಯನ್ನೇ ಈ ಸಂದರ್ಭದಲ್ಲಿ ಡಾಕ್ಟ್ರು ಸಿದ್ಧಗೊಳಿಸಿ ಹೊರತಂದರು. ಮುಂದೆ ಖಾದೀಗ್ರಾಮೋದ್ಯೋಗ ನಿರತರ ಸಮ್ಮೇಳನದ ಜತೆಗೆ ಸ್ವಾತಂತ್ರ್ಯ ಹೋರಾಟಗಾರರ ಸಮ್ಮೇಳನವೊಂದನ್ನೂ ಗುಲಬರ್ಗಾದಲ್ಲಿ ಸಂಘಟಿಸಲಾಯಿತು. ಸ್ವಾತಂತ್ರ್ಯ ಹೋರಾಟದ ಹಳೆಯಗೆಳೆಯರನ್ನು ಮರಳಿ ಭೇಟಿಯಾಗಿ ನೆನಪುಗಳನ್ನು ಮೆಲುಕು ಹಾಕುವ ಅವಕಾಶವನ್ನು ಕಲ್ಪಿಸಿದುದು ಅವರಿಗೆಲ್ಲ ಸಂಭ್ರಮವನ್ನು ತಂದಿತು.

ಚಂದ್ರಕಾಂತ ಮಸೂರ್‌ಕರ್ ಎಂಬವರ ಸಹಕಾರದೊಂದಿಗೆ ಗುಲಬರ್ಗಾ ವಿಶ್ವ ವಿದ್ಯಾನಿಲಯದ ಸಮಾಜಕಾರ್ಯ ವಿಭಾಗದ ಸಹಯೋಗದಲ್ಲಿ ಜಿಲ್ಲೆಯ ಸ್ವಯಂಸೇವಾ ಸಂಸ್ಥೆಗಳ ಸಮಾವೇಶವನ್ನು ಏರ್ಪಡಿಸಿ ಒಕ್ಕೂಟವೊಂದನ್ನು ರಚಿಸಿ, ನೋಂದಾಯಿಸುವ ಮೂಲಕ ಸ್ವಯಂಸೇವಾ ಸಂಸ್ಥೆಗಳನ್ನೂ ಒಗ್ಗೂಡಿಸುವ, ಸುಸಂಘಟಿತ ವೇದಿಕೆಯೊಂದನ್ನು ನಿರ್ಮಿಸುವ ಅನನ್ಯ ಕೆಲಸವನ್ನು ಈ ಕಾಲದಲ್ಲಿ ಡಾಕ್ಟ್ರು ಮಾಡಿದರು.

ರಾಮಸುಧಾ ಟ್ರಸ್ಟ್ : ಗ್ರಾಮ ಸುಧಾರಣಾ ಕಾರ್ಯ

ಬೆಂಗಳೂರಿನ ಹೊರವಲಯದಲ್ಲಿನ ಮೂರು ಗ್ರಾಮಗಳು–ಹಳೆ ಸಂಪಿಗೆ ಹಳ್ಳಿ, ಮಂಟಪ ಮತ್ತು ಗೆರಟಿಗನ ಬೆಲೆ. ಕರ್ನಾಟಕ, ಕೇರಳ, ತಮಿಳ್ನಾಡು–ಮೂರು ರಾಜ್ಯಗಳ ತ್ರಿವೇಣಿ ಸಂಗಮದ ಪರಿಸರ ಇದು. ಇವುಗಳ ಸುತ್ತಮುತ್ತ ರಾಮಸುಧಾಟ್ರಸ್ಟ್ ಎನ್ನುವ ಸ್ವಯಂಸೇವಾ ಸಂಸ್ಥೆಯ ಮೂಲಕ ೧೯೯೬–೯೯ರ ತನಕ ಮೂರ್‍ನಾಲ್ಕು ವರ್ಷ ಕಾಲ ಗ್ರಾಮ ಸುಧಾರಣೆಯ ಚಟುವಟಿಕೆ ನಡೆಸಿದರು. ತೀರಾ ಬಡವರಲ್ಲದೆ, ತುಂಬ ಅವಿದ್ಯಾವಂತರಲ್ಲದ ಮಹಿಳೆಯರು ಮತ್ತು ಯುವತಿಯರ ಗುಂಪನ್ನು ಗುರಿಯಾಗಿರಿಸಿ ಕೊಂಡು 'ಮಹಿಳಾ ಸಮೃದ್ಧಿ' ಯೋಜನೆಯನ್ನು ಕಾರ್ಯಗತ ಗೊಳಿಸಲಾಯಿತು. ಕಾರ್ಯಕ್ರಮದ ಶುಭಾರಂಭ ಗೃಹಾಲಂಕರಣ ತರಬೇತಿಯ ಮೂಲಕ. ಬಗೆಬಗೆಯ ಕರಕುಶಲ ವಸ್ತುಗಳು, ಬೊಂಬೆಗಳು, ಕಸೂತಿ, ಕೈ ಹೊಲಿಗೆಯ ಉತ್ಪನ್ನಗಳು–ಹೀಗೆ ಬೇರೆಬೇರೆ ರೀತಿಯ ಆಲಂಕಾರಿಕ ಸಾಮಗ್ರಿಗಳನ್ನು ತಯಾರಿಸಿ, ಮಾರುವ, ಹಣ ಸಂಪಾದಿಸುವ ಚಟುವಟಿಕೆಗಳನ್ನು ಹೇಳಿಕೊಡಲಾಯಿತು. ಬಳಿಕ ಕೇಂದ್ರಸರಕಾರದ 'ಮಹಿಳಾಸಮೃದ್ಧಿ' ಯೋಜನೆಯ ಉಳಿತಾಯದ ಹಣ ಸಂಗ್ರಹಕ್ಕೆ ಅವರನ್ನು ಪ್ರೇರೇಪಿಸ ಲಾಯಿತು. ಅದರಲ್ಲಿ, ೧೦೦ರೂಪ್ಯಾಯನ್ನು ಮಹಿಳೆಯು ಜಮೆ ಮಾಡಿದರೆ, ಸರಕಾರದಿಂದ

೨೦ ರೂಪಾಯಿ ಬಡ್ಡಿ ಮತ್ತು ಸಂಸ್ಥೆಯಿಂದ ೧೦ರೂಪಾಯಿ ಪ್ರೋತ್ಸಾಹ ಧನ ನೀಡುವ ಕ್ರಮ ಸುರುವಾಯಿತು. ಇದು ತುಂಬ ಜನಪ್ರಿಯವಾಗಿ ಉಳಿತಾಯ ಬುದ್ಧಿಯ ಜತೆ ಆರ್ಥಿಕ ದೃಢತೆಯೂ ಬೆಳೆಯಿತು. ಟೈಲರಿಂಗ್ ತರಬೇತಿ, ಯಂತ್ರ ಖರೀದಿಗೆ ಸಬ್ಸಿಡಿ, ಎಲ್ಲರಿಗೆ ಶುದ್ಧ ಕುಡಿಯುವ ನೀರಿಗಾಗಿ ಕೊಳಾಯಿಗಳ ವ್ಯವಸ್ಥೆ, ವಾಚನಾಲಯ ಸೌಲಭ್ಯ, ಅವನತಿಗಿಳಿದಿದ್ದ ಸರಕಾರಿ ಶಾಲೆಯ ಪುನಶ್ಚೇತನ–ಹೀಗೆ ಹತ್ತು ಹಲವು ಕಾರ್ಯಕ್ರಮಗಳು ರಾಮಸುಧಾಟ್ರಸ್ಟ್‌ನಿಂದ ನಡೆಸಲ್ಪಟ್ಟವು. ಸಂಸ್ಥೆಯ ಅಧ್ಯಕ್ಷ ಡಾ.ಎಂ.ಎಚ್. ರಾಮರಾಯರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಗರಿಯೂ ದೊರೆಕಿತು.

ಡಾ. ಮರಕಿಣಿ ಮುಂದಿನ ತಂಗುದಾಣ ಬಿಹಾರ. ನಾಲ್ಕು ವರ್ಷಕಾಲ ಬಿಹಾರ–ಜಾರ್ಖಂಡ್ ಪ್ರದೇಶದ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಜಗತ್ತಿನಲ್ಲಿ ಅತಿ ಹೆಚ್ಚು ಕುಷ್ಠರೋಗಿಗಳು ಭಾರತದಲ್ಲಿದ್ದಾರೆಂಬುದು ಸರ್ವವಿದಿತ. ಅದರೆ ಆ ರೋಗದ ಬಗ್ಗೆ ಅತಿ ಹೆಚ್ಚು ಮೂಢನಂಬಿಕೆಗಳೂ ಇರುವುದು ವಿಷಾದಕರ. ಬಿಹಾರ, ಜಾರ್ಖಡ್, ಉತ್ತರಪ್ರದೇಶ, ಅಸ್ಸಾಂಗಳಲ್ಲಿ ತುಂಬಾ ಸಂಖ್ಯೆಯ ಕುಷ್ಠರೋಗಿಗಳು ತುಂಬಿಕೊಂಡಿದ್ದಾರೆ. ಹೀಗಾಗಿ ಮೊದಲಲ್ಲಿ, ೨೦೧೦ನೇ ಇಸವಿಯೊಳಗೆ ವಿಶ್ವವನ್ನು ಕುಷ್ಠರೋಗ ಮುಕ್ತಗೊಳಿಸುವ ವಿಶ್ವ ಆರೋಗ್ಯಸಂಸ್ಥೆಯ ಗುರಿಗೆ ರಾಜ್ಯ ಸರಕಾರಗಳು ಸ್ವಯಂ ಸೇವಾ ಸಂಸ್ಥೆಗಳ ಮೊರೆಹೋದವು. ಯಾಕೆಂದರೆ, ಕೇವಲ ಮಾತ್ರೆಗಳನ್ನು ಆರು ತಿಂಗಳು ನಿಗದಿತವಾಗಿ–ನಿರಂತರವಾಗಿ ಸೇವಿಸುವುದು ಮಾತ್ರವಲ್ಲದೆ, ರೋಗದ ಕುರಿತಾದ ತಪ್ಪು ಕಲ್ಪನೆಗಳನ್ನು ನಿವಾರಿಸಿ ಸರಿಯಾದ ಜಾಗೃತಿಯನ್ನು ಉಂಟುಮಾಡುವ ಗುರುತರ ಜವಾಬ್ದಾರಿಯನ್ನೂ ನಿರ್ವಹಿಸಬೇಕಾಗಿತ್ತು.

ಚೆನ್ನೈ ಮೂಲಕ ಡೇಮಿಯನ್ ಫೌಂಡೇಷನ್ ಮುಖಾಂತರ ಡಾಕ್ಟ್ರು ಬಿಹಾರದತ್ತ ಹೆಜ್ಜೆ ಹಾಕಿದರು. ಅಕ್ಷರಶಃ ನಿದ್ರಿಸುತ್ತಿದ್ದ ಅಲ್ಲಿನ ಕುಷ್ಠರೋಗ ನಿವಾರಣಾ ವಿಭಾಗದ ಅಧಿಕಾರಿಗಳನ್ನು ಎಬ್ಬಿಸಿ, ಪುನಶ್ಚೇತನ ಶಿಬಿರಗಳನ್ನು ಅವರಿಗಾಗಿ ಮೊದಲು ನಡೆಸಿದರು. ಮತ್ತೆ ಅವರನ್ನು ಕರೆದುಕೊಂಡು ಊರು, ಕೇರಿ, ಕಾಡು, ಹಾದಿಗಳನ್ನು ಸುತ್ತಿದರು. ಬಿಹಾರದ ಆಂತರ್ಯದ ಹದಗೆಟ್ಟ ರಸ್ತೆಗಳ ಪರಿಚಯವೂ ಸಾಕಷ್ಟಾಯಿತು. ಎಷ್ಟೋ ಕಡೆ ಕಿಲೋಮೀಟರುಗಟ್ಟಲೆ ನಡೆದುಕೊಂಡು ಹೋಗಬೇಕಾಗುತ್ತಿತ್ತು. ಮೂಲ ನಿವಾಸಿಗಳಾದ ಕಾಡು ಜನರು ವಾಸಿಸುತ್ತಿದ್ದ 'ತೋಲ' (ಗುಂಪು ಮನೆಗಳು)ಗಳಿಗೆ ಭೇಟಿ ನೀಡಿ ಪರೀಕ್ಷೆ ಮಾಡಿ, ನಿರಂತರ ಔಷಧ ಸೇವನೆಯ ಉಸ್ತುವಾರಿಗೆ ಕಾರ್ಯಕರ್ತರನ್ನು ನೇಮಿಸಿ ಬರುತ್ತಿದ್ದರು ಡಾಕ್ಟ್ರು. ವಾರದ ಸಂತೆಗಳಲ್ಲಿ, ಜಾತ್ರೆ–ಉತ್ಸವಗಳಲ್ಲಿ ವಿಶೇಷ ಶಿಬಿರಗಳನ್ನೂ ನಡೆಸಿದರು. ಬಹು ಔಷಧಿ ಚಿಕಿತ್ಸೆ... ನಿಯಮಿತವಾಗಿ ನಡೆಸಿದರೆ ಪೂರ್ತಿಯಾಗಿ ರೋಗವಾಸಿಯಾಗುತ್ತದೆ ಎಂಬುದನ್ನು ಅರ್ಥಮಾಡಿಸಬೇಕಾದ ಅನಿವಾರ್ಯತೆಯೂ ಅಲ್ಲಿತ್ತು. ರೋಗದ ಬಗೆಗಿದ್ದ ಅಜ್ಞಾನ, ಭಯ, ತಿರಸ್ಕಾರ, ಪ್ರತ್ಯೇಕತೆ– ಇವೆಲ್ಲವನ್ನು ಹೋಗಲಾಡಿಸುವ ಹೊಣೆಗಾರಿಕೆಯಿತ್ತು. ಶಸ್ತ್ರಚಿಕಿತ್ಸೆ, ಬಾಹ್ಯೋಪಚಾರಗಳಿಂದ ಕುಷ್ಠರೋಗಿಗಳ ಅಂಗವೈಕಲ್ಯವನ್ನು ತಕ್ಕ ಮಟ್ಟಿಗೆ ಕಡಿಮೆ ಮಾಡಲು ಸಾಧ್ಯವಿದ್ದು ಅದಕ್ಕೂ ಅಗತ್ಯವ್ಯವಸ್ಥೆ ಮಾಡಬೇಕಾಗಿತ್ತು.

ಅಂತೂ ನಾಲ್ಕನೇ ವರ್ಷದ ಆರಂಭದಲ್ಲಿ ನಡೆದ ಒಂದು ಬೃಹತ್ ಆರೋಗ್ಯಮೇಳದ ಸಂದರ್ಭದಲ್ಲಿ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ ಗಮನಾರ್ಹವಾದ ಯಶಸ್ಸನ್ನು ಕಂಡಿರುವುದಾಗಿ ದಾಖಲಾಯಿತು. ನವಾನ್ ಜಿಲ್ಲೆಯ ಒಂದು ಗ್ರಾಮವನ್ನಂತೂ 'ಕುಷ್ಠವಿಮುಕ್ತ' ವೆಂಬುದಾಗಿ ಸರಕಾರ ಘೋಷಿಸಿತು.

ಆದರೆ, ಬಿಹಾರದ ಬೆವರಿಳಿಸಿ ಬಸಿಯುವ ಬೇಸಿಗೆ, ಗಡಗಡ ನಡುಗಿಸುವ ಚಳಿ, ಹೊಂಡ ಗುಂಡಿಗಳ ರಸ್ತೆ ಪ್ರಯಾಣ-ಇವೆಲ್ಲವನ್ನು ಇನ್ನಷ್ಟು ತಡಕೊಳ್ಳುವುದು ಅಸಾಧ್ಯವೆಂದು ಎಪ್ಪತ್ತರ ಹರೆಯದ ವೈದ್ಯರವೃದ್ಧ ದೇಹಕ್ಕೆ ಅನಿಸಿದಾಗ, ಅಲೆಮಾರಿ ಜೀವನಕ್ಕೆ ವಿದಾಯ ಹೇಳಬಯಸಿ ಕನ್ನಡ ನಾಡಿಗೆ ಮರಳಿ ಬಂದರು ಡಾ. ಮರಕಿಣಿ.

ಆ ಬಳಿಕ ಸುಮಾರು ೫ ತಿಂಗಳ ಕಾಲ ತುಮಕೂರು ಬಳಿ ಅರಣ್ಯದಲ್ಲಿನಾಮದ ಚಿಲುಮೆ ಅತಿಥಿಗೃಹದಲ್ಲಿ ತಂಗಿ 'ಸಸ್ಯ ಸಂರಕ್ಷಣೆ-ಹಸಿರು ಆರೋಗ್ಯ' ಎಂಬ ಪುಸ್ತಕವನ್ನು ತಯಾರು ಮಾಡಿದರು. ತುಮಕೂರು ಅರಣ್ಯ ಸಂರಕ್ಷಣಾಧಿಕಾರಿಯವರ ಕೇಳಿಕೆಯಂತೆ ಈ ಗ್ರಂಥ ಸಿದ್ಧವಾಯಿತು. ಆ ಬಳಿಕವೂ, ನಗರ ಜೀವನದ ನರಕಯಾತನೆಗೆ ಮರಳುವುದು ಬೇಡವೆಂದು, ಉಡುಪಿಯಲ್ಲಿರುವ ಸೋದರ ಡಾ.ಎಂ.ವಿ.ಭಟ್ಟರು (ಅವರು ಇನ್ನೂ ಬಿಹಾರದಲ್ಲಿಯೇ ಕೆಲಸ ಮಾಡುತ್ತಿದ್ದರು) ಮನೆಯಲ್ಲಿ ಸುಮಾರು ಎಂಟು ತಿಂಗಳು ಇದ್ದರು. ಆ ಸಂದರ್ಭದಲ್ಲಿ ಹತ್ತಿರದ ಕಾಪು ಬಳಿಯಲ್ಲಿ ಬೆಂಗಳೂರಿನ ಫ್ರೀಡಂ ಫೌಂಡೇಷನ್ ಸಂಸ್ಥೆ ಪ್ರಾರಂಭಿಸಿದ ಏಡ್ಸ್ ಶುಶ್ರೂಷಾ ಕೇಂದ್ರದ ಪ್ರಾಜೆಕ್ಟ್ ಕೋ ಆರ್ಡಿನೇಟರ್ ಆಗಿ ಕೆಲವು ಕಾಲ ಕರ್ತವ್ಯ ನಿರ್ವಹಿಸಿದರು.

ಅರಸಿನಕುಂಟೆಯಲ್ಲಿ ವಿಶ್ರಾಂತಿಯರಸಿ....

ಸುಮಾರು ಐದು ದಶಕಗಳ ತಿರುಗಾಟದ ಬದುಕಿನ ದುಡಿತದ ಬಳಿಕ ೨೦೦೨ರಲ್ಲಿ ಡಾಕ್ಟ್ರು ನಿವೃತ್ತ ಜೀವನಕ್ಕೆ ಮನಸ್ಸು ಮಾಡಿದರು. ಆದರೆ ಪಟ್ಟಣದ ಕೆಟ್ಟ ವಾತಾವರಣದಲ್ಲಿ (ಅವರದೇ ಶಬ್ದಗಳಲ್ಲಿ... ಕಾಂಕ್ರೀಟ್ ಕಾಡು, ಉಸಿರುಗಟ್ಟಿಸುವ ದಿನಚರಿ, ಕಲುಷಿತ ಹವೆ, ಕಿವಿಗಡ ಚಿಕ್ಕುವ ಸದ್ದು-ಗದ್ದಲ, ಅವಸರ ಅವಸರ ಎಲ್ಲದಕ್ಕೂ...) ವಿಶ್ರಾಂತಿ ಜೀವನದ ನೆಮ್ಮದಿ ಸಿಗುವುದು ಸಾಧ್ಯವೇ ಇಲ್ಲವೆಂಬುದು ದಂಪತಿಗೆ ಮನದಟ್ಟಾಗಿತ್ತು. ಮಗ ನಾರಾಯಣ ಭಟ್ಟರಿಗೆ ಆಕಾಶವಾಣಿಯಲ್ಲಿ ಉದ್ಯೋಗ-ಆಗಾಗ್ಗೆ ವರ್ಗಾವಣೆ ಇರುವುದರಿಂದ ಅವರ ಜತೆ ಇರುವುದು ಸಾಧ್ಯವಿಲ್ಲ. ಹೀಗಾಗಿ ಬೆಂಗಳೂರಿನಲ್ಲಿ ನಗರದ ಸದ್ದುಗದ್ದಲಗಳಿಂದ ತುಸು ದೂರವಾಗಿ, ನೆಲ ಮಂಗಲದ ಅರಸಿನಕುಂಟೆ ಗ್ರಾಮದಲ್ಲಿ ಮೊದಲೇ ಕೊಂಡಿದ್ದ ಪುಟ್ಟ ನಿವೇಶನವೊಂದರಲ್ಲಿ, 'ಮಾನಸ' ಎಂಬ ಹೆಸರಿನ ಪುಟ್ಟ ಮನೆಯೊಂದನ್ನು, ಸಾಲಮಾಡಿಕಟ್ಟಿ ಅದರಲ್ಲಿ ವಾಸಿಸತೊಡಗಿದರು. ಗೃಹ ಪ್ರವೇಶದ ಹೊತ್ತಿಗೆ ಸರಿಯಾಗಿ ಮಗನ ವರ್ಗಾವಣೆ ಆದೇಶವೂ (ಬೆಂಗಳೂರಿನಿಂದ ಕಾರವಾರಕ್ಕೆ) ಕೈಸೇರಿತು. ಹಾಗಾಗಿ ಹೊಸ ಮನೆಯಲ್ಲಿ ಅಪ್ಪ ಅಮ್ಮನ ಜತೆ ಹೆಚ್ಚು ದಿನ ಇರುವ ಅವಕಾಶ ನಾರಾಯಣ ಭಟ್ಟರಿಗೂ ಸಿಗಲಿಲ್ಲ. ೧.೧೧.೨೦೦೩ರಂದು ಅರಸಿನಕುಂಟೆಯ ಆದರ್ಶನಗರದ 'ಮಾನಸ' ದೊಳಗಡೆ ಒಲೆಹಚ್ಚಿ "ಇದುವೇ

ಅಲೆಮಾರಿ ಧನ್ವಂತರಿಯ ಕೊನೆಯಡೇರೆ" ಎಂದು ಹೇಳಿಕೊಂಡು ಹಾಲು ಕಾಯಿಸಿ ಬಿಸಿ ಕಾಫಿ ಮಾಡಿಕೊಂಡು ಕುಡಿದ ಡಾಕ್ಟರ್ ದಂಪತಿ ಮಾತ್ರ ಅಲ್ಲಿಯೇ ನೆಲೆನಿಂತರು.

ವೃತ್ತಿಯಿಂದ ನಿವೃತ್ತರಾದ ಬಳಿಕ ಪ್ರವೃತ್ತಿಗೆ ಸಾಕಷ್ಟು ಸಮಯ ಸಿಕ್ಕಿತು. ಆದರ್ಶನಗರ "ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಕಾಸ ವೇದಿಕೆ"ಯನ್ನು ಒಂದಷ್ಟು ಮಂದಿ ಸಮಾನಮನಸ್ಕರ ಜತೆ ಸೇರಿ ಹುಟ್ಟು ಹಾಕಿದರು. ಪ್ರತಿ ತಿಂಗಳ ಮೂರನೇ ಭಾನುವಾರ ಸಂಜೆ ಸಾಹಿತ್ಯ ಸಂಗೀತ ಮೊದಲಾದ ಚಟುವಟಿಕೆಗಳಿಗೆ ಮೀಸಲಾಯಿತು. ಡಾ.ಎಚ್.ಎಸ್. ಗೋಪಾಲ ರಾಯರು ನೆಲಮಂಗಲದ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳು-ಉತ್ಖನನದ ಅಧ್ಯಯನ ಕುರಿತು ಬರೆದ ಪುಸ್ತಕ ಮೊದಲಾಗಿ ಪ್ರಕಟವಾಯ್ತು. ಬಳಿಕ ಕಮಲಾ ಮೂರ್ತಿಯವರ ಹನಿಗವನಸಂಗ್ರಹ, ಕಥಾ ಸಂಕಲನ (ಪುನ್ನಾಗ) ಬೆಳಕು ಕಂಡವು. ಆ ನಂತರ ತನ್ನಜ್ಜಿ ಡಾ.ಸಬಿತಾ ಮರಕಿಣಿ ಬರೆದ ಹವಿಗನ್ನಡದ ಕಾದಂಬರಿ 'ಮುಗಿಲು ಬಿರಿಯಿತು' ಅನ್ನು ಮೊಮ್ಮಗಳು ಹಿಮಾ ಬಿಡುಗಡೆ ಮಾಡಿ ಸಂಭ್ರಮ ಹಂಚಿದಳು. ಏಕಕಾಲಕ್ಕೆ ಅಪ್ಪ, ಅಮ್ಮ, ಮಗ-ಮೂವರ ಕೃತಿಗಳೂ ಒಂದೇ ವೇದಿಕೆಯಲ್ಲಿ ಬಿಡುಗಡೆಯಾದ ಸಡಗರವೂ ದಾಖಲಾಯಿತು. ಡಾ.ಸಬಿತಾ ಮರಕಿಣಿಯವರ ಹವ್ಯಕ ಸಣ್ಣ ಕತೆಗಳ ಸಂಕಲನ "ಮಾಂಗ್ಲೀ ಮಾಸ್ಟ್ರಂಗೆ ನಮಸ್ಕಾರ" ಕೃತಿಯಂತೂ ಬಹಳ ಜನಪ್ರಿಯವಾದ, ಬೇಡಿಕೆಯುಳ್ಳ ಪುಸ್ತಕವಾಯಿತು. ವಸಂತೋತ್ಸವ, ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ಹಿರಿಯರಿಗೆ ಸನ್ಮಾನ, ಯಕ್ಷಗಾನ-ಇತ್ಯಾದಿ ಕಾರ್ಯಕ್ರಮಗಳಿಗೂ ವೇದಿಕೆ ಅವಕಾಶ ಕಲ್ಪಿಸಿತು. ಅರುವತ್ತು ವರ್ಷಗಳ ಹಿಂದೆ ಸಂಪಾದಿಸಿ ಪ್ರಕಟಿಸಿದ್ದ ಹವಿಗನ್ನಡ ತೊಟ್ಟಿಲು ತೂಗುವ ಪದಗಳ ಎರಡನೇ ಮುದ್ರಣ, 'ಮನೆಮದ್ದು'ಕಿರು ಹೊತ್ತಗೆ 'ಹಳೇಮರಕ್ಕೆ ಹೊಸ ಚಿಗುರು' ಎಂಬ ಹವಿಗನ್ನಡ ಕೃತಿ-ಹೀಗೆ ಹಲವು ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಲಾಯಿತು.

೨೦೦೪ರಲ್ಲಿ ಡಾ.ಎಂ.ಬಿ. ಮರಕಿಣಿ ಕರ್ನಾಟಕ ಸರಕಾರದ 'ರಾಜ್ಯೋತ್ಸವ ಪ್ರಶಸ್ತಿ'ಗೆ ಭಾಜನರಾದರು. ಈಚಿನ ದಿನಗಳಲ್ಲಿ ಈ ಪ್ರಶಸ್ತಿಗೆ ಅರ್ಜಿಹಾಕುವ, ಲಾಬಿಮಾಡುವ ಪ್ರಕ್ರಿಯೆಗಳು ರೇಜಿಗೆ ಹುಟ್ಟುಸುತ್ತಿರುವಾಗ, ಡಾ.ಮರಕಿಣಿ ಅಂತಹ ಯಾವುದೇ 'ಅಹಿತಕರ ಘಟನೆ'ಗಳಿಲ್ಲದೆ ಅರ್ಹವಾಗಿ ಗುರುತಿಸಲ್ಪಟ್ಟುದು ನೆಮ್ಮದಿ ತರುವ ಅಂಶ. ತೀರ ಅನಿರೀಕ್ಷಿತವಾಗಿ, ಕೊನೆಗಳಿಗೆಯಲ್ಲಿ ಪ್ರಶಸ್ತಿ ಘೋಷಣೆಯಾಗಿ ರಾತ್ರೋರಾತ್ರಿ ಉಡುಪಿಯಿಂದ ಬೆಂಗಳೂರಿಗೆ ಹೋಗಿ ಪುರಸ್ಕಾರವನ್ನು ಸ್ವೀಕರಿಸಿದರು ಡಾ.ಎಂ.ಬಿ. "ಇದರ ಪರಿಣಾಮವೋ ಎಂಬಂತೆ ಹಲವಾರು ಸ್ಥಳಗಳಿಗೆ ಅನಿರೀಕ್ಷಿತವಾದ ಪ್ರವಾಸ, ಸನ್ಮಾನ, ಭಾಷಣಗಳನ್ನು ಒಪ್ಪಿಕೊಳ್ಳಲೇಬೇಕಾಯಿತು. ನನಗೆ ಒಂದಿಷ್ಟು ಹಣವೂ ಖರ್ಚಾಯಿತು. (ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಪ್ರವಾಸವೆಚ್ಚ ತೆಗೆದು ಕೊಳ್ಳುತ್ತಿಲ್ಲ). ಒಂದು ಸಂತೃಪ್ತಿಯ ವಿಷಯ ಏನೆಂದರೆ ಈಗ ಕಾಲೇಜ್ ಆಗಿರುವ ಹುಟ್ಟೂರು ಅಡ್ಯನಡ್ಕ ಶಾಲೆ ೪೫ ವರ್ಷಗಳ ನಂತರ ಈಗ 'ಪ್ರಶಸ್ತಿ' ದೊರೆಕಿರುವ ಸಂದರ್ಭದಲ್ಲಿ ಆಹ್ವಾನಿಸಿ ಈ ಹಳೆವಿದ್ಯಾರ್ಥಿಗೆ ಪುನರಾಶೀರ್ವಾದ ಮಾಡಿದ್ದು. ನನಗದು ನೆಮ್ಮದಿಯ ಸಂಗತಿ. ಕಾರವಾರ, ಕಾಂತಾವರ, ನೆಲಮಂಗಲ ಹಲವೆಡೆ ಸನ್ಮಾನಗಳು

ನಡೆದವು... "ಅಂತ ಆತ್ಮಕಥನದಲ್ಲಿ ಬರೆಯುವ ಡಾಕ್ಟ್ರ ನಿರ್ಮೋಹಿತ್ವವನ್ನು ಗಮನಿಸದೆ ಇರಲಾಗುವುದಿಲ್ಲ.

'ವಿಶ್ರಾಂತಿ ದಿನಗಳ ಮನಶ್ಯಾಂತಿ' ಶೀರ್ಷಿಕೆಯಡಿಯಲ್ಲಿ ಅವರ ಮಾತುಗಳ ಸ್ವಾರಸ್ಯವನ್ನು ಹಾಗೇ ಸವಿಯಬೇಕೆಂದರೆ–"ಮುಂಜಾವಿನ ಸಕ್ಕರೆನಿದ್ದೆ ಇನ್ನೂ ರೆಪ್ಪೆಗಳಿಂದ ಕರಗುತ್ತಿದ್ದಂತೆಯೇ ಉಷಃಕಾಲದ ದಿನಚರಿ ಪ್ರಾರಂಭ. ಮುಖದ ಮೇಲೊಂದಿಷ್ಟು ತಣ್ಣೀರು ಚಿಮುಕಿಸಿ, ಬಾಯಿ ಮುಕ್ಕಳಿಸುತ್ತಿರುವಾಗಲೇ ಅಡಿಗೆಮನೆಯತ್ತ ಕಾಲು ತಾನಾಗಿ ಸಾಗುತ್ತದೆ. ಸ್ಟೌನ ಮೇಲೆ ಚಿಕ್ಕ ಬೋಗುಣಿಯಲ್ಲಿ ಒಂದು ಕಪ್ ನೀರು ಕುದಿಸಿ ಅದಕ್ಕೊಂದು ಚಮಚ ಬ್ರೂಪುಡಿ ಹಾಕಿ ಎರಡು ಚಮಚ ಸಕ್ಕರೆ ಸುರಿದು ಕಪ್ಪು ಕಾಫಿಯ ಕಪ್‌ನೊಂದಿಗೆ ಚಾವಡಿಗೆಬಂದು ಟಿ.ವಿ.ಯ ಕಿವಿಹಿಂಡಿ ಯಾವುದೋ ಒಂದು ಸುಪ್ರಭಾತವನ್ನೋ ಶರಣರ ವಚನವನ್ನೋ ದಾಸರಪದವನ್ನೋ ನೋಡುತ್ತಾ ಹತ್ತು ನಿಮಿಷ ಕಳೆಯುವುದು. ಅನಂತರ ಒಂದರ ಹಿಂದೆ ಒಂದರಂತೆ ಬರುವ ಹಾಲಿನ ಪ್ಯಾಕೇಟ್, ದಿನಪತ್ರಿಕೆಯ ಸುರುಳಿ, ತೋಟದಿಂದ ಕಿತ್ತು ತಂದ ತಾಜಾ ತರಕಾರಿ–ಸೊಪ್ಪುಗಳ ಬುಟ್ಟಿಯನ್ನು ಹೊತ್ತುಕೊಂಡು ಮನೆಬಾಗಿಲಿಗೇ ಬಂದು ಮಾರಾಟ ಮಾಡುವ ಹಳ್ಳಿಯ ಹೆಂಗಸರು... ಇವರ ಸರತಿಯಾಗಿ ಮುಗಿಯುತ್ತಿದ್ದಂತೆ ಮನೆಯ ಕಿರು ಅಂಗಳದಿಂದ ಹಿಡಿದು ಅಡುಗೆಕೋಣೆ – ದೇವರಗೂಡಿನವರೆಗೆ ಪ್ರತಿಯೊಂದನ್ನು ಬಳಿದು ತಿಕ್ಕಿತೊಳೆದು ಒಪ್ಪ – ಓರಣಗೊಳಿಸುವ ಉಸ್ತುವಾರಿಯ ಲಕ್ಷ್ಮಿಯ ಪರಿವಾರ ಹಾಜರ್. ಸೂರ್ಯನ ಮುಖದರ್ಶನವಾಗುತ್ತಿದ್ದಂತೆಯೇ ಸ್ವಲ್ಪ ಹೊತ್ತು ಕೈ ಬಡಿಗೆ ಸಹಿತವಾದ ತಿರುಗಾಟ, ಪೇಪರ್ ಓದುವುದು, ಟಿ.ವಿ.ವಾರ್ತೆಯನ್ನು ಕಣ್ಣು ಮುಚ್ಚಿಕೊಂಡೇ ಆಲಿಸುವುದು, ಎಂಟು ಗಂಟೆಯಾಗುತ್ತಲೇ (ಈಗ ೮–೩೦) ಅಡಿಗೆ ಮನೆಯತ್ತ ದೃಷ್ಟಿ ಹಾಯಿಸುವುದು, ಟೇಬಲ್ ಮೇಲೆ ತಟ್ಟೆ ಇರಿಸಿದ ಸದ್ದು ಕೇಳಿಸುತ್ತಲೇ ಠಣ್ಣನೆ ಜಿಗಿದು ಕುರ್ಚಿಯಲ್ಲಿ ಕುಳಿತು ಬ್ರೇಕ್‌ಫಾಸ್ಟ್‌ನ್ನು ಆಸೆಗಣ್ಣುಗಳಿಂದ ಎದುರು ನೋಡುವುದು. ಇಷ್ಟು ಅವಸರ ಯಾಕೇನೋ, ಇನ್ನೊಂದು ಎರಡು ನಿಮಿಷ ಕಾಯಲಿಕ್ಕಾಗಲ್ವ ಎಂಬ ನಿತ್ಯದ ಟೀಕೆ ಸಂದೇಶವಾಕ್ಯದ ಹಿಂದೆಯೇ ದೊರಕುವ ಇಡ್ಲಿಸಾಂಬಾರ್/ದೋಸೆ ಚಟ್ನಿ/ಉಪ್ಪಿಟ್ಟು/ಗುಳಿಯಪ್ಪ (ಈ ಪೈಕಿ ಯಾವುದಾದರೊಂದು)–ಹೀಗೆ ದಿನದ ಚರ್ಯೆ – ಅಲ್ಲ ದಿನನಿತ್ಯದ ಚರ್ಯೆ ನಡೆಯುತ್ತಲೇ ಇರುತ್ತದೆ...

"ದಿನಚರಿಯಲ್ಲಿ ಸಹಚರಿಯೊಂದಿಗೆ ಕೂಡ (ತೀರ) ಪರಿಮಿತವಾದ ಮಾತುಕತೆ. ಮತ್ತೊಂದಿಷ್ಟು ವಿಶ್ರಾಂತಿ. ೧೧ ಗಂಟೆಗೊಂದು ಲೋಟ ತಾಜಾ ಹಣ್ಣಿನ ರಸ. ವಿಶ್ರಾಂತಿ. ಮೊಮ್ಮಕ್ಕಳು–ಅವರ ಗಲಾಟೆ–ಲಗಾಟೆಗಳಿಲ್ಲ. ಆಟ–ಕಾದಾಟಗಳ ಸುಳಿವಿಲ್ಲ. ಸಂಜೆ ವಾಕಿಂಗ್ ಕರೆದುಕೊಂಡು ಹೋಗುವ, ಅಲ್ಲಿ ಒಂದು ಪಾಕೇಟ್ ಕಳ್ಳೇಕಾಯಿ ಸುಲಿದು ಕೊಡುತ್ತಿದ್ದುದು ಮಾಯವಾಗಿ ಬಿಟ್ಟಿದೆ–ಸ್ಕೂಲ್‌ವ್ಯಾನ್ ಬಂತು, ಓಡು ಬ್ಯಾಗ್ ತಗೊಂಡು ಬಾ–ಲೇಟಾಯಿತು ಎಂಬೆಲ್ಲಾ ರಸಗಳಿಗೆಗಳೆಲ್ಲ ಎಲ್ಲಿ ಮಾಯವಾದವೋ...

"ನಾಷ್ಟಾ ಮುಗಿಸಿ ಕೋಣೆ ಸೇರಿಕೊಂಡು ಪುಸ್ತಕ ಕೈಗೆತ್ತಿ ಕೊಂಡು – ಓದಲು ಪುಟ ಮಗುಚುತ್ತೇನೆ. ಪೆನ್, ನೋಟ್‌ಬುಕ್ ಹಿಡಿದು ಬರೆಯುವುದಕ್ಕೆ ತೊಡಗಿದರೆ

–ಅದು ಕೇವಲ ಗೀಚುವುದರಲ್ಲಷ್ಟೇ ಪರ್ಯವಸಾನವಾಗುತ್ತದೆ. ಕಿರುಗುಟ್ಟುವ ಕರ್ಣಪಿಶಾಚಿ (ಮೊಬೈಲ್ ಫೋನ್)... ರಾಂಗ್ ನಂಬರ್... ಎಸ್–ಇಲ್ಲ ಕಾರವಾರಕ್ಕೆ ಹೋಗಿದ್ದಾರೆ ಇತ್ಯಾದಿ ಉತ್ತರಗಳು–ಇದು... ಇಂದ ನಿಮಗೆ ಉಚಿತಕರೆ – ನಿಮಗೊಂದು ವೀಕೆಂಡ್ ಸೌಲಭ್ಯದ ಜಾಹೀರಾತು–ಟಕ್ ಅಂತ ಫೋನ್ ಬಂದ್ ಮಾಡೋದು. ಹಾಗೂ ಹೀಗೂ ಮಧ್ಯಾಹ್ನದವರೆಗೂ ಕಾಲಹರಣ. ಯಾರಾದರೊಬ್ಬರ ಪತ್ರವೋ–ಇನ್ನೇನೋ ಟಪ್ಪಾಲ್ ಬರುತ್ತದೆ...

“ನಮ್ಮವರು ಸ್ನಾನ ಮುಗಿಸಿ, ಪೂಜೆ ಎಂದು ದೇವರ ಫೋಟೋ ಮುಂದೆ ಒಂದಿಷ್ಟು ಹೊತ್ತು ಮೊಸಲಿಟ್ಟು ಕೈಮುಗಿಯುತ್ತಾರೆ. ಕೊನೆಗೆ ೧೦.೩೦ರ ಸುಮಾರಿಗೆ ಊಟದ ಮೇಜಿನ ಒಂದು ಬದಿಯಲ್ಲಿ ಇಟ್ಟ ಔಷಧದ ಭಂಡಾರದಿಂದ ಇನ್ಸುಲಿನ್ ಚುಚ್ಚುಮದ್ದು ಸಿರಿಂಜ್ ತೆಗೆದುಕೊಂಡು ಸ್ವಯಂಚುಚ್ಚಿಕೊಂಡು ಉಪಾಹಾರಕ್ಕೆ ನಮ್ಮವರು ತೊಡಗುವಾಗ ೧೧ ಗಂಟೆ. ಶೆಟ್ಟರ ಅಂಗಡಿಯಿಂದ ಏನಾದರೂ ದಿನಸಿ ಬೇಕಾಗಿದ್ದರೆ, ಆಗಾಗ ಬರೆದಿಟ್ಟ ಚೀಟಿಯನ್ನು ಫೋನ್ ಮೂಲಕ ರವಾನಿಸುವುದು. ಅವರು ಬಂದಾಗ ಡೆಲಿವರಿ ತೆಗೆದು ಒಳಗಿಟ್ಟುಬಿಡುವುದು ನನ್ನ ಪಾಲಿನ ಹೊಣೆ.

“ಅಮ್ಮನವರು ಒಳಗಿನ ಕೋಣೆ ಸೇರಿ ವಿಶ್ರಾಂತಿಗೆ ಸಿದ್ಧರಾದ ಕೂಡಲೆ ಹೊರಗಿನ ಕೊಠಡಿಯಲ್ಲಿ ನಾನು ಏನಾದರೂ ಬರೆಯುವ ಪ್ರಯತ್ನ ಮುಂದುವರಿಸುತ್ತೇನೆ. ಹೊಸಮನೆ ಎಂಬುದರಿಂದ ಗೇಟು ಟಕಟಕ ಸದ್ದು ಮಾಡಿ ಹಾಜರಾಗುವ ಮಾರಾಟಗಾರರು –sample ನೋಡಿ ಎನ್ನುವ, ಒಂದಕ್ಕೆ ಒಂದು ಫ್ರೀ... ಅವರನ್ನೆಲ್ಲಾ ಅವರವರ ಅಂತಸ್ತಿಗೆ ತಕ್ಕಂತೆ ಬೇಡ, ಮುಂದೆ ಹೋಗಿ, Dont waste your time, mine too... ಹೀಗೆ ನಾನಾ ವಿಧವಾಗಿ ಗೋಗರೆದು ಓಡಿಸಿ ಮತ್ತೆ ಲೇಖನಿ ಎತ್ತುತ್ತೇನೆ. ಆದರೆ ಬರವಣಿಗೆ ಮಾತ್ರ (ಅಂದಿನ ಮಟ್ಟಿಗೆ) ಮುಂದೆ ಸಾಗುವುದಿಲ್ಲ.

“ಇಂತಹ ವಿಶ್ರಾಂತಿ ಗಳಿಗೆಗಾಗಿ ಎಷ್ಟು ವರ್ಷಗಳಿಂದ ಮರು ನೋಡುತ್ತಿದ್ದೆವೋ ಏನೋ... ಮಧ್ಯಾಹ್ನದ ಊಟದ ನಂತರ ಒಂದು ಗಂಟೆ ವಿಶ್ರಾಂತಿ, ನಾಲ್ಕು ಗಂಟೆಗೆ ಚಹಾ (ಒಂದಿಷ್ಟು ಬಾಯಾಡಿಸಲು ತಿಂಡಿ) ಹೀಗೆ ಗಂಟೆಗಳು ಉರುಳುತ್ತಲೇ ಇರುತ್ತವೆ. ಸಂಜೆಗೆ ಕಮಲಾಮೂರ್ತಿ ಬರುತ್ತಾರೆ. ಆಚೆಮನೆಯ ನರ್ಸ್ ಸರೋಜಮ್ಮನ ಮಗಳು ಪಾರ್ವತಿ ತನ್ನ ಪುಟ್ಟ ಮಗುವನ್ನೆತ್ತಿಕೊಂಡು ಬರುತ್ತಾಳೆ. ಹೀಗೆ ಮನೆಯ ಮುಂದಿನ ಕಿರು ಅಂಗಳದಲ್ಲಿ ಮಹಿಳಾ ಮಂಡಲಿ ಸೇರಿರುತ್ತದೆ. ಈ ಅನೌಪಚಾರಿಕ ಸಭೆಯಲ್ಲಿ ನನಗೆ ಕೆಲಸವಿಲ್ಲ ಎಂದು ಕೊಂಡು ಕರ್ಣಪಿಶಾಚಿಯನ್ನು ಕೊರಳಿಗೆ ಮಾಲೆಯಂತೆ ಇಳಿಬಿಟ್ಟು ಗಾಳಿಸೇವನೆಗೆ ಹೊರಡುತ್ತೇನೆ. ಮರಳಿದಾಗ ಮನೆ ಬಾಗಿಲು ಬಂದ್ ಆಗಿರುತ್ತದೆ. ಸ್ತ್ರೀವೃಂದ ಸಂಜೆಗಾಳಿಗೆ ಮೈಯೊಡ್ಡಲು ಮಕ್ಕಳ ಪಾರ್ಕ್‌ನತ್ತ ಹೋಗಿರುತ್ತಾರೆ.

“ಕತ್ತಲು ಕವಿಯುತ್ತದೆ. ವಿದ್ಯುತ್ ಸರಬರಾಜಿದ್ದಾಗ ಒಲ್ಬು ಬೆಳಕು ಚೆಲ್ಲುತ್ತದೆ. ಇಲ್ಲದಿದ್ದರೆ ಕ್ಯಾಂಡಲ್. ಮತ್ತೆ ಕರೆಂಟ್ ಬಂದಾಗ ಟಿ.ವಿ. ಅನಂತರ ರಾತ್ರಿ ಊಟ. ಇನ್ನೊಂದೆರಡು ಸೀರಿಯಲ್‌ಗಳು, ಟಿ.ವಿ.ಯ ಹತ್ತು ಗಂಟೆ ವಾರ್ತೆ... ಎಂದು ಹೇಳುತ್ತಾ ನಿದ್ರಾಲೋಕದತ್ತ ಪಯಣ... ಒಂದು ದಿನ ಮುಗಿಯಿತು.

"ಈ ಯಾಂತ್ರಿಕ ದಿನಚರಿಯಲ್ಲಿ ಒಂದು ಮಾಂತ್ರಿಕತೆ ಇದೆ, ಸಮಾಧಾನವಿದೆ, ನೆಮ್ಮದಿಯೂ ಇದೆ..."

ಸಬಿತಾ ಜತೆಯಲಿ ಸವಿ ಸವಿ ಬದುಕು

ಡಾ. ಸಬಿತಾ ಇಲ್ಲದೆ ಡಾ. ಎಂ.ಬಿ. ಮರಕಿಣಿ ಅಪೂರ್ಣ. ಅಷ್ಟೊಂದು ಅವಿನಾಭಾವ ಸಂಬಂಧ ಅವರದು. ಅಕ್ಷರಶಃ "ನಾನು ನಿನಗಾಗಿಯೇ ಜನ್ಮವೆತ್ತಿ ಬಂದೆ" ಎಂಬಷ್ಟು ಗಾಢವಾಗಿ ಪರಸ್ಪರ ಒಪ್ಪಿಕೊಂಡು–ಅಪ್ಪಿಕೊಂಡು ಇಬ್ಬರೂ ಜೀವಿಸಿದರೆಂದರೆ ಅತಿಶಯೋಕ್ತಿಯಲ್ಲ. ಫೆಬ್ರವರಿ ೨೦೧೧ರಲ್ಲಿ, ತಮ್ಮನ್ನು ಒಂಟಿಯಾಗಿ ಬಿಟ್ಟು, ಹೃದಯಾಘಾತಕ್ಕೆ ಜೀವ ತೆತ್ತ ಸಬಿತಾರನ್ನು ನೆನಪಿಸಿಕೊಂಡಾಗಲೆಲ್ಲ ಎಂ.ಬಿ. ಹೃದಯ ಭಾರವಾಗುತ್ತದೆ. ಅವರ ಜತೆಗಿನ ಸಿಹಿ ನೆನಪುಗಳನ್ನು ಮೆಲುಕು ಹಾಕುವಾಗಲೆಲ್ಲ ಮನಸ್ಸು ಗರಿಬಿಚ್ಚಿ ಕುಣಿಯುತ್ತದೆ. ಆತ್ಮಕತೆಯ 'ನಿವೇದನೆ'ಯಲ್ಲಿ ಅವರು ಹೇಳಿದ್ದು, ನೋಡಿ: "ಈಗಷ್ಟೇ 'ಅಲೆಮಾರಿಯಕತೆ' ಅಚ್ಚಾಗಿದೆ. ಆದರೆ ಓದಲು ಸಬಿತಾ ಇನ್ನಿಲ್ಲ! ದಿನಾಂಕ ೧ ಫೆಬ್ರವರಿ ೧೧ರಂದು ಹೃದಯಾಘಾತದಿಂದ ನಿಧನರಾದರು. ನಾನು ಕರಗಿ ಹೋದೆ! ಈಗ ಸಬಿತಾ ನೆನಪಿಗೆ ಕಿರುಕಾಣಿಕೆಯಾಗಿ ಈ ಪುಸ್ತಕವನ್ನು ಸಮರ್ಪಿಸುತ್ತೇನೆ..."

ಇಬ್ಬರಿಗೂ ಪ್ರಾಯದಲ್ಲಿ ಮೂರು ವರ್ಷಗಳ ಅಂತರವಷ್ಟೇ. 'ಯಾವತ್ತೂ ಪರಸ್ಪರ ಹೊಡೆದುಕೊಂಡು ತುಂಡರಿಸದ ಸಮಾನಾಂತರ ರೇಖೆಗಳಂತೆ ನಮ್ಮಿಬ್ಬರ ಜೀವನ ಸಾಗಿತ್ತು. ತುಂಬಾ ನಿಕಟವಾಗಿದ್ದೆವು ನಾವು, ನಿಜ. ಆದರೆ ಎಂದೂ ಒಬ್ಬರನ್ನೊಬ್ಬರು ಅತಿಕ್ರಮಿಸಲಿಲ್ಲ. ಪರಸ್ಪರ ಗೌರವ ನಮ್ಮ ಪ್ರೀತಿಯ ಬೆನ್ನಲುಬಾಗಿತ್ತು..." ಎನ್ನುವ ಎಂ.ಬಿ. ಮಾತುಗಳಲ್ಲಿ ಅವರ ಆದರ್ಶದಾಂಪತ್ಯ ಹೃದಯಸ್ಪರ್ಶಿಯಾಗುತ್ತದೆ.

ಹಾಗಂತ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳು ಇರಲಿಲ್ಲವೆಂದಲ್ಲ. ಅತಿರೇಕದ ಜಗಳವಂತೂ ಇರಲಿಲ್ಲ. ಒಮ್ಮೆ, ಸಬಿತಾ ಆಸಕ್ತಿ ತೋರಿಸುತ್ತಿದ್ದ ಚೈನ್ ಮಾರ್ಕೆಟಿಂಗ್ (ಸರಣಿ ವ್ಯಾಪಾರ–ಒಬ್ಬರು ಮೂವರಿಗೆ, ಅವರು ಇನ್ನೂ ಮೂರು ಮೂರು ಮಂದಿಗೆ ... ಹೀಗೆ ವಸ್ತುಗಳ ಮಾರಾಟಸರಣಿ ಮುಂದುವರಿಯುತ್ತಾ ಹೋದರೆ ಲಾಭ...!) ಬಗ್ಗೆ ಎಂ.ಬಿ.ಯವರಿಗೆ ತುಂಬ ಕೋಪ ಬಂದಿತ್ತು. ಊಟದ ತಟ್ಟೆಯನ್ನೇ ಎತ್ತಿ ಬಿಸುಟು ಅದನ್ನು ಪ್ರದರ್ಶಿಸಿಯೂ ಇದ್ದರು. ಸಂಜೆ ಮಾತ್ರ ಜತೆಯಾಗಿಯೇ ವಾಯುವಿಹಾರಕ್ಕೆ ಹೊರಟರು. ದಾರಿ ನಡೆಯುವಾಗ ಅದೇ ವಿಷಯವಾಗಿ ಮಾತನಾಡುತ್ತ ಧ್ವನಿ ಎತ್ತರಿಸಿದರು ಎಂ.ಬಿ. ಅದನ್ನು ಕೇಳಿದ ಸಬಿತಾ, "ಎಂತ ಎನ್ನ ಹೆದರುಸುತ್ತೆಯಾ? "(ಏನು ನನ್ನನ್ನು ಹೆದರಿಸುತ್ತೀಯಾ?) ಅಂತ ಪ್ರಶ್ನಿಸಿದರು. ಆ ಪ್ರಶ್ನೆಗೆ ಕರಗಿದ ಎಂ.ಬಿ. ನಸುನಗುತ್ತಾ, "ನಿನ್ನ ಹೆದರುಸುಲೆಡಿಗಾ? ಚಾಮುಂಡಿ ಬೆಟ್ಟಲ್ಲಿ ಕತ್ತಿ ಹಿಡ್ಕೊಂಡು ನಿಂದಿದಲ್ಲದಾ, ಅದರ ಬೇಕಾದರೆ ಹೆದರುಸುವೆ. ನಿನ್ನ...?" (ನಿನ್ನನ್ನು ಹೆದರಿಸಲು ಸಾಧ್ಯವೇ? ಚಾಮುಂಡಿಬೆಟ್ಟದಲ್ಲಿ ಖಡ್ಗ ಹಿಡಿದುಕೊಂಡು ನಿಂತಿದ್ದಾನಲ್ಲಾ, ಅವನನ್ನು ಬೇಕಾದರೆ ಹೆದರಿಸಿಯೇನು. ನಿನ್ನನ್ನು...?) ಎಂದರು. ಇಬ್ಬರೂ ಮನತುಂಬಿ ನಕ್ಕರು. ದೊಡ್ಡದಾಗಿ ಬೆಳೆಯುವ ಸಂಭವವಿದ್ದ ಜಗಳವೊಂದು ಮಂಜಿನಂತೆ ಕರಗಿ ನೀರಾಗಿ ಹೋಯಿತು.

"ಸಬಿತಾಗೆ ಸಕ್ಕರೆ ಕಾಯಿಲೆಯಿತ್ತು. ಹಾಗಾಗಿ ಅವರ ಪಾಲಿನ ಸಕ್ಕರೆಯನ್ನೂ ನಾನೇ ತಿನ್ನುತ್ತಿದ್ದೆ...! ನನಗೆ ಸಕ್ಕರೆ ಆಪ್ತಮಿತ್ರ. ಊಟಮಾಡುವಾಗ ಸಕ್ಕರೆಯ ಭರಣಿ ಹತ್ತಿರದಲ್ಲಿಯೇ ಇರಬೇಕು. ಪದಾರ್ಥಗಳಿಗೆ ಉಪ್ಪು ಹೆಚ್ಚಾದರೆ, ರುಚಿ ತುಸು ಆಚೆ-ಈಚೆ ಆದರೆ ಸಕ್ಕರೆ ಹಾಕಿಬಿಟ್ಟರೆ ಆಯಿತು, ಎಲ್ಲ ಸರಿಯಾಗುತ್ತದೆ... "ಹೀಗೆ ನೆನಪಿನ ಸುರುಳಿಯನ್ನು ಬಿಚ್ಚುತ್ತ ಹೋಗುತ್ತಾರೆ ಮಹಾಲಿಂಗ ಭಟ್ಟರು. "How many people have a good doctor as wife? " (ಎಷ್ಟು ಮಂದಿಗೆ ಒಬ್ಬ ಒಳ್ಳೆಯ ವೈದ್ಯರನ್ನು ಹೆಂಡತಿಯಾಗಿ ಪಡೆಯುವ ಯೋಗವಿದೆ?) ಎಂದು ಹೆಮ್ಮೆಯಿಂದ, ಅಭಿಮಾನದಿಂದ ಪ್ರಶ್ನಿಸುವ ಅವರು, "ಸಾಮಾಜಿಕ ಸಮಸ್ಯೆಗಳ ಬಗ್ಗೆ ನಮ್ಮಿರ್ವರ ಆಲೋಚನೆಗಳೂ ಒಂದೇ ರೀತಿಯಲ್ಲಿ ಸಾಗುತ್ತಿದ್ದವು. ಸಮಾಜ ಸೇವೆಯ ವಿಷಯ ಬಂದಾಗ ಇಬ್ಬರೂ ಒಂದೇ ಅಭಿಪ್ರಾಯವನ್ನು ತಾಳುತ್ತಿದ್ದೆವು. ಇಬ್ಬರೂ ಬಾಲ್ಯದಿಂದಲೇ ತುಂಬ ಕಷ್ಟದ ಜೀವನ-ಕಠಿಣ ಪರಿಶ್ರಮಗಳನ್ನು ಅನುಭವಿಸುತ್ತ ಬೆಳೆದವರು. ಸಬಿತಾ, ಅವರ ಅಕ್ಕನ ಮನೆಯಲ್ಲಿದ್ದುಕೊಂಡು ಭಾವನವರ ಪ್ರೋತ್ಸಾಹ-ಬೆಂಬಲಗಳಿಂದಾಗಿ ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿದವರು. ಎಷ್ಟೋ ಬಾರಿ ಪರೀಕ್ಷೆಯ ಹಿಂದಿನ ದಿವಸ ನಾಲ್ಕು ಸೇರು ಅಕ್ಕಿ ಕಡೆಯುವ ಕಲ್ಲಿನಲ್ಲಿ ರುಬ್ಬಿ ಹಿಟ್ಟು ಮಾಡಿಟ್ಟು ಮತ್ತೆ ಓದಲು ಕೂರ ಬೇಕಾಗುತ್ತಿತ್ತು. ಇಂತಹ ಅನುಭವಗಳಿಂದಲೇ ಗಟ್ಟಿಯಾದ ಶರೀರ, ಪಕ್ವವಾದ ಮನಸ್ಸು ಅವರದು. ಹೆಂಡತಿಯ ತಂಗಿಗೆ ಆಪತ್ಕಾಲದಲ್ಲಿ ನೆರವಾಗಿ ಒಬ್ಬ ವೈದ್ಯೆಯಾಗುವ ತನಕ ಆಧರಿಸಿ ಓದಿಸಿದ ಆಕೆಯ ಭಾವ ನಿಜಕ್ಕೂ ಓರ್ವ ಆದರ್ಶ ಪುರುಷ "ಎಂದು ಕೃತಜ್ಞತೆಯಿಂದ ನುಡಿಯುತ್ತಾರೆ.

ಮಕ್ಕಳು ಹತ್ತನೇ ತರಗತಿಯ ತನಕ ಅಪ್ಪ-ಅಮ್ಮನ ಹತ್ತಿರವಿದ್ದುಕೊಂಡೇ ಶಾಲೆಗೆ ಹೋಗಿ ಓದಬೇಕು ಎಂಬುದು ಸಬಿತಾರ ಖಚಿತ ಅಭಿಪ್ರಾಯವಾಗಿತ್ತು. ಮಕ್ಕಳ ಬೆಳವಣಿಗೆಗೂ, ಹೆತ್ತವರ ಜತೆಗಿನ ಸಂಬಂಧ ಹತ್ತಿರವಾಗುವುದಕ್ಕೂ-ಎರಡಕ್ಕೂ ಇದು ಅತ್ಯಗತ್ಯವೆಂದು ಅವರು ದೃಢವಾಗಿ ನಂಬಿದ್ದರು. ಹಾಗಾಗಿ, ಚಿತ್ತಾಪುರದಲ್ಲಿದ್ದಾಗ, ಹತ್ತಿರದಲ್ಲಿ ಶಾಲೆಗಳಿಲ್ಲದಿದ್ದುದರಿಂದ ಏನು ಮಾಡುವುದೆಂಬ ಪ್ರಶ್ನೆ ದೊಡ್ಡದಾಗಿ ಎದುರು ನಿಂತಿತು. ಅದಕ್ಕೆ ಉತ್ತರವಾಗಿ ಹೊಸದಾಗಿ ಒಂದು ಶಾಲೆಯನ್ನೇ ತೆರೆಯುವ ನಿರ್ಧಾರ ಮಾಡಿದರು. ದಂಪತಿಗಳು. ಹೀಗೆ ಡಾ.ಸಬಿತಾರ ಉದಾತ್ತ, ದೂರಾಲೋಚನೆಯ ನಿರ್ಧಾರ, ಊರಿನಲ್ಲಿ ಶಾಲೆಯೊಂದು ತೆರೆಯುವಂತೆ ಮಾಡಿತು. ಹಿಂತಿರುಗಿ ನೋಡಿದಾಗ, ಅಂದಿನ ಆ ಗಟ್ಟಿ ನಿರ್ಧಾರ ಇಂದಿನ ಗಟ್ಟಿಯಾದ ಕಟ್ಟಡಕ್ಕೆ, ದೃಢವಾದ ಭವಿಷ್ಯಕ್ಕೆ ಗಟ್ಟಿ ಪಂಚಾಂಗವಾಯಿತೆಂಬುದನ್ನು ಯೋಚಿಸಿಯೇ ಮನಸ್ಸು ತುಂಬಿ ಬರುತ್ತದೆ ಡಾ. ಮರಕಿಣಿಯವರಿಗೆ.

ಕವಿಹೃದಯದ ಸಬಿತಾ ಮರಕಿಣಿ ಕತೆ-ಕವನ-ಕಾದಂಬರಿಗಳನ್ನು ಸಾಕಷ್ಟು ಬರೆದಿದ್ದರು. ಅವರ ಬರೆಹಗಳ ಚೀಟಿಗಳು ಮೇಜಿನ ಬಟ್ಟೆಯ ಅಡಿಯಲ್ಲಿ 'ಅಟ್ಟಿ'ಯಾಗಿ ಶೇಖರವಾಗಿದ್ದುದನ್ನು ತುಂಬ ತಡವಾಗಿ ಗಮನಿಸಿದ ಮಹಾಲಿಂಗಭಟ್ಟರು ನಿವೃತ್ತಿಯ ನಂತರ ಅವನ್ನೆಲ್ಲ ಪ್ರಕಟಿಸಲು ಪ್ರಯತ್ನಿಸಿದರು. 'ಸ್ವಚ್ಛಂದ ಕಾವ್ಯೋದ್ಯಾನದ ಪುಷ್ಪಗಳು'

ಎಂಬ ಆ ಕವನ ಸಂಕಲನದಲ್ಲಿ ಮನ ಮಿಡಿಯುವ ಹಲವು ಕವನಗಳಿವೆ. ಹವ್ಯಕ ಕಾದಂಬರಿ, ನಾಟಕ, ಕತೆಗಳು ಕೂಡಾ ಸಬಿತಾಗೆ ತುಂಬ ಜನಪ್ರಿಯತೆ ಮತ್ತು ಪ್ರಸಿದ್ಧಿಯನ್ನು ತಂದುಕೊಟ್ಟವು. ಸರಳ ವೈದ್ಯಕೀಯದ ಲೇಖನಗಳನ್ನಂತೂ ಡಾ. ಎಂ.ಬಿ., ಡಾ. ಸಬಿತಾ ಜಂಟಿಯಾಗಿಯೇ ಬರೆಯುತ್ತಿದ್ದರು.

ಸಂಗಾತಿ ಸಬಿತಾರಂತೆಯೇ ಬದುಕಿನಲ್ಲಿ ತನಗೆ ಬೆನ್ನೆಲುಬಾಗಿ ನಿಂತ ತಂದೆ ನಾರಾಯಣ ಭಟ್ಟರನ್ನೂ ಅಣ್ಣ ಈಶ್ವರ ಭಟ್ಟರನ್ನೂ ಸದಾ ಸ್ಮರಿಸಿಕೊಳ್ಳುತ್ತಾರೆ ಎಂ.ಬಿ. ಗುರಿಕ್ಕಾರ ನಾರಾಯಣಭಟ್ಟರು ಮಗನ ವೈದ್ಯಕೀಯ ವ್ಯಾಸಂಗಕ್ಕಾಗಿ, ಆ ಕಾಲದಲ್ಲಿ ತಮ್ಮಲ್ಲಿದ್ದ ಏಕೈಕ ಅಮೂಲ್ಯ ಸಂಪತ್ತಾದ ಚಿನ್ನದ ಉಂಗುರವನ್ನೇ ಅಡವಿಟ್ಟು ಹಣ ಸಂಗ್ರಹ ಮಾಡಿತಂದು ಕೊಟ್ಟರು. ಈಶ್ವರ ಭಟ್ಟ ಮರಕಿಣಿಯವರು ತಮ್ಮನ ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ತಮ್ಮ ಪ್ರತಿ ತಿಂಗಳ ಸಂಪಾದನೆಯಾದ ಹದಿನೈದು ರೂಪಾಯಿಗಳಲ್ಲಿ ಹತ್ತು ರೂಪಾಯಿಯನ್ನೂ ಕಳಿಸಿಬಿಡುತ್ತಿದ್ದ ಹಿರಿಯಣ್ಣ! ಅಡ್ಯನಡ್ಕದಲ್ಲಿ 'ಪಾದೆ ಆಸ್ಪತ್ರೆ'ಯನ್ನು ಪ್ರಾರಂಭದಲ್ಲಿ ಸಜ್ಜುಗೊಳಿಸಿಕೊಟ್ಟವರೂ ಕಂಪೌಂಡರ್ ಆಗಿ ಕೆಲಸಮಾಡಿ ಅನುಭವವಿದ್ದ ಈ ಈಶ್ವರ ಭಟ್ಟರೇ!

ಒಂದು ಘಟನೆಯನ್ನು ಡಾ. ಮರಕಿಣಿ ನೆನಪಿಸಿಕೊಳ್ಳುತ್ತಾರೆ. 'ಪಾದೆ ಆಸ್ಪತ್ರೆ'ಯ ಉದ್ಘಾಟನಾ ದಿನದಂದು ರಾತ್ರಿ ಬಾಗಿಲು ಹಾಕುವ ಸಂದರ್ಭದಲ್ಲಿ ಒಂದು ಜತೆ ಚಪ್ಪಲಿ ಹಾಗೂ ಒಂದು ಕೊಡೆ ಅಲ್ಲೇ ಬಾಕಿಯಿತ್ತು : ಅದು ಅಣ್ಣ ಐ.ಬಿ. ಯವರದ್ದು ಅಂತ ಗುರುತುಸಿಕ್ಕಿತು ಎಂ.ಬಿ.ಗೆ. ತಮ್ಮನ ಬಳಿ ಚಪ್ಪಲಿ–ಕೊಡೆಗಳು ಇಲ್ಲವೆಂಬುದನ್ನರಿತು ಉದ್ದೇಶಪೂರ್ವಕವಾಗಿಯೇ ಅವನ್ನು ಅಲ್ಲಿ ಬಿಟ್ಟು, ತಾವು ಬರಿಗಾಲಲ್ಲಿ, ಬಿರುಬಿಸಿಲಲ್ಲಿ ನಡೆದುಕೊಂಡು ಮನೆಗೆ ಹೋಗಿದ್ದರು ಈಶ್ವರ ಭಟ್ಟರು! ಈ ಘಟನೆಯನ್ನು ಇಂದಿಗೂ ನೆನಪಿಸಿಕೊಂಡು ಹಸಿಹಸಿಯಾಗಿ ಹೇಳುವಾಗ ಸ್ವತಃ ಕಣ್ಣುಗಳು ಹಸಿಯಾಗಿ ಹನಿಗೂಡುತ್ತವೆ ಡಾಕ್ಟ್ರಿಗೆ. "ಇತರರ ಬಗೆಗಿನ ಕಾಳಜಿ ಹೇಗಿರಬೇಕು, ಯಾಕಿರಬೇಕು? ಎಂಬುದನ್ನು ಅಣ್ಣನ ಈ ಒಂದು ಚರ್ಯೆಯಿಂದ ನಾನು ಕಲಿತೆ" ಎನ್ನುತ್ತಾರೆ ಅವರು.

ಸಾಹಿತ್ಯ ಜೀವಿ

ಸಾಹಿತ್ಯ ಡಾ.ಎಂ.ಬಿ. ಮರಕಿಣಿಯವರ ಸಾಧನೆಯ ಇನ್ನೊಂದು ಕ್ಷೇತ್ರ. ಸುಮಾರು ಮೂವತ್ತ ಐದು ಕೃತಿಗಳನ್ನು ಅವರು ಸಾರಸ್ವತ ಲೋಕಕ್ಕೆ ಸಮರ್ಪಿಸಿದ್ದಾರೆ. ಅವುಗಳಲ್ಲಿ ಹೆಚ್ಚಿನವು ವೈದ್ಯಕೀಯ ಮತ್ತು ಗ್ರಾಮಾಭಿವೃದ್ಧಿಗೆ ಪೂರಕವಾದ ಕೃತಿಗಳು. ಇನ್ನುಳಿದವು ಲಲಿತಪ್ರಬಂಧ ಮಾದರಿಯ ಅನುಭವ ಕಥನಗಳು. ಜತೆಯಲ್ಲಿ 'ಅಲೆಮಾರಿವೈದ್ಯನ ಆತ್ಮಕತೆ'.

ನನಗೆ ತುಂಬ ಇಷ್ಟವಾದದ್ದು ಅವರ ಆತ್ಮಕತೆ. ನನ್ನ ಪ್ರಕಾರ ಅವರ ಕೃತಿಗಳಲ್ಲಿ ಸಾಹಿತ್ಯಕವಾಗಿ ಅತ್ಯುತ್ತಮವಾದದ್ದು ಕೂಡ ಅದೇ.

ಗಾಜಿನ ಮನೆಯಲ್ಲಿ ಧನ್ವಂತರಿ, ಮೊಗಲಾಯರ ಮಧ್ಯೆ ಧನ್ವಂತರಿ, ತೆಲಂಗಾಣದಲ್ಲಿ ಧನ್ವಂತರಿ, ಬರಗಾಲದಲ್ಲಿ ಧನ್ವಂತರಿ–ಇವುಗಳು ವೈದ್ಯವೃತ್ತಿಯಲ್ಲಿನ ತಮ್ಮ ಅನುಭವಗಳ

ನ್ನೊಳಗೊಂಡ ಲಲಿತ ಪ್ರಬಂಧಗಳ ಸಂಕಲನಗಳು. ಹಾಸ್ಯವೆಂಬುದು ಡಾ. ಮರಕಿಣಿಯವರ ಜೀವನದ ಅವಿಭಾಜ್ಯ ಅಂಗ.

'ಧನ್ವಂತರಿ...' ಸರಣಿಯ ಎಲ್ಲ ಪುಸ್ತಕಗಳಲ್ಲೂ ಈ ರೀತಿಯ ಹಾಸ್ಯ ಪ್ರಸಂಗಗಳು ಮತ್ತು ಡಾ.ಮರಕಿಣಿಯವರ ವಿನೋದಭರಿತ ಶೈಲಿ ನಮ್ಮನ್ನು ನಗಿಸಿ ಹಗುರಾಗಿಸುತ್ತಾ ಸಾಗುತ್ತವೆ.

ವೈದ್ಯಕೀಯಕ್ಕೆ ಸಂಬಂಧಿಸಿದ ಕೃತಿಗಳಲ್ಲಿ 'ವಿಷಚಿಕಿತ್ಸೆ' ಒಂದು ಚೆಂದದ ಪುಸ್ತಕ. ವಿಷಪರಿವಾರ, ನಿತ್ಯ ಬಳಕೆಯ ವಿಷವಸ್ತುಗಳು, ವಿಷಜಂತುಗಳ ಸಂತಾನ, ಸಸ್ಯವಿಷ, ಅನ್ನಪಾನ ವಿಷ, ಪಾನ-ಪೇಯ ವಿಷ, ಕೃಷಿವಿಷ-ಹೀಗೆ ಏಳು ವಿಭಾಗಗಳಲ್ಲಿ ವಿಷಗಳ ಬಗ್ಗೆ ಸಂಪೂರ್ಣ ವಿವರ ನೀಡಿದ್ದಾರೆ. ವಿಷಸತ್ವಗಳು, ವಿಷಲಕ್ಷಣಗಳು, ಪ್ರಥಮೋಪಚಾರ, ಪ್ರತ್ಯೌಷಧ ಮತ್ತು ಚಿಕಿತ್ಸೆ-ಎಲ್ಲವನ್ನೂ ಹೇಳಿದ್ದಾರೆ. ಒಂದೊಂದರ ಬಗೆಗಿನ ಕಿರು ಶೀರ್ಷಿಕೆಗಳು ಗಮನ ಸೆಳೆಯುವಂತಿವೆ, ನೋಡಿ: "ಮೂಸಲು-ತಿನ್ನಲು ನಿಷಿದ್ಧ, ಜಿರ್ಲೆ ಓಡಿಸಲು ಪ್ರಸಿದ್ಧ-ನ್ಯಾಫ್ತಲೀನ್," "ಸೌಂದರ್ಯಕ್ಕೆ ಲೇಪಿಸಿರಿ; ಮುಕ್ಕಿದರೆ ದುಃಖಿಸುವಿರಿ-ಬೋರಿಕ್ ಪೌಡರ್", "ಕೃಷಿಮಿತ್ರ-ಜನ ಶತ್ರು:ಡಿ.ಡಿ.ಟಿ," "ಜಾಪಾಳ ಮಾತ್ರೆ-ವೈಕುಂಠ ಯಾತ್ರೆ; ಮಿತವರಿತು ಬಳಸಿದರೆ ಹಿತ ದೇಹಕ್ಕೆ", "ಬಂಗಾರ ಬಣ್ಣದ ಸುವಾಸನೆಯ ಹೂವು, ಬೀಜವ ತಿಂದರೆ ನೋವೇ ನೋವು : ಕರವೀರ", "ಹೂ ಪೂಜೆಗೆ ಸಲ್ಲ, ಬೀಜ ತಿನ್ನಲು ಹೊಲ್ಲ-ದತ್ತೂರ ಬೀಜ"...ಹೀಗೆ! ಛಾಯಾಚಿತ್ರಗಳು, ರೇಖಾಚಿತ್ರಗಳು ಸುಸ್ಪಷ್ಟವಾಗಿದ್ದು ಆ ಮೂಲಕ ಸಮರ್ಪಕವಾಗಿ ವಿಷಗಳ ವಿಷಯಗಳನ್ನು ವಿಷದಪಡಿಸಿದ್ದಾರೆ.

'ರೂಪರಾಶಿಗಳ ಸಂತೆ ಮತ್ತು ಇತರ ಪ್ರಬಂಧಗಳು' ಪುಸ್ತಕ ಒಂದು ರೀತಿಯಲ್ಲಿ ಅವರ ಬರೆಹಗಳ ಸಮಗ್ರ ಸಂಕಲನದಂತಿದ್ದು ವೈದ್ಯಕೀಯ ಲೇಖನಗಳು, ವ್ಯಕ್ತಿಚಿತ್ರಗಳು, ವೈಚಾರಿಕ ಲೇಖನಗಳನ್ನು ಒಳಗೊಂಡಿದೆ. 'ಕರಾವಳಿಯ ವನೌಷಧಿಗಳು' ಎನ್ನುವ ಕೃತಿ, ಗಿಡ ಮೂಲಿಕೆಗಳನ್ನು ಬಳಸಿಕೊಂಡು ಸುಲಭದಲ್ಲಿ ತಯಾರಿಸಬಹುದಾದ ಔಷಧಿಗಳ ಬಗ್ಗೆ ತಿಳಿಸಿಕೊಡುತ್ತದೆ. 'ಆರೋಗ್ಯರಕ್ಷಣೆ' ಎಂಬ ಪುಸ್ತಕದಲ್ಲಿ ಲಸಿಕೆಗಳಿಂದ ತಡೆಗಟ್ಟಬಹುದಾದ ರೋಗಗಳ ಬಗ್ಗೆ ಬರೆಯುತ್ತಾ ಒಂದೊಂದರ ಪ್ರಾಮುಖ್ಯವನ್ನೂ ಒಂದೊಂದು ಕತೆಯ ಮೂಲಕ ವಿವರಿಸುತ್ತಾರೆ. ಗಂಟಲು ಮಾರಿ (ಡಿಫ್ತೀರಿಯಾ), ನಾಯಿಕೆಮ್ಮು (ಪರ್ಟುಸಿಸ್), ಧನುರ್ವಾಯು (ಟೆಟನಸ್), ಪೋಲಿಯೋ, ಬಾಲಕ್ಷಯ (ಟ್ಯುಬರ್‌ಕ್ಯುಲೋಸಿಸ್), ದಡಾರ(ಮೀಸಲ್ಸ್)-ಈ ಆರು ಮಾರಕ ರೋಗಗಳ ವಿರುದ್ಧ ರಕ್ಷಾಕವಚವಾಗಿ ಒದಗುವ ಲಸಿಕೆಗಳ ಕುರಿತು ಡಾ.ಮರಕಿಣಿ ಪರಿಣಾಮಕಾರಿಯಾಗಿ ಬರೆಯುತ್ತಾರೆ.

ಡಾ.ಸಬಿತಾರೊಂದಿಗೆ ರಚಿಸಿದ ಜಂತು ಹುಳಗಳು, ತುರಿಸುವಕಜ್ಜಿ, ನಾವು ಕುಡಿಯುವ ನೀರು, ನೈರ್ಮಲ್ಯ ರಕ್ಷಣೆ, ಮಕ್ಕಳಿಗೆ ಮಾರಕ ಅತಿಸಾರ ಭೇದಿ, ಮದ್ದಿಲ್ಲದ ರೋಗ ಏಡ್ಸ್-ಮೊದಲಾದ ಪುಟ್ಟಪುಟ್ಟ ಪುಸ್ತಕಗಳು ಸುಲಭ-ಸರಳ ಆರೋಗ್ಯ ಮಾಹಿತಿಗಳ ಕೈಪಿಡಿಗಳಾಗಿವೆ. ನವಸಾಕ್ಷರರಿಗಾಗಿಯೂ ಅವರು ಇಂಥದೇ ಕೃತಿಗಳನ್ನು ಬರೆದಿದ್ದಾರೆ.

ಸಂಪಾದಕನಾಗಿ ಡಾ.ಮರಕಿಣಿ ಹೆಸರು ಮಾಡಿದ್ದು 'ಮುಂಗಾರು ಮುಗಿಲು' ಕಥಾ ಸಂಕಲನದ ಮೂಲಕ. ೧೯೫೩ರಲ್ಲಿ ದಕ್ಷಿಣಕನ್ನಡದ ಹನ್ನೆರಡು ಮಂದಿ ಉದಯೋನ್ಮುಖ ಕತೆಗಾರರ ಕತೆಗಳನ್ನು ಸಂಕಲಿಸಿ, ಶಂ.ಪಾ.ದೈತೋಟ ಜತೆ ಸೇರಿ ಈ ಹೊತ್ತಗೆಯನ್ನು ಹೊರತಂದರು. ಅ.ನ. ಕೃಷ್ಣರಾಯರ ಮುನ್ನುಡಿಯ ಕಲಶವನ್ನು ಹೊತ್ತು ಬಂದಿತದು. ಆಗ ತುಂಬ ಜನಪ್ರಿಯವಾದ ಆ ಕೃತಿ ೨೦೧೩ರಲ್ಲಿ ಸಂಭ್ರಮದ ಎರಡನೆಯ ಮುದ್ರಣವನ್ನು ಕಂಡಿತು.

ಜ್ಞಾನಪೀಠ ಪ್ರಶಸ್ತಿ ವಿಜೇತ ಶಿವರಾಮ ಕಾರಂತರು ನಡೆಸುತ್ತಿದ್ದು ನಂತರ ನಿಂತು ಹೋಗಿದ್ದ 'ವಿಚಾರವಾಣಿ' ಪತ್ರಿಕೆಯನ್ನು ಹತ್ತು ವರ್ಷಗಳ ಬಳಿಕ ಪುನರಾರಂಭಿಸಿದಾಗ ಸಂಪಾದಕ–ಪ್ರಕಾಶಕರಾಗಿ ನೇಮಕಗೊಂಡರು ಡಾ.ಎಂ.ಬಿ.ಮರಕಿಣಿ. ಅಡ್ಯನಡ್ಕದಲ್ಲಿ ಕ್ಲಿನಿಕ್ ನಡೆಸುತ್ತಿದ್ದ ಕಾಲದಲ್ಲಿಯೇ ಈ ಜವಾಬ್ದಾರಿಯನ್ನು ನಿಭಾಯಿಸಿದರು ಅವರು. ವಾರಕ್ಕೆ ಎರಡು–ಮೂರು ಬಾರಿ ಪುತ್ತೂರಿಗೆ ಹೋಗಿ ಪ್ರೆಸ್ ಮತ್ತು ಪತ್ರಿಕೆಯ ಕೆಲಸ ಕಾರ್ಯಗಳ ಉಸ್ತುವಾರಿ ನಿಭಾಯಿಸುತ್ತಿದ್ದರು. ಪಾರ್ಪಕಜೆ ಈಶ್ವರ ಭಟ್ಟ, ಖ್ಯಾತ ವ್ಯಂಗ್ಯ ಚಿತ್ರಕಾರ ಪ.ಗೋ., ಕ್ಯಾಂಪ್ಕೋ ಸ್ಥಾಪಕಾಧ್ಯಕ್ಷ ವಾರಣಾಶಿ ಸುಬ್ರಾಯಭಟ್ಟ, ಶಂ.ಪಾ. ದೈತೋಟ–ಮುಂತಾದ ಗೆಳೆಯರ ಜತೆಯಲ್ಲಿ ಕೆಲವು ಕಾಲ(೧೯೫೯–೬೦) ಉತ್ತಮ ಗುಣಮಟ್ಟದ 'ವಿಚಾರವಾಣಿ'ಯನ್ನು ಹೊರತಂದರು. ಕೊನೆಗೆ ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳುವಾಗ ತಮ್ಮೆಲ್ಲ ಜವಾಬ್ದಾರಿಗಳನ್ನು ಶಂ.ಪಾ. ಹೆಗಲಿಗೆ ವರ್ಗಾಯಿಸಿದರು.

'ಪುತ್ತೂರು ಜನಪ್ರಿಯ ಸಾಹಿತ್ಯಮಾಲೆ'ಯ ಪ್ರಕಾಶಕರಾಗಿ ಡಾ. ಮರಕಿಣಿ, ಕವಿ ಗೋಪಾಲಕೃಷ್ಣ ಅಡಿಗರ ಪ್ರಸಿದ್ಧ ಕವನ ಸಂಕಲನ 'ಚಂಡೆಮದ್ದಳೆ'ಗೆ ಬೆಳಕು ಕಾಣಿಸಿದರು. ಅಂತೆಯೇ ಯರ್ಮುಂಜ ರಾಮಚಂದ್ರರ 'ಬಿದ್ದಗರಿ' ಕವನ ಸಂಕಲನಕ್ಕೂ 'ಮೈಸೂರು ಕನ್ನಡ ಪ್ರಕಾಶನ'ದ ಹೆಸರಿನಲ್ಲಿ ಪ್ರಕಾಶಕನಾಗಿ ಒದಗಿದವರು ಮರಕಿಣಿಯವರೇ ಎಂಬುದು ಗಮನಾರ್ಹ.

ಹಿಂತಿರುಗಿದರೆ... ಇಂತೆನಿಸುತ್ತದೆ...

"ಎಂಭತ್ತೈದು ವರ್ಷಗಳ ತುಂಬು ಬದುಕನ್ನೊಮ್ಮೆ ಹಿಂತಿರುಗಿ ನೋಡುವಾಗ ಏನನ್ನಿಸುತ್ತದೆ?" ಎಂಬ ಪ್ರಶ್ನೆಗೆ ಡಾಕ್ಟ್ರ ಉತ್ತರ ಹೀಗೆ: "ಇನ್ನಷ್ಟು ಚಂದವಾಗಿ ಬದುಕಬಹುದಿತ್ತು... ಅಂದರೆ, ಇನ್ನಷ್ಟು ಪರಿಣಾಮಕಾರಿಯಾಗಿ ಗ್ರಾಮೀಣಜನರಿಗೆ ವೈದ್ಯಕೀಯ ಸೇವೆಯನ್ನು ತಲಪಿಸುವ ಕೆಲಸವನ್ನು ಮಾಡಬಹುದಿತ್ತು."

ಮಗಳು ಗೌರಿಯ ಹಿರಿಯ ಮಗ ಅಮೋಘವರ್ಷ ನ್ಯೂಯಾರ್ಕ್ ಮೆಡಿಕಲ್ ಇನ್ಸ್‌ಟಿಟ್ಯೂಟ್‌ನಲ್ಲಿ ಎಂ.ಡಿ. ವೈದ್ಯಕೀಯ ವ್ಯಾಸಂಗ ನಡೆಸುತ್ತಿದ್ದರೆ, ಕಿರಿಯ ಮಗ ಅಪೂರ್ವವರ್ಷ ಎಂ.ಬಿ.ಎ. ಓದುತ್ತಿದ್ದಾನೆ. ಮಗ ನಾರಾಯಣಭಟ್ಟರ ಮಗಳು ಹಿಮಾ ಎಂ.ಬಿ.ಬಿ.ಎಸ್. ಮುಗಿಸಿ ಮುಂದಿನ ವಿದ್ಯಾಭ್ಯಾಸದ ತಯಾರಿಯಲ್ಲಿದ್ದರೆ ಮಗ ಆದಿತ್ಯ ಪಿ.ಯು.ಸಿ. ತರಗತಿಯಲ್ಲಿದ್ದಾನೆ. "ಒಬ್ಬ ಒಳ್ಳೆಯ ಬರಹಗಾರ, ಮಾತುಗಾರ ಮತ್ತು ಸಂಘಟಕ" ಎಂಬುದಾಗಿ ಮಗ ನಾರಾಯಣಭಟ್ಟರ ಬಗೆಗೆ ಹೆಮ್ಮೆಯಿಂದ ಹೇಳುವಾಗ

ಮರಕಿಣಿ ಕಣ್ಣುಗಳು ಮಿನುಗುತ್ತವೆ. ಆಕಾಶವಾಣಿಯ ಕೃಷಿರಂಗ-ಯುವವಾಣಿ ವಿಭಾಗಗಳಲ್ಲಿ ಕಾರ್ಯಕ್ರಮ ನಿರ್ವಾಹಕನಾಗಿ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಸಭೆಗಳನ್ನು ನಡೆಸಿ ಸತತ ಮೂರು ವರ್ಷ ಯುನಿಸೆಫ್ ಸಂಸ್ಥೆಯ ಪ್ರಶಸ್ತಿಗೆ ಭಾಜನರಾಗಿರುವ ನಾರಾಯಣ ಭಟ್ಟರು ವಿಜ್ಞಾನ ವಿಷಯದ ಪುಸ್ತಕ ರಚನೆಗಾಗಿ ವ್ಯಾಪಕ ಮೆಚ್ಚುಗೆ ಗಳಿಸಿದವರು.

❇❇❇

ಅನುಬಂಧ

ಡಾ. ಎಂ.ಬಿ. ಮರಕಿಣಿ : ಪ್ರಕಟಿತ ಕೃತಿಗಳು

ವೈದ್ಯಕೀಯ, ಆರೋಗ್ಯರಕ್ಷಣೆ, ವಿಷವೈದ್ಯಶಾಸ್ತ್ರ, ವಿಷ ಚಿಕಿತ್ಸೆ, ಅಡುಗೆ ಮನೆಯ ಔಷಧಿಗಳು, ಕರಾವಳಿಯ ವನೌಷಧಿಗಳು

ಹಾಸ್ಯ-ವಿಡಂಬನೆ

ಗಾಜಿನ ಮನೆಯಲ್ಲಿ ಧನ್ವಂತರಿ, ಮೊಗ್ಲಾಯರ ಮಧ್ಯೆ ಧನ್ವಂತರಿ, ಬರಗಾಲದಲ್ಲಿ ಧನ್ವಂತರಿ, ತೆಲಂಗಾಣದಲ್ಲಿ ಧನ್ವಂತರಿ, ರೂಪರಾಶಿಗಳ ಸಂತೆ

ಇತರ ಕೃತಿಗಳು

ನೂರುಘಟನೆ ಸಾವಿರ ನೆನಪುಗಳು, ಬರಗಾಲದ ಅಗ್ನಿಕುಂಡ ಮತ್ತು ಇತರ ಬರಹಗಳು, ಆಧುನಿಕ ಮನೋವಿಜ್ಞಾನ

ಸಂಪಾದಿತ

ಮುಂಗಾರು ಮುಗಿಲು (ಕತಾ ಸಂಕಲನ), ದಕ್ಷಿಣಕನ್ನಡದ ಜನಪದ ಗೀತೆಗಳು (ಹವ್ಯಕರ ಹಾಡುಗಳು), ಪ.ಗೋ.ಸಂಸ್ಮರಣೆ, ಬಿದ್ದದ್ದು ಗರಿಯಲ್ಲ ಹಕ್ಕಿಯೇ

ನವಸಾಕ್ಷರರಿಗಾಗಿ

ಆರೋಗ್ಯ ಭಾಗ್ಯ, ಮಕ್ಕಳ ರಕ್ಷಾಕವಚ, ಮನೆ ಮದ್ದುಗಳು, ಗ್ರಾಮಪಂಚಾಯತಿ ಶಾಸನ ಪರಿಚಯ

ಡಾ. ಸಬಿತಾರೊಂದಿಗೆ

ಆರೋಗ್ಯರಕ್ಷಣೆ, ಚುಚ್ಚುಮದ್ದಿನ ರಕ್ಷಾಕವಚ, ಜಂತುಹುಳುಗಳು, ತುರಿಸುವ ಕಜ್ಜಿ, ನಾವು ಕುಡಿಯುವ ನೀರು, ನಿತ್ಯ ಬಳಕೆಯ ವಿಷ ವಸ್ತುಗಳು, ನೈರ್ಮಲ್ಯ ರಕ್ಷಣೆ, ಮಕ್ಕಳಿಗೆ ಮಾರಕ ಅತಿಸಾರಭೇದಿ, ಮದ್ದಿಲದ ರೋಗ ಏಡ್ಸ್, ಮಸಾಲೆ ಮದ್ದು, ಸುಲಭ ಚಿಕಿತ್ಸೆ, ಸುಲಭ ಚಿಕಿತ್ಸೆಯ ಮನೆಮದ್ದು

❖❖❖

'ನಾಡಿಗೆ ನಮಸ್ಕಾರ' ಗ್ರಂಥ ಸರಣಿ

೧. ಪದ್ಮಭೂಷಣ ಡಾ. ವೀರೇಂದ್ರ ಹೆಗ್ಗಡೆಯವರು (ಲೇ:ಡಾ.ಬಿ.ಪಿ. ಸಂಪತ್‌ಕುಮಾರ್, ಉಜಿರೆ); ೨. ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ (ಲೇ: ಬೆಳಗೋಡು ರಮೇಶ ಭಟ್); ೩. ಸಂಶೋಧಕ ಮಹೋಪಾಧ್ಯಾಯ ಡಾ. ಉಳಿಯಾರು ಪದ್ಮನಾಭ ಉಪಾಧ್ಯಾಯ (ಲೇ: ಎಸ್.ಆರ್. ಅರುಣಕುಮಾರ್); ೪. ಹಿರಿಯ ಸಾಹಿತಿ ಜನಾರ್ದನ ಗುರ್ಕಾರ್ (ಲೇ:ಡಾ.ಬಿ.ಜನಾರ್ದನ ಭಟ್); ೫. ಮಹಾಕವಿ ಮಂದಾರ ಕೇಶವಭಟ್ಟ (ಲೇ:ಡಾ. ನಿಕೇತನ); ೬. ಮೃಗಯಾ ಸಾಹಿತಿ ಕೆದಂಬಾಡಿ ಜತ್ತಪ್ಪ ರೈ (ಲೇ: ವಿ.ಗ. ನಾಯಕ); ೭. ಅಭಿನವ ಧನ್ವಂತರಿ ಡಾ. ಮುಳಿಯ ಗೋಪಾಲಕೃಷ್ಣ ರಾಯರು (ಲೇ: ಜನಾರ್ದನ ಗುರ್ಕಾರ್); ೮. ರಂಗಕರ್ಮಿ ಸದಾನಂದ ಸುವರ್ಣ (ಲೇ: ಡಾ. ಸೀತಾಲಕ್ಷ್ಮೀ ಕರ್ಕಿಕೋಡಿ); ೯. ಸಸ್ಯವಿಜ್ಞಾನಿ ಡಾ. ಪಳ್ಳತ್ತಡ್ಕ ಕೇಶವ ಭಟ್ಟ (ಲೇ: ಡಾ. ವಸಂತಕುಮಾರ ಪೆರ್ಲ); ೧೦. ಕರ್ನಾಟಕದ ಹಾನಿಮನ್ ಡಾ. ಕೆ. ವಸಂತಕುಮಾರ್ ರಾವ್, (ಲೇ: ಡಾ.ವಿಶ್ವೇಶ್ವರ ವಿ.ಕೆ.); ೧೧. ಸಮಾಜಸೇವೆಗೆ ಪರ್ಯಾಯ ಹೆಸರು ಧರ್ಮದರ್ಶಿ ಹರಿಕೃಷ್ಣ ಪುನರೂರು (ಲೇ: ಜಯರಾಮ ಕಾರಂತ, ಕಾಂತಾವರ); ೧೨. ಪತ್ರಕರ್ತರ ಆಚಾರ್ಯ ಪಾಡಿಗಾರು ವೆಂಕಟ್ರಮಣ ಆಚಾರ್ಯ (ಲೇ: ಡಾ. ಶ್ರೀನಿವಾಸ ಹಾವನೂರ); ೧೩. ಹಿರಿಯ ಜಾನಪದ ವಿದ್ವಾಂಸ ಡಾ. ಅಮೃತ ಸೋಮೇಶ್ವರ (ಲೇ: ಡಾ.ನಾ. ದಾಮೋದರ ಶೆಟ್ಟಿ); ೧೪. ತುಳು ಭಾಷಾ ಸಾಹಿತ್ಯದ ರನ್ನ ದರ್ಬೆ ಕೃಷ್ಣಾನಂದ ಚೌಟ (ಲೇ: ಡಾ. ವಾಮನ ನಂದಾವರ); ೧೫. ನೈತಿಕ ಶಿಕ್ಷಣದ ಚಿಂತಕ ಉ.ಕ. ಸುಬ್ಬರಾಯಾಚಾರ್ಯ (ಲೇ: ಬೈಕಾಡಿ ಜನಾರ್ದನ ಆಚಾರ್); ೧೬. ಪುಸ್ತಕ ಪ್ರೀತಿಗೆ ರೂಪಕ ಬೋಳಂತಕೋಡಿ ಈಶ್ವರ ಭಟ್ಟ (ಲೇ: ಪ್ರೊ. ವಿ.ಬಿ. ಅರ್ತಿಕಜೆ); ೧೭. ಮಿಂಚುವ ಮಾತಿನ ಯಕ್ಷ ಕುಂಬಳೆ ಸುಂದರ ರಾವ್ (ಲೇ: ಗಣರಾಜ ಕುಂಬ್ಳೆ); ೧೮. ಒಂದಾಣೆ ಮಾಲೆಯ ಸಾಹಸಿ ಕುಡ್ವಿ ವಾಸುದೇವ ಶೆಣೈ (ಲೇ: ಡಾ. ಸಬಿಹಾ ಭೂಮಿಗೌಡ); ೧೯. ಮಕ್ಕಳ ಸಾಹಿತ್ಯದ ಹಿರಿಯ ಪಳಕಳ ಸೀತಾರಾಮ ಭಟ್ಟ (ಲೇ: ನೆಂಪು ನರಸಿಂಹ ಭಟ್ಟ); ೨೦.ಬಹುಮುಖ ಪ್ರತಿಭಾಸಂಪನ್ನ ಡಾ.ಎಂ.ಮೋಹನ ಆಳ್ವ (ಲೇ: ಡಾ. ನರೇಂದ್ರ ರೈ ದೇರ್ಲ), ೨೧. ಕಾರಂತರ ಕನ್ನಡ ದೀಕ್ಷಾ ಗುರು ಐರೋಡಿ ಶಿವರಾಮಯ್ಯ (ಲೇ:ಎ.ಮಾಧವ ಉಡುಪ); ೨೨.ಕರ್ನಾಟಕ ಏಕೀಕರಣದ ನೇತಾರ ಕೆ.ಬಿ.ಜಿನರಾಜ ಹೆಗ್ಡೆ (ಲೇ:ಬಿ.ಸೀತಾರಾಮ ಭಟ್); ೨೩.ಹಿರಿಯ ಸಹಕಾರಿ ಮೊಳಹಳ್ಳಿ ಶಿವರಾಯ (ಲೇ: ಡಾ. ಗಣನಾಥ ಎಕ್ಕಾರು); ೨೪. ಬೆಳಕಿನ ಬೀಜ ಪಾಂಡೇಶ್ವರ ಗಣಪತಿ ರಾವ್ (ಲೇ:ಡಾ.ಬೇ.ಸೀ. ಗೋಪಾಲಕೃಷ್ಣ); ೨೫. ಹಿರಿಯ ಕವಿ ಅ.ಗೌ.ಕಿನ್ನಿಗೋಳಿ (ಲೇ:ಡಾ.ಕೆ.ಚಿನ್ನಪ್ಪ ಗೌಡ); ೨೬. ಸಂಗೀತ ವಿದ್ವಾಂಸ ಚಕ್ರಕೋಡಿ ನಾರಾಯಣಶಾಸ್ತ್ರಿ (ಲೇ:ಡಾ.ಎಸ್.ಆರ್.ವಿಘ್ನರಾಜ); ೨೭.ಸಾಂಸ್ಕೃತಿಕ ರಾಯಭಾರಿ ಕು.ಶಿ. ಹರಿದಾಸಭಟ್ಟ (ಲೇ:ಡಾ.ಎನ್.ಟಿ.ಭಟ್); ೨೮.ಬಹುಮುಖಿ ಸಾಹಿತಿ ವಿಶುಕುಮಾರ್ (ಲೇ:ಅರವಿಂದ ಕರ್ಕಿಕೋಡಿ); ೨೯.ಜನರ ನಡುವಿನ ನ್ಯಾಯಾಧೀಶ ಡಾ.ಶಂಕರ ಖಂಡೇರಿ (ಲೇ:ಎಸ್.ಜಿ. ಕೃಷ್ಣ); ೩೦. ಸಮಾಜಮುಖಿ ಸಂಶೋಧಕಿ ಡಾ. ಸುಶೀಲಾ ಪದ್ಮನಾಭ ಉಪಾಧ್ಯಾಯ (ಲೇ: ಎಂ.ಜಾನಕಿ ಬ್ರಹ್ಮಾವರ); ೩೧. ಸಾಂಸ್ಕೃತಿಕ ಚಿಂತಕ ಕೆ.ಎಸ್.ಎನ್. ಅಡಿಗ (ಲೇ: ಶ್ರೀನಿವಾಸ ದೇಶಪಾಂಡೆ); ೩೨. ಸಮಾಜಮುಖಿ ಯೋಜಕ ಕೆ.ಕೆ.ಪೈ (ಲೇ:ಕೆ.ಶಾರದಾ ಭಟ್); ೩೩. ರಾಜನೀತಿಯ ಅಪರಂಜಿ ಡಾ. ಎ. ಸುಬ್ಬರಾವ್ (ಲೇ: ಅಡ್ಡೂರು ಕೃಷ್ಣರಾವ್); ೩೪. ಕನ್ನಡ ಸೇನಾನಿ ಪಿ.ಕೆ. ನಾರಾಯಣ (ಲೇ: ಡಾ. ವರದಾ ಶ್ರೀನಿವಾಸ್); ೩೫. ಮೌಲ್ಯಾಧಾರಿತ ರಾಜಕಾರಣಿ ಉಳ್ಳಾಲ ಶ್ರೀನಿವಾಸ ಮಲ್ಯ (ಲೇ: ಬಸ್ತಿ ವಾಮನ ಶೆಣೈ); ೩೬. ವರ್ಣಚಿತ್ರ ಕಲಾವಿದ ಪಾವಂಜೆ ಗೋಪಾಲಕೃಷ್ಣಯ್ಯ (ಲೇ: ಶ್ರೀಮತಿ ಬಿ.ಎಂ. ರೋಹಿಣಿ); ೩೭. ಕನ್ನಡದ ಕಟ್ಟಾಳು ಬಿ.ಎಂ.ಇದಿನಬ್ಬ (ಲೇ: ವಿ.ಗ. ನಾಯಕ); ೩೮. ದೂರಸಂಪರ್ಕವನ್ನು ಸಮೀಪವಾಗಿಸಿದ ಅಧಿಕಾರಿ ಕಜಂಪಾಡಿ ರಾಮ (ಲೇ: ಧನಂಜಯ ಕುಂಬ್ಳೆ); ೩೯. ಹಿರಿಯ ಸಾಹಿತಿ ಫ್ರಾನ್ಸಿಸ್ ದಾಂತಿ (ಲೇ: ಸುಮುಖಾನಂದ ಜಲವಳ್ಳಿ); ೪೦. ಜಾನಪದ ವಿದ್ವಾಂಸ ಬನ್ನಂಜೆ ಬಾಬು ಅಮೀನ್ (ಲೇ: ಡಾ. ಗಣನಾಥ ಎಕ್ಕಾರು); ೪೧. ಅನಂತಮುಖದ ಚೈತನ್ಯ ಟಿ.ಎ. ಪೈ (ಲೇ: ಕೆ.ಎಂ. ಉಡುಪ, ಮಣಿಪಾಲ); ೪೨. ನ್ಯಾಯ ನಿಷ್ಠುರದ ನ್ಯಾಯಾಧೀಶ ಕೆ.ಎಸ್. ಹೆಗ್ಡೆ (ಲೇ: ಶ್ರೀ ಮುದ್ರಾಡಿ, ನಿಟ್ಟೆ); ೪೩. ಗ್ರಾಮ ಸಬಲೀಕರಣ ಹರಿಕಾರ ಕೆ.ಎಂ. ಉಡುಪ (ಲೇ: ಬೆಳಗೋಡು ರಮೇಶ ಭಟ್ಟ,ಚೆನ್ನೈ); ೪೪. ನಿಷ್ಠುರ ವಿದ್ವಾಂಸ ತೆಕ್ಕುಂಜ ಗೋಪಾಲಕೃಷ್ಣ ಭಟ್ಟ (ಲೇ: ನಂದಳಿಕೆ ಬಾಲಚಂದ್ರ ರಾವ್); ೪೫. ಚೇರ್ಕಾಡಿಯ ಗಾಂಧಿ ರಾಮಚಂದ್ರ ರಾವ್ ಚೇರ್ಕಾಡಿ(ಲೇ:ಆರೂರು ಮಂಜುನಾಥ ರಾವ್); ೪೬. ಕೃಷಿಋಷಿ ಡಾ.ಎಲ್.ಸಿ. ಸೋನ್ಸ್ (ಲೇ: ಶೇಖರ ಅಜೆಕಾರ್); ೪೭. ದಾಸರ ದಾಸ ಭದ್ರಗಿರಿ ಅಚ್ಯುತದಾಸ (ಲೇ: ಡಾ. ಕಬ್ಬಿನಾಲೆ

ವಸಂತಭಾರದ್ವಾಜ್); ೪೮. ಕೊಡಗನ್ನು ಉಳಿಸಿದ ಕಲಾವಿದ ಎಸ್.ಎಸ್.ದೇವಿಪ್ರಸಾದ್ ಸಂಪಾಜೆ (ಲೇ:ಪ್ರೊ. ಪ್ರಭಾಕರ ಶಿಶಿಲ); ೪೯. ಸ್ತ್ರೀಪರ ಚಿಂತಕಿ ಪಂಡಿತ ರಮಾ ಬಾಯಿ ಸರಸ್ವತಿ (ಲೇ: ಸೀತಾ ಬಾಪಟ್); ೫೦. ಚಂದಮಾಮದ ನವಗಿರಿನಂದ (ಲೇ: ಶೇಷನಾರಾಯಣ); ೫೧. ಕಡಲ ತಡಿಯ ಭಾರ್ಗವ ಕೋಟ ಶಿವರಾಮ ಕಾರಂತ (ಲೇ:ಕೋಣಿ ಶಿವಾನಂದ ಕಾರಂತ); ೫೨.ನಾಡೋಜ ಮುಳಿಯ ತಿಮ್ಮಪ್ಪಯ್ಯ (ಲೇ:ಮುಳಿಯ ರಾಘವಯ್ಯ); ೫೩.ಮಣಿಪಾಲದ ರೂವಾರಿ ಡಾ. ಟಿ.ಎಂ.ಎ.ಪೈ (ಲೇ:ಡಾ.ಮಹಾಬಲೇಶ್ವರ ರಾವ್); ೫೪. ಅಭಿವೃದ್ಧಿಯ ಹರಿಕಾರ ಟಿ. ಉಪೇಂದ್ರ ಪೈ (ಲೇ: ಅಂಶುಮಾಲಿ); ೫೫. ನವೋದಯದ ರಾಜಹಂಸ ಸಾಂತ್ಯಾರು ವೆಂಕಟರಾಜ (ಲೇ: ಡಾ. ಬಿ. ಜನಾರ್ದನ ಭಟ್); ೫೬. ಅನನ್ಯ ಶಿಕ್ಷಣತಜ್ಞ ಡಾ. ಎಚ್. ಶಾಂತಾ ರಾವ್ (ಲೇ:ಜೆ.ಪಿ.ರಾವ್, ಉಡುಪಿ; ೫೭.ಯಕ್ಷಗಂಧರ್ವ ಹಾರಾಡಿ ರಾಮ ಗಾಣಿಗ(ಲೇ:ಕಂದಾವರ ರಘುರಾಮ ಶೆಟ್ಟಿ); ೫೮.ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಅಮ್ಮೆಂಬಳ ಬಾಳಪ್ಪ (ಲೇ:ಡಾ.ದುಗ್ಗಪ್ಪ ಕಜೆಕಾರ್); ೫೯. ಶಿಲ್ಪಕಲಾ ಕೋವಿದ ಕೆ. ಶ್ಯಾಮರಾಯ ಆಚಾರ್ಯ(ಲೇ: ಪ್ರೊ. ಪ್ರಭಾಕರ ಆಚಾರ್ಯ); ೬೦. ಅಪರೂಪದ ಸಮಾಜಸೇವಕ ಹರೇಕಳ ಹಾಜಬ್ಬ (ಲೇ:ಇಸ್ಮತ್ ಪಜೀರ್); ೬೧. ರಾಷ್ಟ್ರಕವಿ ಎಂ. ಗೋವಿಂದ ಪೈ (ಲೇ: ವಿ.ಗ. ನಾಯಕ);೬೨. ಹೋರಾಟಗಾರ್ತಿ ಕಮಲಾದೇವಿ ಚಟ್ಟೋಪಾಧ್ಯಾಯ (ಲೇ:ಡಾ. ಸೀತಾಲಕ್ಷ್ಮೀ ಕರ್ಕಿಕೋಡಿ); ೬೩. ತ್ಯಾಗಜೀವಿ ಕಾರ್ನಾಡು ಸದಾಶಿವ ರಾವ್ (ಲೇ: ಯಶೋಧರ್ ಪಿ. ಕರ್ಕೇರ); ೬೪. ನವೋದಯದ ಕೋಗಿಲೆ ಕಡೆಂಗೋಡ್ಲು ಶಂಕರ ಭಟ್ಟ (ಲೇ: ಪ್ರೊ. ಎ.ವಿ.ನಾವಡ); ೬೫. ಸವಿಗನ್ನಡದ ಗಾರುಡಿಗ ಕೊಳಂಬೆ ಪುಟ್ಟಣ ಗೌಡ (ಲೇ: ಶೀಲಾವತಿ ಕೊಳಂಬೆ); ೬೬. ನಿಘಂಟುತಜ್ಞ ಪ್ರೊ. ಮುಂಗ್ಲಿಮನೆ ಮರಿಯಪ್ಪ ಭಟ್ಟ (ಲೇ: ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ); ೬೭. ಐಕ್ಯಗಾನದ ನಾಡೋಜ ಕಯ್ಯಾರ ಕಿಞ್ಞಣ್ಣ ರೈ (ಲೇ: ಡಾ. ನರೇಂದ್ರ ರೈ ದೇರ್ಲ); ೬೮. ನವ್ಯ ಕಾವ್ಯದ ಪ್ರವರ್ತಕ ಮುಗೇರಿ ಗೋಪಾಲಕೃಷ್ಣ ಅಡಿಗ (ಲೇ:ಬಿ.ವಿ.ಕೆದಿಲಾಯ); ೬೯. ದೇಶಭಕ್ತ ಎನ್.ಎಸ್.ಕಿಲ್ಲೆ (ಲೇ:ಎನ್.ಪಿ.ಶೆಟ್ಟಿ); ೭೦.'ಶಿಂಗಣ್ಣಾ' ಖ್ಯಾತಿಯ ಕೆ. ರಾಮಕೃಷ್ಣ (ಲೇ: ಮನೋರಮಾ ಎಂ. ಭಟ್); ೭೧. ಸಾಹಿತ್ಯೋಪಾಸಕ ಬೈಕಾಡಿ ವೆಂಕಟಕೃಷ್ಣ ರಾವ್ (ಲೇ: ಡಾ.ಮಹಾಬಲೇಶ್ವರ ರಾವ್); ೭೨.ಪದ್ಮಭೂಷಣ ಡಾ.ಬಿ.ಎಂ. ಹೆಗ್ಡೆ (ಲೇ: ಅಡ್ದೂರು ಕೃಷ್ಣ ರಾವ್);೭೩. ಸಮಾಜಮುಖಿ ಚಿಂತಕ ಡಾ.ಏರ್ಯ ಲಕ್ಷ್ಮೀನಾರಾಯಣ ಆಳ್ವ (ಲೇ: ಡಾ. ಪಾದೇಕಲ್ಲು ವಿಷ್ಣು ಭಟ್ಟ);೭೪. ಯಕ್ಷ ಕಿನ್ನರ ಐರೋಡಿ ಗೋವಿಂದಪ್ಪ (ಲೇ: ನರೇಂದ್ರ ಕುಮಾರ್ ಕೋಟ);೭೫. ಕಲಾಕೋವಿದ ಮೋಹನ ಸೋನಾ (ಲೇ: ಮೌಲ್ಯ ಜೀವನರಾಂ); ೭೬. ನವೋದಯ ಕಾವ್ಯದ ಶಕಪುರುಷ ಪಂಜೆ ಮಂಗೇಶರಾಯರು (ಲೇ:ಡಾ. ವಾಮನ ನಂದಾವರ); ೭೭. ಪಂಪ ಪ್ರಶಸ್ತಿ ಪುರಸ್ಕೃತ ವಿದ್ವಾಂಸ ಸೇಡಿಯಾಪು ಕೃಷ್ಣ ಭಟ್ಟ (ಲೇ: ಪಿ.ಎನ್. ಅಂಬಿಕಾ); ೭೮. ನವೋದಯದ ಕವಿಪುಂಗವ ಅಮ್ಮೆಂಬಳ ಶಂಕರ ನಾರಾಯಣ ನಾವಡ (ಲೇ: ವಿ.ಗ. ನಾಯಕ); ೭೯. ವಾಸ್ತವವಾದಿ ಕಾದಂಬರಿಕಾರ ವ್ಯಾಸರಾಯ ಬಲ್ಲಾಳ (ಲೇ: ಡಾ. ಜಿ.ಎನ್. ಉಪಾಧ್ಯ);೮೦. ಕಾಸರಗೋಡಿನ ಕಣ್ಮಣಿ ಕಳ್ಳಿಗೆ ಮಹಾಬಲ ಭಂಡಾರಿ (ಲೇ: ಡಾ.ಪಿ.ಶ್ರೀಕೃಷ್ಣ ಭಟ್); ೮೧. ಬರಹಗಾರರ ಬಳಗದ ಬೆಳದಿಂಗಳು–ಚಂದ್ರರಾಜ ಶೆಟ್ಟಿ (ಲೇ: ಡಾ.ಎಸ್.ಪಿ. ಪದ್ಮಪ್ರಸಾದ್); ೮೨. ಕನ್ನಡದ ಕಿಂಕರ ಕೀಕಾನ ರಾಮಚಂದ್ರ (ಲೇ: ಕಲ್ಲೂರು ನಾಗೇಶ); ೮೩. ಪಂಡಿತ ಪೆರ್ಲ ಕೃಷ್ಣ ಭಟ್ಟ (ಲೇ: ಡಾ. ಎಂ.ಪ್ರಭಾಕರ ಜೋಶಿ); ೮೪. ಭಾಷಾವಿಜ್ಞಾನಿ ಪ್ರೊ. ಕೋಡಿ ಕುಶಾಲಪ್ಪ ಗೌಡ (ಲೇ: ಡಾ. ಶಿವಕುಮಾರ ಭರಣ್ಯ); ೮೫. ಅಪೂರ್ವ ಪತ್ರಕರ್ತ ಎಂ.ವಿ. ಕಾಮತ್ (ಲೇ: ಅಂಶುಮಾಲಿ); ೮೬. ರಂಗಸ್ಥಳದ ಬೆಳಕು ಡಾ.ಕೋಳ್ಯೂರು ರಾಮಚಂದ್ರ ರಾವ್ (ಲೇ: ಡಾ. ಕೆ. ಎಂ. ರಾಘವ ನಂಬಿಯಾರ್); ೮೭.ಅಪರೂಪದ ಸಮಾಜಸೇವಕ ಪಿ. ರವೀಂದ್ರ ನಾಯಕ್ (ಲೇ: ಕೆ. ತಾರಾ ಭಟ್); ೮೮. ವಿದ್ವತ್ತೆಗೆ ರೂಪಕ ಕಡವ ಶಂಭುಶರ್ಮ (ಲೇ: ಡಾ. ಶ್ರೀಧರ ಹೆಚ್.ಜಿ.); ೮೯. ಕನೀಯಕವಿ ಪ್ರೊ. ಟಿ.ಕೇಶವ ಭಟ್ಟ (ಲೇ: ಡಾ.ತಾಳ್ತಜೆ ವಸಂತಕುಮಾರ);೯೦. ಸಮಾನತೆಯ ಸಂತ ಬಿ.ವಿ. ಕಕ್ಕಿಲ್ಲಾಯ (ಲೇ: ಡಾ. ನಿತ್ಯಾನಂದ ಬಿ. ಶೆಟ್ಟಿ); ೯೧. ವಾಸ್ತವವಾದದ ಸಾಹಿತಿ ರಾಮಚಂದ್ರ ಉಚ್ಚಿಲ (ಲೇ: ಶ್ಯಾಮಲಾ ಮಾಧವ); ೯೨. ಉದ್ಯಮರಂಗದ ಆದ್ಯಪ್ರವರ್ತಕ ವಿ.ಎಸ್. ಕುಡ್ವ (ಲೇ: ಬಿ.ಸೀತಾರಾಮ ಭಟ್); ೯೩. ಮಾತಿನ ಮಹಾಕವಿ ಶೇಣಿ ಗೋಪಾಲಕೃಷ್ಣ ಭಟ್ಟ (ಲೇ: ಮೂಡಂಬೈಲು ಸಿ. ಗೋಪಾಲಕೃಷ್ಣ ಶಾಸ್ತ್ರಿ); ೯೪. ಸಾಧನೆಯ ಬೆಳಕು ನಾವರಿಯದ ದೇರಾಜೆ (ಲೇ: ಪ್ರಸಾದ ರಕ್ಷಿದಿ); ೯೫. ಜೇನುಕೃಷಿ ತಜ್ಞ–ಹವ್ಯಾಸಗಳ ಹರಿಕಾರ ಪೈಲೂರು ಲಕ್ಷ್ಮೀನಾರಾಯಣ ರಾವ್ (ಲೇ:ಜಿ.ಎಸ್. ಉಬರಡ್ಕ); ೯೬. ಜಾದೂ ಲೋಕದ ಮಾಂತ್ರಿಕ ಪ್ರೊ. ಶಂಕರ್ (ಲೇ: ಪ. ರಾಮಕೃಷ್ಣ ಶಾಸ್ತ್ರಿ);೯೭. ಕೋಶ ಸಾಮ್ರಾಜ್ಯದ ಈಶ ಯಜ್ಞನಾರಾಯಣ ಉಡುಪ (ಲೇ: ನಾರಾಯಣಿ ದಾಮೋದರ್);೯೮. ಕಲಾಲೋಕದ ಚಿಂತಕ ಎ. ಈಶ್ವರಯ್ಯ (ಲೇ: ನಿತ್ಯಾನಂದ ಪಡ್ರೆ); ೯೯. ಶಿಕ್ಷಣ ಸಿದ್ಧಾಂತಿ ಡಾ. ಎನ್. ಸುಕುಮಾರ ಗೌಡ (ಲೇ: ಕೆ.ಆರ್.

ವಿದ್ಯಾಧರ); ೧೦೦. ಸಂಸ್ಕೃತಿ ಪ್ರೀತಿಯ ಕುಂಭ ಬಾಬು ಶಿವ ಪೂಜಾರಿ (ಲೇ: ವಿ.ಗ.ನಾಯಕ);೧೦೧. ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಗಾಂಧೀವಾದಿ ಬಂಟಕಲ್ಲು ಲಕ್ಷ್ಮೀನಾರಾಯಣ ಶರ್ಮ (ಲೇ:ಬಿ.ಸೀತಾರಾಮ ಭಟ್); ೧೦೨. ಯಕ್ಷಗಾನ ಆಚಾರ್ಯ ಅರ್ಕುಳ ಸುಬ್ರಾಯ ಆಚಾರ್ಯ(ಲೇ:ಕೆ.ಉಮೇಶ ಆಚಾರ್ಯ ಗೇರುಕಟ್ಟೆ); ೧೦೩.ಬಹುಮುಖ ಪ್ರತಿಭೆಯ ಭೀಷ್ಮ ತುದಿಯಡ್ಕ ವಿಷ್ಣ್ವಯ್ಯ (ಲೇ:ಸರೋಜಿನಿ ನಾಗಪ್ಪಯ್ಯ ಕಾಂತಾವರ); ೧೦೪. ಧಾರವಾಡದಲ್ಲರಳಿದ ಮಂಗಳೂರು ಮಲ್ಲಿಗೆ ಗೀತಾ ಕುಲಕರ್ಣಿ (ಲೇ: ರಂಜನಾ ನಾಯಕ); ೧೦೫. ಕಾಸರಗೋಡಿನ ಶ್ರೀಗಂಧ ಬೇವಿಂಜೆ ಶ್ರೀಧರ ಕಕ್ಕಿಲ್ಲಾಯ (ಲೇ: ಶ್ಯಾಮಲಾಕುಮಾರಿ ಬೇವಿಂಜೆ); ೧೦೬. ಯಕ್ಷಕಲಾ ಕಲ್ಪ ಕುರಿಯ ವಿಠಲ ಶಾಸ್ತ್ರಿ (ಲೇ: ಸೇರಾಜೆ ಗೋಪಾಲಕೃಷ್ಣ ಭಟ್ಟ); ೧೦೭.ತುಳುವ ಕಲಾತಿಲಕ ಪಿ.ಎನ್.ಆಚಾರ್ಯ (ಲೇ:ಶೇಖರ ಅಜೆಕಾರು); ೧೦೮.ಗಡಿನಾಡಿನ ಬಾನಾಡಿ ಪ್ರತಿಭೆ ಕೆ.ವಿ.ತಿರುಮಲೇಶ್ (ಲೇ:ಡಾ. ಮಹೇಶ್ವರಿ ಯು.); ೧೦೯. ವಿಜಯಾ ಬ್ಯಾಂಕಿನ ವಿಜಯಶಿಲ್ಪಿ ಸುಂದರರಾಮ ಶೆಟ್ಟಿ (ಲೇ: ಎನ್.ಪಿ. ಶೆಟ್ಟಿ); ೧೧೦.ಹೊಸಗನ್ನಡದ ಮುಂಗೋಳಿ ಕವಿವರ ಮುದ್ದಣ (ಲೇ: ಪ್ರೊ.ಎಂ. ರಾಜಗೋಪಾಲ ಆಚಾರ್ಯ); ೧೧೧. ಕನ್ನಡದ ಕಾಳಿದಾಸ ಪ್ರೊ.ಎಸ್.ವಿ. ಪರಮೇಶ್ವರ ಭಟ್ಟ (ಲೇ:ಡಾ. ಹೆಚ್.ಆರ್. ವಿಶ್ವಾಸ); ೧೧೨. ಶಿಕ್ಷಣ ಶಾಸ್ತ್ರದ ಗುರುವರೇಣ್ಯ ಪ್ರೊ.ಕೆ.ಆರ್. ಹಂದೆ (ಲೇ: ರಾಘವೇಂದ್ರ ಹೇರ್ಳೆ, ಗಿಳಿಯಾರು); ೧೧೩. ಸಾರಸ್ವತ ಲೋಕದ ಸ್ವಯಂಸೇವಕಿ ಲಕ್ಷ್ಮಿ ಕುಂಜತ್ತೂರು (ಲೇ: ರಾಧಾಕೃಷ್ಣ ಕೆ. ಉಳಿಯತ್ತಡ್ಕ); ೧೧೪. ಕರ್ಮಯೋಗಿ ಮಹಾತ್ಯಾಗಿ ಪಂಜಜೆ ಶಂಕರ ಭಟ್ಟ (ಲೇ: ಅಂಶುಮಾಲಿ); ೧೧೫. ಸಜ್ಜನ ರಾಜಕಾರಣಿ ಎಸ್.ಸುಬ್ಬಯ್ಯ ನ್ಯಾಕ್ (ಲೇ: ಬಿ.ಐತಪ್ಪ ನ್ಯಾಕ್) ೧೧೬. ಜನಸೇವಕ ಅಮ್ಮೆಂಬಳ ಆನಂದ (ಲೇ:ವಿಷ್ಣು ನಾಯ್ಕ); ೧೧೭.ಜಿಜ್ಞಾಸೆಯ ಕಡಲು ಲಕ್ಷ್ಮೀಶ ತೋಳ್ಪಾಡಿ (ಲೇ:ಗಂಗಾಧರ ಬೆಳ್ಳಾರೆ); ೧೧೮. ಪುರಾಣಕೋಶ ವಿಹಾರಿ-ಅರ್ಥಧಾರಿ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ (ಲೇ: ರಾಧಾಕೃಷ್ಣ ಕಲ್ಚಾರ್); ೧೧೯. ಮ್ಯಾಗ್ಸೇಸೆ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಡಾ.ಹರೀಶ್ ಹಂದೆ (ಲೇ:ಮೋಹನ ಭಾಸ್ಕರ ಹೆಗ್ಡೆ); ೧೨೦.ಸಮಗ್ರ ಸಾಹಿತ್ಯ ಸಾಧಕ ರಾಮದಾಸ (ಲೇ: ಡಾ.ಕಾತ್ಯಾಯಿನಿ ಕುಂಜಿಬೆಟ್ಟು); ೧೨೧. ಪುತ್ತೂರಿನ ವೃತ್ತಾಂತಕಾರ ಪ್ರೊ.ವಿ.ಬಿ.ಅರ್ತಿಕಜೆ (ಲೇ: ಡಾ.ಸೀತಾಲಕ್ಷ್ಮೀ ಕರ್ಕಿಕೋಡಿ); ೧೨೨.ನಾದವೈಭವಂ ಉಡುಪಿ ವಾಸುದೇವ ಭಟ್(ಲೇ: ಅಂಶುಮಾಲಿ); ೧೨೩.ದಕ್ಷಿಣ ಕನ್ನಡ ನವೋದಯದ ಕಣ್ವ: ಬೆನಗಲ್ ರಾಮರಾವ್(ಲೇ:ನಂದಳಿಕೆ ಬಾಲಚಂದ್ರರಾವ್); ೧೨೪.ದಲಿತೋದ್ಧಾರದ ಗುರು: ಕುದ್ಮಲ್ ರಂಗರಾವ್ (ಲೇ:ಲಕ್ಷ್ಮಣ ಕೊಡಸೆ);೧೨೫.ಶಿಕ್ಷಣತಜ್ಞ ಮತ್ತು ಅರ್ಥವಂತ: ಅಮ್ಮೆಂಬಳ ಸುಬ್ಬರಾವ್ ಪೈ(ಲೇ:ಗಣೇಶ ಕಾಮತ್ ಮೂಡುಬಿದಿರೆ); ೧೨೬.ಮುಕ್ತ ಛಂದದ:ಮೂಕಜ್ಜಿ (ಲೇ:ಡಾ.ಗಾಯತ್ರೀ ವಿ.ನಾವಡ); ೧೨೭. ಭಾಗವತರ ಭಾಗವತ:ಹಿರಿಯ ಬಲಿಪ ನಾರಾಯಣ ಭಾಗವತ (ಲೇ:ಡಾ. ರಾಧಾಕೃಷ್ಣ ಬೆಳ್ಳೂರು); ೧೨೮. ಕನ್ನಡದ ಕಲ್ಹಣ: ನೀರ್ಪಾಜೆ ಭೀಮ ಭಟ್ಟ (ಲೇ: ಹಿರಣ್ಯ ವೆಂಕಟೇಶ್ವರ ಭಟ್); ೧೨೯. ಬಹುಮುಖೀ ಸಂಶೋಧಕ : ಪ್ರೊ.ಎ.ವಿ.ನಾವಡ (ಲೇ: ಡಾ.ಕಬ್ಬಿನಾಲೆ ವಸಂತ ಭಾರದ್ವಾಜ); ೧೩೦.ಪ್ರಗಲ್ಭ ಚಿಂತಕ, ಅರ್ಥವಿಹಾರಿ:ಡಾ.ಎಂ.ಪ್ರಭಾಕರ ಜೋಶಿ(ಲೇ:ಚಂದ್ರಶೇಖರ ಮಂಡೆಕೋಲು); ೧೩೧. ಸಂಗೀತ ರಸವಿಹಾರಿ: ಪಿ.ಕಾಳಿಂಗರಾವ್ (ಲೇ:ಹೆಚ್.ಎಂ. ನಾಗರಾಜರಾವ್ ಕಲ್ಕಟ್ಟೆ); ೧೩೨. ಗಾನಯೋಗಿ : ಅಜ್ಜನಗದ್ದೆ ಗಣಪಯ್ಯ ಭಾಗವತ (ಲೇ:ಜಿ.ಎಸ್.ಉಬರಡ್ಕ); ೧೩೩. ಕಲಾವಸಂತದ ಮಾಮರ: ದೇವುದಾಸ ಶೆಟ್ಟಿ (ಲೇ:ಡಾ. ವಿಶ್ವನಾಥ ಕಾರ್ನಾಡ್); ೧೩೪. ಮೂರನೇ ಕಣ್ಣು : ಶಿವಸುಬ್ರಹ್ಮಣ್ಯ ಕೆ. (ಲೇ: ಡಾ. ಪ್ರದೀಪ್‌ಕುಮಾರ್ ಹೆಬ್ರಿ); ೧೩೫. ಪ್ರಗತಿಪಥ ತೋರಿದ ಸೃಜನಶೀಲ ಚಿಂತಕ: ನಿರಂಜನ (ಲೇ:ಡಾ.ಧನಂಜಯ ಕುಂಬ್ಳೆ); ೧೩೬.ಅನನ್ಯರಂಗಕರ್ಮಿ, ಅಪೂರ್ವ ಪುಸ್ತಕ ಪ್ರೇಮಿ : ಶ್ರೀಪತಿ ಮಂಜನಬೈಲು (ಲೇ: ಗೋಪಾಲ ವಾಜಪೇಯಿ); ೧೩೭. ಸಾಂಸ್ಕೃತಿಕ ರಾಯಭಾರಿ: ಪ್ರೊ. ಶ್ರೀಕೃಷ್ಣ ಭಟ್ ಅರ್ತಿಕಜೆ (ಡಾ. ವಸಂತ ಕುಮಾರ್); ೧೩೮. ರೈತಬಂಧು : ಶಿವಪುರ ಸುಬ್ಬಣ್ಣ ನಾಯಕ್ (ಡಾ. ವಸಂತ ಕುಮಾರ್); ೧೩೯ ಯಕ್ಷಗಾನ ಗುರುಕುಲ ರೂವಾರಿ : ಕವಿ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ (ಚಂದ್ರಶೇಖರ ಮಂಡೆಕೋಲು); ೧೪೦. ಕವಿಹೃದಯದ ಸಾಂಸ್ಕೃತಿಕ ಸಂತ : ಉಪ್ಪುಂದ ಚಂದ್ರಶೇಖರ ಹೊಳ್ಳ (ಡಾ. ಕನರಾಡಿ ವಾದಿರಾಜ ಭಟ್ಟ); ೧೪೧. ಕರಾವಳಿಯ ರಾಜಕೀಯ ಮುತ್ಸದ್ಧಿ: ಉರಿಮಜಲು ಕೆ. ರಾಮ ಭಟ್ (ಲೇ: ಡಾ. ಹೆಚ್.ಜಿ. ಶ್ರೀಧರ್); ೧೪೨. ಯಕ್ಷಗಾನದ ರಸಿಕರತ್ನ : ವಿಟ್ಲ ಗೋಪಾಲಕೃಷ್ಣ ಜೋಶಿ (ಲೇ: ಡಾ. ವಸಂತ ಕುಮಾರ್); ೧೪೩. ನವೋದಯ ಸಾಹಿತ್ಯದ ಕಲ್ಪತರು: ಎಮ್. ಎನ್. ಕಾಮತ್ (ಲೇ: ಬಿ. ಲೀಲಾ ಭಟ್); ೧೪೪. ಸಮನ್ವಯ ಸಾಹಿತ್ಯದ ಲೇಖಕಿ: ಎ.ಪಿ.ಮಾಲತಿ (ಲೇ: ಡಾ. ಶೈಲಾ ಯು.) ೧೪೫); ಜೈನಮಹಿಳೆ ಕಾವ್ಯನಾಮದ ಕವಯಿತ್ರಿ: ನೆಲ್ಲಿಕಾರು ರಾಧಮ್ಮ (ಲೇ: ರಾಜ್ಯಶ್ರೀ ಎಚ್.ಎನ್.); ೧೪೬) ಕನ್ಯಾನದ ಭಾರತ ಸೇವಾಶ್ರಮದ ಸ್ಥಾಪಕ: ಧೀರೇಂದ್ರನಾಥ ಭಟ್ಟಾಚಾರ್ಯ (ಲೇ: ವಿಜಯಾ ಶೆಟ್ಟಿ

ಸಾಲೆತ್ತೂರು); ೧೪೭. ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ : ಬಿ.ಐತ್ತಪ್ಪ ನಾಯ್ಕ (ಲೇ: ಪುಷ್ಪಲತಾ ಎಂ.); ೧೪೮. ಮಹಾಕಾವ್ಯಗಳ ಕವಿ: ಡಾ. ಪ್ರದೀಪ್ ಕುಮಾರ್ ಹೆಬ್ರಿ (ಲೇ: ದೀಪಾ ಫಡ್ಕೆ); ೧೪೯. ಐತಿಹ್ಯ ಕಥೆಗಳ ರಾಜ: ಬೇಕಲ ರಾಮನಾಯಕ (ಲೇ: ಎ.ನರಸಿಂಹ ಭಟ್, ಕಾಸರಗೋಡು); ೧೫೦. ಹೊರನಾಡ ಕನ್ನಡ ಸೇನಾನಿ : ಹೆಚ್.ಬಿ.ಎಲ್. ರಾವ್ (ಲೇ: ಶ್ರೀನಿವಾಸ ಜೋಕಟ್ಟೆ); ೧೫೧. ಕರಾವಳಿ ಕರ್ನಾಟಕದಲ್ಲಿ ಬಾಸೆಲ್ ಮಿಷನ್ (ಲೇ: ಡಾ. ಪೀಟರ್ ವಿಲ್ಸನ್ ಪ್ರಭಾಕರ್); ೧೫೨. ವಿದ್ವತ್‌ಪ್ರಭೆಯ ಪ್ರೊ. ಪದ್ಮನಾಭ ಎಸ್.ಜೈನಿ (ಲೇ: ನಾಡೋಜ ಪ್ರೊ. ಕಮಲಾ ಹಂಪನಾ); ೧೫೩. ರಾವ್‌ಬಹದ್ದೂರ್ ನಿಟ್ಟೆ ಮಹಾಲಿಂಗ ಅಡ್ಯಂತಾಯ (ಲೇ: ಯಾಜಿ ಡಾ.ಎಚ್. ದಿವಾಕರ್ ಭಟ್); ೧೫೪. ದೇಶಭಕ್ತ, ಸಮಾಜ ಸುಧಾರಕ ಮುಲ್ಕಿ ರಾಮಕೃಷ್ಣ ಪೂಂಜಾ (ಲೇ:ಎನ್.ಪಿ.ಶೆಟ್ಟಿ); ೧೫೫. ವಿದ್ವಾಂಸ, ಮಾರ್ಕ್ಸ್‌ವಾದಿ ಚಿಂತಕ ಎಸ್. ರಾಮಚಂದ್ರ ಭಟ್ (ಲೇ: ಸಿ.ಆರ್.ಕೃಷ್ಣರಾವ್); ೧೫೬. ಮದ್ದಳೆ ಮಾಂತ್ರಿಕ ಹಿರಿಯಡ್ಕ ಗೋಪಾಲರಾವ್ (ಲೇ: ಡಾ. ವಸಂತ ಕುಮಾರ್ ಉಡುಪಿ); ೧೫೭. ಶಿಕ್ಷಣತಜ್ಞ ಸಿ.ಎಚ್.ಕೃಷ್ಣಶಾಸ್ತ್ರಿ ಬಾಳಿಲ (ಲೇ: ಕೆ.ವಿ.ಶರ್ಮ ಬಾಳಿಲ); ೧೫೮. ಗೀತಾಸಾರದ ಕವಿ ಬಡೆಕ್ಕಿಲ ವೆಂಕಟ್ರಮಣ ಭಟ್ಟ (ಲೇ: ಡಾ. ಹೆಚ್.ಜಿ.ಶ್ರೀಧರ್); ೧೫೯. ಸಮಾಜಮುಖಿ ಚಿಂತಕ ಸಾಹುಕಾರ ಉಪ್ಪಿನಂಗಡಿ ವೆಂಕಟೇಶ ಭಟ್ (ಲೇ: ಬಿ.ಐತ್ತಪ್ಪ ನಾಯ್ಕ); ೧೬೦. ಸ್ವಾಭಿಮಾನದ ಪತ್ರಕರ್ತ ಪದ್ಯಾಣ ಗೋಪಾಲಕೃಷ್ಣ (ಲೇ: ಸೇರಾಜೆ ಸೀತಾರಾಮ ಭಟ್ಟ) ೧೬೧. ಆದರ್ಶಗುರು, ಜಾನಪದ ವಿದ್ವಾಂಸ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ (ಲೇ: ಡಾ. ವಸಂತಕುಮಾರ ಪೆರ್ಲ); ೧೬೨. ಯಕ್ಷಗಾನದ ಸವ್ಯಸಾಚಿ ಅಡೂರು ಶ್ರೀಧರರಾವ್ (ಲೇ: ಸರೋಜಿನಿ ನಾಗಪ್ಪಯ್ಯ ಕಾಂತಾವರ);

೧೬೩. ಬದುಕಿನ ಸತ್ಯವನ್ನರಸಿದ ಕತೆಗಾರ **ಬಾಗಲೋಡಿ ದೇವರಾಯ** (ಲೇ: ಪ್ರೊ. ಬಿ. ಸುರೇಂದ್ರ ರಾವ್);
೧೬೪. ಯಕ್ಷಗಾನ ಕಲಾತಪಸ್ವಿ **ಮಾಂಬಾಡಿ ನಾರಾಯಣ ಭಾಗವತರು** (ಲೇ: ಡಾ. ಪಾದೇಕಲ್ಲು ವಿಷ್ಣು ಭಟ್);
೧೬೫. ಸಾರಸ್ವತ ಲೋಕದ ಅಮೌಲ್ಯ ನಿಧಿ **ರಸಿಕ ಪುತ್ತಿಗೆ** (ಲೇ: ಡಾ. ವಿ. ರಂಗನಾಥ್, ಮೈಸೂರು);
೧೬೬. ವಿಶಿಷ್ಟ ಪ್ರತಿಭೆಯ ಕತೆಗಾರ **ಎಂ. ವ್ಯಾಸ** (ಲೇ: ಡಾ. ವರದರಾಜ ಚಂದ್ರಗಿರಿ);
೧೬೭. ಗಡಿನಾಡ ದೀಪ **ಉಬ್ರಂಗಳ ಪದ್ಮನಾಭ ಕುಣಿಕುಳ್ಳಾಯ** (ಲೇ: ಡಾ. ರಾಧಾಕೃಷ್ಣ ಬೆಳ್ಳೂರು);
೧೬೮. ಉಭಯಭಾಷಾ ಸಾಹಿತಿ, ಶಿಕ್ಷಣತಜ್ಞ **ಪ್ರೊ.ಕೆ.ಈ.ರಾಧಾಕೃಷ್ಣ** (ಲೇ: ಸತ್ಯಮಂಗಲ ಮಹಾದೇವ);
೧೬೯. ಹಳ್ಳಿಗರ ಸಂತೆಯಲ್ಲಿ 'ಸಂತ' ವೈದ್ಯ **ಡಾ. ಎಂ.ಬಿ.ಮರಕಿಣಿ** (ಲೇ: ವಿಶ್ವ ಮರಕಿಣಿ);
೧೭೦. ಬಹುಮುಖ ಅಭಿವೃದ್ಧಿಯ ಕನಸುಗಾರ **ಯು.ಎಸ್. ನಾಯಕ್**
(ಲೇ: ಡಾ. ವಸಂತ್‌ಕುಮಾರ್ ಉಡುಪಿ);
೧೭೧. ಕವಿ, ಚಿಂತಕ, ವಾಸ್ತುವಿಜ್ಞಾನಿ **ಅಂಬಲಪಾಡಿ ಶ್ರೀಪತಿ ಆಚಾರ್ಯ** (ಲೇ: ಅಂಶುಮಾಲಿ);
೧೭೨. ಶಿಕ್ಷಣ ಸಾಹಿತ್ಯ ಕಲಾಪೋಷಕ ಜನನಾಯಕ **ಕಂಬದಕೋಣೆ ಆರ್.ಕೆ.ಸಂಜೀವ ರಾವ್**
(ಲೇ: ಉಪ್ಪುಂದ ಚಂದ್ರಶೇಖರ ಹೊಳ್ಳ);
೧೭೩. ಹಿಂದೂಸ್ತಾನಿ ಸಂಗೀತದ ಗುರುದೇವ **ಪಂಡಿತ್ ಜಿ. ಮಾಧವ ಭಟ್** (ರವಿಕಿರಣ ಮಣಿಪಾಲ);
೧೭೪. ಜಾನಪದ ರಾಜಹಂಸ ಬಹುಭಾಷಾ ವಿದ್ವಾಂಸ **ಪುಂಡೂರು ವೆಂಕಟರಾಜ ಪುಣಿಂಚತ್ತಾಯ**
(ಡಾ. ಧನಂಜಯ ಕುಂಬ್ಳೆ);
೧೭೫. ಮುಂಬಯಿ ಕತೆಗಾರ ಅನುವಾದಕ ಚಿಂತಕ **ಡಾ. ವಿಶ್ವನಾಥ ಕಾರ್ನಾಡು**
(ಡಾ. ಭರತ್‌ಕುಮಾರ್ ಪೊಲಿಪು);



ಅಡ್ಯನಡ್ಕದ **ಡಾ. ವಿಶ್ವೇಶ್ವರ ವಿ.ಕೆ.** ಇವರು ವೃತ್ತಿಯಲ್ಲಿ ವೈದ್ಯರು, ಪ್ರವೃತ್ತಿಯಲ್ಲಿ ಸಾಹಿತಿ, ಸಂಸ್ಕೃತಿ ಚಿಂತಕರು. ಮೈಸೂರ್ ಮೆಡಿಕಲ್ ಕಾಲೇಜಿನಲ್ಲಿ ಅಧ್ಯಯನ ನಡೆಸಿ ಎಂ.ಬಿ.ಬಿ.ಎಸ್. ಪದವಿಯನ್ನು ಪಡೆದು ಕಳೆದ ಹದಿನೆಂಟು ವರ್ಷಗಳಿಂದ ಸರಕಾರಿ ವೈದ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಿಂದೆ ಪೆರುವಾಯಿಯಲ್ಲಿ ಕರ್ತವ್ಯ ನಿರ್ವಹಿಸಿ ಈಗ ಕಲ್ಲಡ್ಕದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ. ವಿಶ್ವೇಶ್ವರ ವಿ.ಕೆ. ಇವರು 'ವಿಶ್ವ ಮರಕಿಣಿ' ಎಂಬ ಕಾವ್ಯನಾಮದಲ್ಲಿ ಹಲವಾರು ವೈದ್ಯಕೀಯ ಹಾಗೂ ಸಾಹಿತ್ಯಿಕ ಲೇಖನಗಳನ್ನು, ಕತೆ ಹಾಗೂ ಕವನಗಳನ್ನು ಕನ್ನಡದ ಬಹುತೇಕ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಜಿಲ್ಲಾ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಕವಿತಾವಾಚನ ಮಾಡಿದ್ದಾರೆ. ಇವರ ಪ್ರಕಟಿತ ಕೃತಿಗಳು: 'ಸ್ಮೃತಿ' (ಪ್ರಕಾಶನವೊಂದರ ಅಧ್ಯಯನ), 'ಹೂಗು ತೈಂದೆ' (ಹವ್ಯಕ ಭಾಷಾ ಕವನ ಸಂಕಲನ), 'ನಾವಿಕ' (ವಿ.ಗ. ನಾಯಕ ಅಭಿನಂದನ ಗ್ರಂಥ ಸಂಪಾದನೆ) ಮತ್ತು 'ಕರ್ನಾಟಕದ ಹಾನಿಮನ್ ಡಾ. ವಸಂತಕುಮಾರ್ ರಾವ್' (ವ್ಯಕ್ತಿ ಚಿತ್ರ–ನಾಡಿಗೆ ನಮಸ್ಕಾರ ಮಾಲೆ). ಆಕಾಶವಾಣಿಯಲ್ಲಿ ಆರೋಗ್ಯ ವಿಚಾರವಾಗಿ ಹಲವಾರು ಭಾಷಣಗಳನ್ನು ಪ್ರಸಾರಮಾಡಿರುವ ಡಾ. ವಿಶ್ವೇಶ್ವರ ವಿ.ಕೆ. ಅವರು ಸಂಪನ್ಮೂಲ ವ್ಯಕ್ತಿಯಾಗಿ ಸಮುದಾಯ ಆರೋಗ್ಯ ಜಾಗೃತಿಗಾಗಿ ದುಡಿಯುತ್ತಿದ್ದಾರೆ.

ವೈದ್ಯರಾಗಿ ಸೇವೆ ಸಲ್ಲಿಸುವುದರ ಜತೆಗೆ ಸಾಮಾಜಿಕ ಜಾಗೃತಿಯನ್ನು ಮೂಡಿಸಿ, ಸಮಾಜಸೇವೆಯನ್ನು ಮಾಡಿದ; ಸಮಾಜ ಸೇವೆ ಮತ್ತು ವೈದ್ಯವೃತ್ತಿ ಎರಡೂ ಒಂದೇ ಎನ್ನುವಂತೆ ಬದುಕಿದ ಡಾ.ಎಂ.ಬಿ. ಮರಕ್ಕಿಣಿ ಅವರ ಕುರಿತಾದ ಈ ಅಪೂರ್ವ ಕೃತಿಯನ್ನು ಡಾ. ವಿಶ್ವೇಶ್ವರ ವಿ.ಕೆ. ಅವರು ನಾಡಿಗೆ ನಮಸ್ಕಾರ ಮಾಲೆಗಾಗಿ ಬರೆದುಕೊಟ್ಟಿದ್ದಾರೆ.

ಡಾ. ಬಿ.ಜನಾರ್ದನ ಭಟ್



ಕನ್ನಡ ಭವನ, ಕಾಂತಾವರ